# Current affairs of June 2020 from KPSC Vaani



# Current affairs of June 2020 from KPSC Vaani

### 01 06 2020 ಜೂ.1 ಅಂತಾರಾಷ್ಟ್ರೀಯ ಹಾಲು ದಿನ: ಹಾಲು ಉತ್ಪಾದನೆಯಲ್ಲಿ ಭಾರತ ವಿಶ್ವದಲ್ಲೇ ಅಗ್ರಗಣ್ಯ




ವಿಶ್ವದಲ್ಲೇ ಹಾಲು ಉತ್ಪಾದನೆಯಲ್ಲಿ ಭಾರತ ಮೊದಲ ಸ್ಥಾನ ಹೊಂದಿದ್ದು, ಕರ್ನಾಟಕದಲ್ಲಿ 50 ಲಕ್ಷಕ್ಕೂ ಹೆಚ್ಚು ಜನ ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಹಾಗೂ ಇವರ ಪೈಕಿ ಸುಮಾರು 25 ಲಕ್ಷ ಜನ ಹೈನುಗಾರಿಕೆಯನ್ನು ಉದ್ಯಮವನ್ನಾಗಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಪ್ರತಿವರ್ಷ ಜೂ.1 ರಂದು ಅಂತಾರಾಷ್ಟ್ರೀಯ ಹಾಲು ದಿನವನ್ನಾಗಿ ಆಚರಣೆ ಮಾಡಲಾಗುತ್ತಿದ್ದು, ಭಾರತದಲ್ಲಿ 7 ಕೋಟಿಗೂ ಅಧಿಕ ಜನ ಇದರ ಮೇಲೆ ಅವಲಂಬಿತರಾಗಿದ್ದಾರೆ. ಆಹಾರ ಪದ್ಧತಿಯಲ್ಲಿ ಹಾಲಿನ ಸದ್ಬಳಕೆಗೆ ಉತ್ತಮಪಡಿಸಲು ಕ್ರಮಕೈಗೊಳ್ಳುವ ಉದ್ದೇಶದಿಂದ ಪ್ರತಿ ವರ್ಷ ಜೂನ್ 1 ರಂದು ವಿಶ್ವ ಹಾಲು ದಿನವನ್ನಾಗಿ ಆಹಾರ ಮತ್ತು ಕೃಷಿ ಸಂಸ್ಥೆ ಆಚರಿಸಿಕೊಂಡು ಬಂದಿದೆ. ಹಾಗೆಯೇ ವಿಶ್ವದ ನಾನಾ ರಾಷ್ಟ್ರಗಳು ಹಾಲು ದಿನ ಆಚರಿಸುತ್ತಿವೆ. ಜೊತೆಗೆ ರಾಜ್ಯದ ಹಾಲು ಒಕ್ಕೂಟವು ಕೂಡ ಈ ದಿನವನ್ನು ಆಚರಿಸುತ್ತಿದೆ.

### 01 06 2020 'ಫಾಲ್ಕನ್ 9' ರಾಕೆಟ್ ಉಡಾವಣೆ: ನಿಗದಿತ ಕಕ್ಷೆ ಸೇರಿದ ನಾಸಾದ ಗಗನಯಾತ್ರಿಗಳು



ವಾಷಿಂಗ್ಟನ್ : 'ಸ್ಪೇಸ್ ಎಕ್ಸ್' ಕಂಪನಿ ನಾಸಾದ ಇಬ್ಬರು ಗಗನಯಾತ್ರಿಗಳನ್ನು ನಿಗದಿತ ಕಕ್ಷೆಗೆ ಸೇರಿಸುವಲ್ಲಿ ಯಶಸ್ವಿಯಾಗಿದೆ. ಈ ಸಂಸ್ಥೆಯು ಫ್ಲಾರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ 'ಫಾಲ್ಕನ್ 9' ರಾಕೆಟ್ ಉಡಾವಣೆಗೊಳಿಸುವ ಮೂಲಕ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಗಗನಯಾತ್ರಿಗಳನ್ನು ಕಳುಹಿಸಿದೆ. ಈ ಮೂಲಕ ಈ ಸಾಧನೆಗೈದ ಮೊದಲ ಖಾಸಗಿ ಕಂಪನಿ ಎನ್ನುವ ಹೆಗ್ಗಳಿಕೆಗೆ 'ಸ್ಪೇಸ್ ಎಕ್ಸ್' ಪಡೆಯಿತು. ಗಗನಯಾತ್ರಿಗಳಾದ ರಾಬರ್ಟ್ ಬಾಬ್ ಬೆಹ್ನಕೆನ್ (49) ಮತ್ತು ಡೌಗ್ಲಾಸ್ ಹರ್ಲಿ (53) ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ ವಿಜ್ಞಾನಿಗಳಾಗಿದ್ದಾರೆ.

# Current affairs of June 2020 from KPSC Vaani

### 01 06 2020 ಜಿ7ವಿಸ್ತರಿಸಲುಟ್ರಂಪ್ಯೋಜನೆಭಾರತಕ್ಕೂಆಹ್ವಾನ



ವಾಷಿಂಗ್ಟನ್: ಜಗತ್ತಿನ ಏಳು ಪ್ರಮುಖ ಅರ್ಥವ್ಯವಸ್ಥೆ ಹೊಂದಿದ ಜಿ7 ಗ್ರೂಪ್ ಈಗ ಹಳೆಯದಾಗಿದ್ದು,ಈಗ್ರೂಪ್ ಗೆಹೊಸತನವನ್ನುನೀಡಲುಭಾರತಸೇರಿರಷ್ಯಾ,ದಕ್ಷಿಣಕೊರಿಯಾ, ಆಸ್ಟ್ರೇಲಿಯಾ ರಾಷ್ಟ್ರಗಳನ್ನು ಸೇರಿಸೋಣ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಇದೆ ಜೂನ್ ನಲ್ಲಿ ವೈಟ್‌ಹೌಸ್‌ನಲ್ಲಿ ನಡೆಸಲು ಉದ್ದೇಶಿಸಲಾಗಿದ್ದ ಜಿ7 ರಾಷ್ಟ್ರಗಳ ಶೃಂಗವನ್ನು ಸೆಪ್ಟೆಂಬರ್ ತನಕ ಮುಂದೂಡಲಾಗಿದೆ.

### 01 06 2020 ಪ್ರಧಾನಿಮೋದಿಅವರನೂತನಜೀವನಚರಿತ್ರೆಬಿಡುಗಡೆ



ನವದೆಹಲಿ : ಪ್ರಧಾನಿ ನರೇಂದ್ರ ಮೋದಿ ಅವರ ನೂತನ ಜೀವನ ಚರಿತ್ರೆ ಬಿಡುಗಡೆ ಗೊಂಡಿದ್ದು, ಈ ಪುಸ್ತಕದಲ್ಲಿ ಮೋದಿಯವರ ಬಾಲ್ಯದ ಅಪರೂಪದ ಚಿತ್ರಗಳ ಸಂಗ್ರಹವನ್ನು ಒಳಗೊಂಡಿದೆ. " ನರೇಂದ್ರಮೋದಿ ಹರ್ಬಿಂಗರ್ ಅಫ್ ಪ್ರಾಸ್ಪರಿಟಿ ಮತ್ತು ಅಸ್ಪಲ್ ಅಫ್ ವರ್ಡ್ ಪೀಸ್" ಎಂದು ಹೆಸರು ಹೊಂದಿದ ಈ ಪುಸ್ತಕವನ್ನು ಅಂತರ್ಜಾಲದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ ಜಿ ಬಾಲಕೃಷ್ಣನ್ ಬಿಡುಗಡೆ ಮಾಡಿದರು.

* ಇಂಟರ್ನ್ಯಾಷನಲ್ ಕೌನ್ಸಿಲ್ ಆಫ್ ಜ್ಯೂರಿಸ್ಟ್ಸ್ ಅಧ್ಯಕ್ಷ ಆದಿಶ್ ಸಿ ಅಗರ್‌ವಾಲಾ ಮತ್ತು ಅಮೆರಿಕಾದ ಲೇಖಕ ಮತ್ತು ಕವಿ ಎಲಿಸಬೆತ್ ಹೊರಾನ್ ಜಂಟಿಯಾಗಿ ಈ ಪುಸ್ತಕವನ್ನು ಬರೆದಿದ್ದು, ಮೋದಿಯವರ ಆರಂಭಿಕ ಜೀವನದ ಅಪರೂಪದ ಛಾಯಾಚಿತ್ರಗಳನ್ನು ಒಳಗೊಂಡಿದೆ. ಈ ಪುಸ್ತಕವು ವಿದೇಶಿ ಹಾಗೂ ಕನ್ನಡ ಸೇರಿ ಹಲವು ಭಾರತೀಯ ಭಾಷೆಗಳಿಗಲ್ಲಿ ಲಭ್ಯವಿರಲಿದೆ.

# Current affairs of June 2020 from KPSC Vaani

## 01 06 2020 ರಾಜ್ಯದ ತಳವಾರ, ಪರಿವಾರ, ಸಿದ್ದಿ ಜನಾಂಗ ಎಸ್ ಟಿಗೆ: ಅಧಿಸೂಚನೆ ಪ್ರಕಟ



ಬೆಂಗಳೂರು: ತಳವಾರ, ಪರಿವಾರ, ಸಿದ್ದಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರಿಸುವ ಹೊಸ ಅಧಿಸೂಚನೆಯನ್ನು ರಾಜ್ಯ ಸರ್ಕಾರ ಹೊರಡಿಸಿದೆ. ಈ ಮೂಲಕ ಈ ಪಂಗಡಗಳನ್ನು ಎಸ್‌ಟಿಗೆ ಸೇರಿಸಬೇಕೆನ್ನುವ ಬಹು ವರ್ಷಗಳ ಬೇಡಿಕೆ ಪೂರ್ಣಗೊಂಡಂತಾಗಿದೆ. ಈ ಕುರಿತು ಕರ್ನಾಟಕ ಸರ್ಕಾರದ ಗೆಜೆಟ್ ಅಧಿಸೂಚನೆ ಪ್ರಕಟಗೊಂಡಿದ್ದು, ಪರಿಶಿಷ್ಟ ಪಂಗಡಗಳ ಸಂವಿಧಾನ ತಿದ್ದುಪಡಿ ಕಾಯ್ದೆ 2020ರ ರಅನ್ವಯ ನೂತನಪಟ್ಟಿಯಲ್ಲಿ ತಳವಾರಮತ್ತುಪರಿವಾರಹಾಗೂಸಿದ್ದಿಜನಾಂಗವನ್ನುಪರಿಶಿಷ್ಟಪಂಗಡದ ಪಟ್ಟಿ ಸೇರಿಸಲಾಗಿದೆ.

## 02 06 2020 ವಿಶ್ವದ2ನೇಅತಿದೊಡ್ಡಮೊಬೈಲ್‌ಫೋನ್‌ತಯಾರಿಕಾ ರಾಷ್ಟ್ರವಾಗಿ ಭಾರತ



ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಡಿಯಲ್ಲಿ ಭಾರತ ವಿಶ್ವದ ಎರಡನೇ ಅತಿದೊಡ್ಡ ಮೊಬೈಲ್ ಫೋನ್ ತಯಾರಿಕಾ ರಾಷ್ಟ್ರವಾಗಿ ಹೊರಹೊಮ್ಮಿದ್ದು, ಕಳೆದ ಐದು ವರ್ಷಗಳಲ್ಲಿ ಭಾರತದಲ್ಲಿ ಸುಮಾರು 200 ಮೊಬೈಲ್ ಫೋನ್ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ. ಇದರಿಂದಾಗಿ ಅತಿ ಹೆಚ್ಚು ಮೊಬೈಲ್ ಫೋನುಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ಭಾರತವು ಇದೀಗ ಬಲಿಷ್ಠ ಮೊಬೈಲ್ ರಫ್ತು ರಾಷ್ಟ್ರವಾಗಿದೆ ಎಂದು ಕೇಂದ್ರ ಕಾನೂನು ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ರವಿಶಂಕರ್ ಪ್ರಸಾದ್ ತಿಳಿಸಿದ್ದಾರೆ.

# Current affairs of June 2020 from KPSC Vaani

## 02 06 2020 'ಇಂಡಿಯಾ' ಪದ ಬಳಕೆಗೆ ನಿಷೇದ ಕೋರಿ ಸಲ್ಲಿಸಿದ ಅರ್ಜಿ ವಿಚಾರಣೆ ಮುಂದೂಡಿದ ಸುಪ್ರೀಂ



ನವದೆಹಲಿ: ಮುಘಲ್ ದೊರೆಗಳ ಆಡಳಿತದಲ್ಲಿ ಹಿಂದೂಸ್ಥಾನವಾಗಿದ್ದ ನಮ್ಮ ದೇಶವು, ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ 'ಇಂಡಿಯಾ' ಆಗಿ ಬದಲಾಗಿದೆ. ಕಾರಣ ಇಂಡಿಯಾ ಪದದ ಬಳಕೆ ಬೇಡ ಅದರ ಬದಲಾಗಿ "ಭಾರತ" ಅಥವಾ "ಹಿಂದುಸ್ತಾನ" ಬಳಕೆ ಸೂಕ್ತ ಎಂದು ದೆಹಲಿಯ ನಮಃ ಎಂಬುವವರು ಸುಪ್ರೀಂ ಕೋರ್ಟ್ ಗೆ ಅರ್ಜಿ ಸಲ್ಲಿಸಿದ್ದರು. ಭಾರತೀಯ ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ 'ಇಂಡಿಯಾ' ಎಂಬ ಹೆಸರನ್ನು 'ಭಾರತ' ಅಥವಾ 'ಹಿಂದೂಸ್ಥಾನ' ಎಂದು ಬದಲಾಯಿಸುವಂತೆ ಕೋರಿ ಸಲ್ಲಿಸಿರುವ ಅರ್ಜಿ ಕೋರಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂಕೋರ್ಟ್ ಮುಂದೂಡಿದೆ.

## 03 06 2020 ಹೈನುಗಾರಿಕಾ ರೈತರಿಗಾಗಿ ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ ಆರಂಭಿಸಿದ ಕೇಂದ್ರ ಸರ್ಕಾರ




ಹೈನುಗಾರಿಕಾ ರೈತರಿಗೆ ಸಹಾಯ ಮಾಡಲು ಜೂನ್ 2,2020ರಂದು ಭಾರತ ಸರ್ಕಾರ ಕಿಸಾನ್ ಕ್ರೆಡಿಟ್ ಕಾರ್ಡ್ ಅಭಿಯಾನವನ್ನು ಪ್ರಾರಂಭಿಸಿತು. ಈ ಅಭಿಯಾನದಡಿ ಸುಮಾರು 1.5 ಕೋಟಿ ಹೈನುಗಾರಿಕಾ ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ನೀಡಲು ಯೋಜಿಸಲಾಗುವದು. ಈ ಯೋಜನೆಯಡಿ, ಹಾಲು ಉತ್ಪಾದಿಸುವ ಒಕ್ಕೂಟಗಳೊಂದಿಗೆ ವಹಿವಾಟು ನಡೆಸುವ ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ಭಾರತ ಸರ್ಕಾರ ನೀಡಲಿದೆ. ಭಾರತದಲ್ಲಿ ಹಾಲು ಒಕ್ಕೂಟದೊಂದಿಗೆ ವ್ಯವಹರಿಸುವ ಸುಮಾರು 1.7 ಕೋಟಿ ರೈತರು ಸಂಬಂಧ ಹೊಂದಿದ್ದಾರೆ.
* 1.5 ಕೋಟಿ ಡೈರಿ ರೈತರಿಗೆ ಕಿಸಾನ ಕ್ರೆಡಿಟ್ ಕಾರ್ಡ್ ಗಳನ್ನು ಒದಗಿಸುವ ಈ ಅಭಿಯಾನವು ಲಾಕ್ ಡೌನ್ ಸಮಯದಲ್ಲಿ ಪ್ರಧಾನಿಯವರು ಘೋಷಿಸಿದ "ಆತ್ಮ ನಿರ್ಭಾರ್ ಭಾರತ್ ಅಭಿಯಾನ"ದ ಒಂದು ಭಾಗವಾಗಿದೆ.

# Current affairs of June 2020 from KPSC Vaani

## 03 06 2020 ವಿಶ್ವ ಅರೋಗ್ಯ ಸಂಸ್ಥೆಯಿಂದ COVID 19 ತಂತ್ರಜ್ಞಾನ ಆಕ್ಸೆಸ್ ಪೂಲ್ (C TAP) ಪ್ರಾರಂಭ



ಕೋಸ್ಟ ರಿಕಾ ಮತ್ತು ವಿಶ್ವ ಆರೋಗ್ಯ ಸಂಸ್ಥೆ C TAP ಅನ್ನು ಆರಂಭಿಸಿದ್ದು, ಸಿ ಟ್ಯಾಪ್ ಒಂದು COVID 19 ತಂತ್ರಜ್ಞಾನ ಆಕ್ಸೆಸ್ ಪೂಲ್ ಆಗಿರುತ್ತದೆ.
* ಸಿ ಟ್ಯಾಪ್ ಜಾಗತಿಕವಾಗಿ ಮಾಹಿತಿ, ವೈಜ್ಞಾನಿಕ ಜ್ಞಾನ ಮತ್ತು ಬೌದ್ಧಿಕ ಆಸ್ತಿಗಾಗಿ ಒಂದು ನಿಲುಗಡೆ ವ್ಯವಸ್ಥೆಯಾಗಿ ಬಳಕೆಯಾಗಲಿದೆ.
*ಸಿ ಟ್ಯಾಪ್ ಅನ್ನು ಬೆಂಬಲಿಸಲು ಸುಮಾರು 30ದೇಶಗಳು, ಸಂಸ್ಥೆಗಳು ಮತ್ತು ಅಂತರರಾಷ್ಟ್ರೀಯ ಪಾಲುದಾರರು ಸಹಿ ಹಾಕಿದ್ದಾರೆ.
* ಸಿ ಟ್ಯಾಪ್ ತಂತ್ರಜ್ಞಾನವು ಲಸಿಕೆಗಳು, ಪರೀಕ್ಷೆಗಳು, ಆರೋಗ್ಯ ತಂತ್ರಜ್ಞಾನಗಳು ಮತ್ತು ಚಿಕಿತ್ಸೆಯನ್ನು ಮಾಡುವ ಗುರಿಯನ್ನು ಹೊಂದಿದೆ.

## 03 06 2020 ಖೇಲೋ ಇಂಡಿಯಾ ಸಮುದಾಯ ಕೋಚ್ ಅಭಿವೃದ್ಧಿ ಕಾರ್ಯಕ್ರಮ




ಕೇಂದ್ರಸರ್ಕಾರದಯುವಜನವ್ಯವಹಾರಮತ್ತುಕ್ರೀಡಾಸಚಿವಕಿರೆನ್‌ರಿಜ್ಜುಅವರು"ಭಾರತಸಮುದಾಯ ಕೋಚ್ ಅಭಿವೃದ್ಧಿ" ಕಾರ್ಯಕ್ರಮವನ್ನು ಇದೆ ದಿನಾಂಕ ಜೂನ್ 02 ರಂದು ಉದ್ಘಾಟಿಸಿದರು. ಭಾರತ ಸಮುದಾಯ ಕೋಚ್ ಅಭಿವೃದ್ಧಿ ಕಾರ್ಯಕ್ರಮ: ಭಾರತ ಸಮುದಾಯ ತರಬೇತುದಾರ ಅಭಿವೃದ್ಧಿ ಕಾರ್ಯಕ್ರಮವು ದೇಶಾದ್ಯಂತ ಸಮುದಾಯ ತರಬೇತುದಾರರು ಮತ್ತು ದೈಹಿಕ ಶಿಕ್ಷಕರಿಗೆ 25 ದಿನಗಳ ಸುದೀರ್ಘ ಕಾರ್ಯಕ್ರಮವಾಗಿದೆ. ಶಾಲೆಗಳಲ್ಲಿ ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುವದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.
* ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ಸಮುದಾಯ ತರಬೇತುದಾರರು ಪ್ರತಿ ಮಗುವನ್ನು ಫಿಟ್‌ನೆಸ್ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಅವರನ್ನು ಪ್ರೇರೇಪಿಸುತ್ತಾರೆ.

## 03 06 2020 ಎಲೆಕ್ಟ್ರಾನಿಕ್ಸ್ ಕ್ಷೇತ್ರವನ್ನು ಉತ್ತೇಜಿಸಲು ಭಾರತ ಸರ್ಕಾರದಿಂದ ಮೂರು ಹೊಸ ಯೋಜನೆಗಳ ಆರಂಭ




ಕೇಂದ್ರ ಸಚಿವ ರವಿಶಂಕರ್ ಪ್ರಸಾದ್ ಅವರು ಎಲೆಕ್ಟ್ರಾನಿಕ್ಸ್ ಕ್ಷೇತ್ರವನ್ನು ಹೆಚ್ಚಿಸಲು ಮೂರು ಹೊಸ ಯೋಜನೆಗಳನ್ನು ಉದ್ಘಾಟಿಸಿದರು. ಇವುಗಳೆಂದರೆ 1) ಉತ್ಪಾದನಾ ಸಂಬಂಧಿತ ಪ್ರೋತ್ಸಾಹಕ ಯೋಜನೆ (Production Linked Incentive Scheme) 2) ಕ್ಲಸ್ಟರ್ ಯೋಜನೆ (EMC 2.0) ಮತ್ತು 3) ಘಟಕ ಉತ್ಪಾದನಾ ಯೋಜನೆ (SPECS).

* ಈ ಯೋಜನೆಗಳನ್ನು ಕೇಂದ್ರ ಸಚಿವ ಸಂಪುಟ 2020 ರ ಮಾರ್ಚ್ ತಿಂಗಳಲ್ಲಿ ಅಂಗೀಕರಿಸಿತ್ತು.
* ಈ ಯೋಜನೆಗಳಿಂದ ಬಂಡವಾಳ ಹೂಡಿಕೆಯನ್ನು ನಿರೀಕ್ಷಿಸಬಹುದಾಗಿದೆ. 2025 ರ ವೇಳೆಗೆ ಮೊಬೈಲ್ ಫೋನ್ ಮತ್ತು ಅವುಗಳ ಭಾಗಗಳ ಉತ್ಪಾದನೆ ಸುಮಾರು 10 ಲಕ್ಷ ಕೋಟಿಗಳ ವರೆಗೂ ಹೆಚ್ಚಲಿದೆ. ಜೊತೆಗೆ, ಈ ಯೋಜನೆಯಿಂದ 5 ಲಕ್ಷ ನೇರ ಮತ್ತು 15 ಲಕ್ಷ ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಯಾಗುವ ನಿರೀಕ್ಷೆಯಿದೆ.

## 03 06 2020 ಹಾಕಿ ತಂಡದ ನಾಯಕಿ ರಾಣಿ ರಾಂಪಾಲ್ ಖೇಲ್‌ರತ್ನಕ್ಕೆ ಶಿಫಾರಸ್ಸು




ಭಾರತೀಯ ಮಹಿಳಾ ಹಾಕಿ ತಂಡದ ನಾಯಕಿ ರಾಣಿ ರಾಂಪಾಲ್ ಅವರ ಹೆಸರನ್ನು ಅತ್ಯುನ್ನತ ಕ್ರೀಡಾ ಪುರಸ್ಕಾರವಾದ ಖೇಲ್‌ರತ್ನ ಪುರಸ್ಕಾರಕ್ಕೆ ಹಾಕಿ ಇಂಡಿಯಾ ಶಿಫಾರಸು ಮಾಡಿದೆ. ರಾಣಿ ರಾಂಪಾಲ್ ನಾಯಕತ್ವದಲ್ಲಿ ಭಾರತ ಮಹಿಳಾ ಹಾಕಿ ತಂಡ 2017ರಲ್ಲಿ ಏಷ್ಯಾ ಕಪ್, 2018ರಲ್ಲಿ ಏಷ್ಯನ್ ಗೇಮ್ಸ್ ನಲ್ಲಿ ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿದೆ. ಅಲ್ಲದೆ ರಾಣಿ ನಾಯಕತ್ವದಲ್ಲಿ ಭಾರತ ತಂಡ 2016 ಮತ್ತು 2020ರ ಒಲಿಂಪಿಕ್ಸ್ ಕ್ರೀಡಾಕೂಟಗಳಿಗೆ ಅರ್ಹತೆ ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇದಲ್ಲದೆ ರಾಣಿ ಅವರು ವಿಶ್ವ ಗೇಮ್ಸ್ ವರ್ಷದ ಅಥ್ಲೀಟ್ ಪ್ರಶಸ್ತಿ ಹಾಗೂ 2016ರಲ್ಲಿ ಅರ್ಜುನ ಮತ್ತು 2020ರಲ್ಲಿ ಪದ್ಮಶ್ರೀ ಪ್ರಶಸ್ತಿ ಪಡೆದಿರುತ್ತಾರೆ.

# Current affairs of June 2020 from KPSC Vaani

## 04 06 2020 ಮೋದಿ ಸರ್ಕಾರದಿಂದ "ಒನ್ ನೇಷನ್ ಒನ್ ಮಾರ್ಕೆಟ್" ಯೋಜನೆ ಜಾರಿಗೆ ಚಿಂತನೆ



ನವದೆಹಲಿ: ಭಾರತೀಯ ಕೃಷಿಕರಿಗೆ ತಮ್ಮ ಬೆಳೆಗಳನ್ನು ಮಾರುಕಟ್ಟೆಗಳಲ್ಲಿ ವ್ಯಾಪಾರ ಮಾಡಲು ಹಲವು ಬಗೆಯ ಸಮಸ್ಯೆಗಳನ್ನು ಎದುರಿಸುತ್ತಿದ್ದು, ರೈತರಿಗೆ ಅನುಕೂಲವಾಗುವಂತೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮತ್ತೊಂದು ಯೋಜನೆ ಜಾರಿಗೆ ತರಲು ಚಿಂತಿಸುತ್ತಿದ್ದು, ಮೋದಿ ನೇತೃತ್ವದಲ್ಲಿ ಇಂದು ನಡೆದ ಸಂಪುಟ ಸಭೆಯಲ್ಲಿ 'ಒನ್ ನೇಷನ್ ಒನ್ ಮಾರ್ಕೆಟ್' ಯೋಜನೆಯನ್ನು ಜಾರಿಗೆ ತರಲು ತೀರ್ಮಾನಿಸಲಾಗಿದೆ. ಈ ಕುರಿತು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಅವರು ದೇಶದ ರೈತರಿಗಾಗಿ ಐತಿಹಾಸಿಕ ನಿರ್ಧಾರ ಕೈಗೊಳ್ಳಲಾಗಿದೆ. 'ಒನ್ ನೇಷನ್ ಒನ್ ಮಾರ್ಕೆಟ್' ಯೋಜನೆಯನ್ನು ಜಾರಿಗೆ ತರಲಾಗಿದ್ದು, ದೇಶದಲ್ಲಿ ಎಲ್ಲಿ ಬೇಕಾದರೂ ಬೆಳೆ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ. ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತಾಗಿ ನಿರ್ಧಾರ ಕೈಗೊಳ್ಳಲಾಗಿದೆ. ರೈತರೇ ಬೆಳೆಗಳಿಗೆ ದರ ನಿಗದಿ ಮಾಡಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

## 04 06 2020 ಖೇಲ್‌ರತ್ನಕ್ಕೆ ನೀರಜ್ ಚೋಪ್ರಾ ಹೆಸರು ಅಧಿಕೃತ:AFI




ಹೊಸದಿಲ್ಲಿ : ಭಾರತ ಸರ್ಕಾರ ನೀಡುವ ಪ್ರತಿಷ್ಠಿತ ಕ್ರೀಡಾ ಪ್ರಶಸ್ತಿಯಾದ ಖೇಲ್‌ರತ್ನ ಪ್ರಶಸ್ತಿಗೆ ಖ್ಯಾತ ಜಾವೆಲಿನ್ ಎಸೆತಗಾರ ನೀರಜ್ ಚೋಪ್ರಾ ಹೆಸರು ಸೂಚಿಸಿರುವುದಾಗಿ ಆಯತ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾ (ಎಎಫ್‌ಐ) ಅಧಿಕೃತವಾಗಿ ತಿಳಿಸಿದೆ. "ನೀರಜ್ ಚೋಪ್ರಾ ಅವರಿಗೆ ಈ ವರ್ಷ ಖೇಲ್‌ರತ್ನ ಒಲಿಯಲಿದೆ ಎಂಬ ವಿಶ್ವಾಸವಿದ್ದು, 2018ರಲ್ಲಿ ಮೀರಾಬಾಯಿ ಚಾನು ಹಾಗೂ ಕಳೆದ ವರ್ಷ ಭಜರಂಗ್ ಪೂನಿಯಾ ಚೋಪ್ರಾರನ್ನು ಇವರು ಮೀರಿಸಿದ್ದರು' ಎಂಬುದಾಗಿ ಎಎಫ್‌ಐ ಅಧ್ಯಕ್ಷ ಎ. ಸುಮರಿವಲ್ಲ ತಿಳಿಸಿದ್ದಾರೆ. 22ರ ಹರೆಯದ ನೀರಜ್ ಚೋಪ್ರಾ ಈಗಾಗಲೇ ಅರ್ಜುನ ಪ್ರಶಸ್ತಿಗೆ ಪಾತ್ರರಾಗಿದ್ದಾರೆ (2018). ಅದೇ ವರ್ಷ ಏಶ್ಯನ್ ಗೇಮ್ಸ್‌ನಲ್ಲೂ ಬಂಗಾರ ಜಯಿಸಿ ಖೇಲ್‌ರತ್ನಕ್ಕೆ ನಾಮನಿರ್ದೇಶನಗೊಂಡಿದ್ದರು. ಚೋಪ್ರಾ ಈಗಾಗಲೇ ಟೋಕಿಯೊ ಒಲಿಂಪಿಕ್ಸ್ ಅರ್ಹತೆ ಸಂಪಾದಿಸಿದ್ದಾರೆ.

# Current affairs of June 2020 from KPSC Vaani

## 04 06 2020 ರವೀಶ್ ಕುಮಾರ್ ಫಿನ್‌ಲ್ಯಾಂಡ್‌ನಲ್ಲಿ ಭಾರತದ ಮುಂದಿನ ರಾಯಭಾರಿ



ನವದೆಹಲಿ: ಅನುಭವಿ ರಾಯಭಾರಿ ಹಾಗೂ ವಿದೇಶಾಂಗ ಸಚಿವಾಲಯದ ಮಾಜಿ ವಕ್ತಾರ ರವೀಶ್ ಕುಮಾರ್ ಅವರನ್ನು ಫಿನ್‌ಲ್ಯಾಂಡ್‌ನಲ್ಲಿ ಭಾರತದ ಮುಂದಿನ ರಾಯಭಾರಿಯಾಗಿ ನೇಮಕ ಮಾಡಲಾಗಿದೆ ಎಂದು ಭಾರತ ಸರ್ಕಾರ ತಿಳಿಸಿದೆ.
* ಸದ್ಯ ವಾಣಿ ರಾವ್ ಅವರು ಫಿನ್‌ಲ್ಯಾಂಡ್‌ನಲ್ಲಿ ಭಾರತದ ರಾಯಭಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.
* ರವೀಶ್ ಕುಮಾರ್ ಅವರು ವಿದೇಶಾಂಗ ಸಚಿವಾಲಯದ ವಕ್ತಾರರಾಗಿ 2017ನೇ ಜುಲೈನಿಂದ 2020ನೇ ಏಪ್ರಿಲ್ ವರೆಗೂ ಕಾರ್ಯನಿರ್ವಹಿಸಿದ್ದಾರೆ. ಬಾಲಾಕೋಟ್ ದಾಳಿ, ಜಮ್ಮು ಕಾಶ್ಮೀರ ಕುರಿತ ವಿಚಾರ ಹಾಗೂ ಎನ್‌ಆರ್‌ಸಿ ಅಂಥ ಸೂಕ್ಷ್ಮ ವಿಚಾರಗಳಲ್ಲಿ ವಿಶ್ವದ ಎದುರು ಭಾರತದ ನಿಲುವನ್ನು ಮಂಡಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

## 04 06 2020 ಏಷ್ಯಾವಿವಿಗಳರ್‍ಯಾಂಕಿಂಗ್‌ನಲ್ಲಿIISCಗೆ36ನೇಸ್ಥಾನ



ಹೊಸದಿಲ್ಲಿ: ಏಷ್ಯಾ ವಿಶ್ವ ವಿದ್ಯಾಲಯಗಳ ರ್‍ಯಾಂಕಿಂಗ್ ಪಟ್ಟಿ ಇತ್ತೀಚಿಗೆ ಬಿಡುಗಡೆಯಾಗಿದ್ದು, ಬೆಂಗಳೂರಿನಲ್ಲಿರುವ ಭಾರತೀಯ ವಿಜ್ಞಾನ ಸಂಸ್ಥೆಯು 36ನೇ ರ್‍ಯಾಂಕ್ ಗಳಿಸುವ ಮೂಲಕ ಭಾರತದ ವಿವಿಗಳ ಪೈಕಿ ಅಗ್ರ ಸ್ಥಾನ ಕಾಯ್ದುಕೊಂಡಿದೆ. ಅಲ್ಲದೆ ಭಾರತದ ಇತರೆ ಆರು ಐಐಟಿಗಳುಅಗ್ರ100ರಪಟ್ಟಿಯಲ್ಲಿಸ್ಥಾನ ಪಡೆದಿವೆ.
*ಬೆಂಗಳೂರಿನIIScಸತತಐದನೇವರ್ಷ ಭಾರತದ ಶಿಕ್ಷಣ ಸಂಸ್ಥೆಗಳ ಪೈಕಿ ಅಗ್ರ ಸ್ಥಾನ ಪಡೆದಿದ್ದರು ಕಾಯ್ದುಕೊಂಡಿದ್ದರೂ 2019ಕ್ಕೆ ಹೋಲಿಸಿದರೆ7ಸ್ಥಾನಗಳಷ್ಟುಕುಸಿತಕಂಡಿದೆ.
*ಭಾರತದIITಗಳಪ್ರದರ್ಶನಕೂಡಕಡಿಮೆಯಿದ್ದು, ರೂಪರ್(47),ಖಾನ್ಪುರ(59),ಇಂದೋರ್(55), ದಿಲ್ಲಿ(65),ಮುಂಬಯಿ(69),ರೂರ್ಕಿ (83)ಐಐಟಿಗಳುಪಟ್ಟಿಯಲ್ಲಿಸ್ಥಾನಪಡೆದಿವೆ.
*ಅಗ್ರಹತ್ತುಸ್ಥಾನಗಳನ್ನುಚೀನ,ಸಿಂಗಾಪುರ, ಹಾಂಗ್‌ಕಾಂಗ್,ಜಪಾನ್‌ಮತ್ತುದಕ್ಷಿಣಕೊರಿಯಾದವಿವಿಗಳು ಪಡೆದಿವೆ.

# Current affairs of June 2020 from KPSC Vaani



# Current affairs of June 2020 from KPSC Vaani

### 05 06 2020 ವರ್ಚುವಲ್ ಶೃಂಗಸಭೆ: ಪ್ರಮುಖ ಒಪ್ಪಂದಗಳಿಗೆ ಭಾರತ, ಆಸ್ಟ್ರೇಲಿಯಾ ಸಹಿ



ನವದೆಹಲಿ: ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮಾರಿಸನ್ ಇದೆ ಜೂನ್ 04 ರಂದು ಇದೆ ಮೊದಲ ಬಾರಿ ವೀಡಿಯೊ ಕಾನ್ಫರೆನ್ಸ್ ಮೂಲಕ ವರ್ಚುಯಲ್ ಶೃಂಗಸಭೆಯ ನಡೆಸಿದರು. ಈ ಸಭೆಯ ಬಳಿಕ ಪರಸ್ಪರ ಸಹಕಾರಕ್ಕಾಗಿ ಸೇನಾನೆಲೆಗಳಿಗೆ ಪ್ರವೇಶಾವಕಾಶ ಸೇರಿ 6 ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಲಾಯಿತು.
* ಭಾರತದ ಆಸ್ಟ್ರೇಲಿಯಾದೊಂದಿಗೆ ಮಾಡಿಕೊಂಡ ಈ ಒಪ್ಪಂದದಿಂದ ಉಭಯ ದೇಶಗಳ ನಡುವಿನ ಪರಸ್ಪರರ ಸೇನಾನೆಲೆಗಳನ್ನು ದುರಸ್ತಿ, ಪೂರೈಕೆ, ಮರುಪೂರಣ ಪ್ರಕ್ರಿಯೆಗೆ ಬಳಸಿಕೊಳ್ಳಲು ನೆರವಾಗುವುದಲ್ಲದೆ, ಸಮಗ್ರ ರಕ್ಷಣಾ ಸಹಕಾರವನ್ನು ಹೆಚ್ಚಿಸಲು ಅನುಕೂಲವಾಗಲಿದೆ.
* ಭಾರತವು ಈಗಾಗಲೇ ಇದೇ ರೀತಿಯ ಒಪ್ಪಂದವನ್ನು ಅಮೆರಿಕ, ಫ್ರಾನ್ಸ್ ಮತ್ತು ಸಿಂಗಾಪುರ ರಾಷ್ಟ್ರಗಳೊಂದಿಗೆ ಮಾಡಿಕೊಂಡಿದೆ.

### 05 06 2020 ಕೇರಳದಲ್ಲಿ ಗರ್ಭಿಣಿ ಆನೆಯ ದುರಂತ ಸಾವು ಪ್ರಕರಣ :



ತಿರುವನಂತಪುರಂ: ಕೇರಳದಲ್ಲಿ ಗರ್ಭಿಣಿ ಕಾಡಾನೆಗೆ ಪಟಾಕಿ ತುಂಬಿದ ಪೈನಾಪಲ್ ತಿನ್ನಿಸಿ ಆ ಆನೆಯ ಸಾವಿಗೆ ಕಾರಣರಾದವರ ಮೇಲೆ ಕ್ರಮಕ್ಕೈಗೊಳ್ಳುವಂತೆ ದೇಶಾದ್ಯಂತ ಆಕ್ರೋಶ ವ್ಯಕ್ತಪಡಿಸಲಗುತ್ತಿದೆ.
* ಘಟನೆ ಹಿನ್ನಲೆ : ಕೇರಳದ ಪಲಕ್ಕಾಡ್‌ನ ಸೈಲೆಂಟ್ ವ್ಯಾಲಿ ನ್ಯಾಷನಲ್ ಪಾರ್ಕ್ (SVNP)ನ ಗರ್ಭಿಣಿ ಆನೆಯೊಂದು ಆಹಾರ ಅರಸುತ್ತ ಮೇ 27ರಂದು ಊರೊಳಗೆ ಪ್ರವೇಶಿಸಿತ್ತು, ಯಾರೋ ಕಿಡಿಗೇಡಿಗಳು ಆಹಾರ ಹುಡುಕಿ ಬಂದ ಆನೆಗೆ ಯಾರೋ ಆನೆಗೆ ತಿನ್ನಲು ಸ್ಫೋಟಕ ತುಂಬಿದ ಪೈನಾಪಲ್ ಹಣ್ಣನ್ನು ತಿನ್ನಲು ನೀಡಿದ ಹಿನ್ನಲೆ ಅದರೊಳಗಿದ್ದ ಮದ್ದು ಗುಂಡು ಸ್ಫೋಟವಾಯಿ ಆನೆಯ ಬಾಯಿಗೆ ತೀವ್ರ ಗಾಯವಾಗಿತ್ತು. ಈ ಸ್ಫೋಟದಿಂದಾದ ನೋವನ್ನು ತಡೆಯಲು ಕಾಡಿನೊಳಗೆ ಸೇರಿಕೊಂಡ ಆನೆ ನಂತರ ವೆಲ್ಲಿಯಾರ್ ನದಿಯೊಳಗೆ ಇಳಿದು ತನ್ನ ಬಾಯಿ, ಸೊಂಡಿಲನ್ನು ನೀರಿನಲ್ಲಿಟ್ಟುಕೊಂಡು ನಿಂತು ಅಲ್ಲೇ ತನ್ನ ಪ್ರಾಣ ತ್ಯಜಿಸಿದೆ.
* ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರತನ್ ಟಾಟಾ, ಟೀಂ ಇಂಡಿಯಾ ಕ್ಯಾಪ್ಟನ್ ವಿರಾಟ್ ಕೊಹ್ಲಿ, ಸಿನಿಮಾ ನಟರು, ಕ್ರಿಕೆಟಿಗರು, ರಾಜಕಾರಣಿಗಳು ಸೇರಿದಂತೆ ಸಾವಿರಾರು ಜನ ಆನೆಯ ದುರಂತ ಸಾವಿಗೆ ಕಾರಣರಾದವರನ್ನು ಬಂಧಿಸುವಂತೆ ಸಾಮಾಜಿಕ ಜಾಲತಾಣಗಳಲ್ಲಿ ಆಗ್ರಹಿಸಿದ್ದಾರೆ.
* ಈ ಅಮಾನುಷ ಘಟನೆಯ ಕುರಿತು ಕೇಂದ್ರ ಪರಿಸರ ಇಲಾಖೆ ಸಚಿವ ಪ್ರಕಾಶ್ ಜಾವ್ಡೇಕರ್ ಕೂಡ ಕೇರಳ ಸರ್ಕಾರದಿಂದ ವರದಿ ತರಿಸಿಕೊಂಡು ತಪ್ಪಿಸ್ಥತ್ತರ ವಿರುದ್ದ ಕ್ರಮಕ್ಕೈಗೊಳ್ಳಾಗುವುದೆಂದು ತಿಳಿಸಿದ್ದಾರೆ.

# Current affairs of June 2020 from KPSC Vaani

## 05 06 2020 ಕಳೆದ8ವರ್ಷದಲ್ಲಿ750ಹುಲಿಮರಣ:ರಾಷ್ಟ್ರೀಯಹುಲಿ ಸಂರಕ್ಷಣಾ ಪ್ರಾಧಿಕಾರ ಮಾಹಿತಿ



ಹೊಸದಿಲ್ಲಿ: ಕಳೆದ ಎಂಟು ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಒಟ್ಟು 750 ಹುಲಿಗಳು ಬೇಟೆ, ಪ್ರಾಕೃತಿಕ ಕಾರಣಗಳು, ಅನಾರೋಗ್ಯ ಸೇರಿ ಹಲವು ಕಾರಣಗಳಿಂದಾಗಿ ಮೃತಪಟ್ಟಿವೆ ಎಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಆಘಾತಕಾರಿ ಮಾಹಿತಿ ನೀಡಿದೆ. ಹುಲಿಗಳ ಸಾವಿನ ಸಂಖ್ಯೆಯಲ್ಲಿ ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಹೆಚ್ಚಾಗಿದ್ದು, ಎಂಟು ವರ್ಷಗಳಲ್ಲಿ ಮಧ್ಯಪ್ರದೇಶ ಒಂದರಲ್ಲೇ 173 ಹುಲಿಗಳು ಸಾವಿಗೀಡಾಗಿವೆ. ಕರ್ನಾಟಕದಲ್ಲಿಯೂ ಕೂಡ 111 ಹುಲಿಗಳ ಸಾವನ್ನಪ್ಪಿವೆ, ಈ ಪೈಕಿ 28 ಹುಲಿಗಳು ಬೇಟೆಗಾರರ ಗುಂಡಿಗೆ ಬಲಿಯಾಗಿವೆ.

* ಮಹಾರಾಷ್ಟ್ರದಲ್ಲಿ 125, ಉತ್ತರಾಖಂಡದಲ್ಲಿ 88, ತಮಿಳುನಾಡು ಮತ್ತು ಅಸ್ಸಾಂನಲ್ಲಿ ತಲಾ 54, ಕೇರಳ ಹಾಗೂ ಉತ್ತರ ಪ್ರದೇಶದಲ್ಲಿ ತಲಾ 35, ರಾಜಸ್ಥಾನದಲ್ಲಿ 17, ಬಿಹಾರ ಮತ್ತು ಪಶ್ಚಿಮ ಬಂಗಾಳದಲ್ಲಿ ತಲಾ 11 ಹಾಗೂ ಛತ್ತೀಸ್‌ಗಡದಲ್ಲಿ 10 ಹುಲಿಗಳು ಸಾವನ್ನಪ್ಪಿವೆ ಎಂದು ಪ್ರಾಧಿಕಾರ ಮಾಹಿತಿ ನೀಡಿದೆ.

## 05 06 2020 ಹುಬ್ಬಳ್ಳಿಯಲ್ಲಿ ವಿಶ್ವದ ಉದ್ದನೆಯ ರೈಲ್ವೆ ಪ್ಲಾಟ್ ಫಾರ್ಮ್ ನಿರ್ಮಾಣ



ನೈಋತ್ಯ ರೈಲ್ವೆಯಾ ಕೇಂದ್ರ ಹುಬ್ಬಳ್ಳಿ ನಗರದಲ್ಲಿ ವಿಶ್ವದಲ್ಲೇ ಅತಿ ಉದ್ದದ ಪ್ಲಾಟ್ ಫಾರ್ಮ್ ನಿರ್ಮಾಣವಾಗಲಿದೆ. ಪ್ರಸ್ತುತ ಈಗಿರುವ ಒಂದನೇ ಪ್ಲಾಟ್ ಫಾರ್ಮ್ 550 ಮೀಟರ್ ಉದ್ದವಿದ್ದು, ಇದನ್ನು 1,400 ಮೀ.ಗೆ ಹೆಚ್ಚಿಸಲಾಗುವುದೆಂದು ನೈರುತ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಇ. ವಿಜಯಾ ತಿಳಿಸಿದ್ದಾರೆ.

* ಒಟ್ಟು ₹90 ಕೋಟಿ ವೆಚ್ಚದಲ್ಲಿ ಕೆಲಸ ಆರಂಭಿಸಲಾಗಿದ್ದು, 2021ರ ಜೂನ್ ವೇಳೆಗೆ ಕಾಮಗಾರಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.
* ಒಂದು ವೇಳೆ ಈ ಪ್ಲಾಟ್ ಫಾರಂ ನಿರ್ಮಾಣಗೊಂಡಿದ್ದೆ ಆದಲ್ಲಿ ಇದು ವಿಶ್ವದಲ್ಲಿಯೇ ಅತಿ ಉದ್ದನೆಯ ರೈಲ್ವೆ ಪ್ಲಾಟ್ ಫಾರಂ ಆಗಲಿದೆ.
*ಉತ್ತರ ಪ್ರದೇಶದ ಗೋರಖ್‌ಪುರದಲ್ಲಿ 1,366ಮೀ. ಉದ್ದದ ಪ್ಲಾಟ್‌ಫಾರ್ಮ್ ಇದ್ದು, ಇದು ಸದ್ಯಕ್ಕೆ ವಿಶ್ವದ ಅತಿ ಉದ್ದದ ಪ್ಲಾಟ್‌ಫಾರ್ಮ್ ಎನ್ನುವ ಹೆಗ್ಗಳಿಕೆ ಹೊಂದಿದೆ.

# Current affairs of June 2020 from KPSC Vaani

## 05 06 2020 ಕೇಂದ್ರೀಯ ಪೊಲೀಸ್ ಕಲ್ಯಾಣ ಭಂಡಾರದ ನೂತನ ಸಿಇಒ ಆಗಿ ರಂಜನ್ ಕುಮಾರ್ ನೇಮಕ




ನವದೆಹಲಿ:ಕೇಂದ್ರೀಯ ಪೊಲೀಸ್ ಕಲ್ಯಾಣ ಭಂಡಾರದ (KPKB) ನೂತನ CEO ಆಗಿ DIG ರಂಜನ್ ಕುಮಾರ್ ಅವರನ್ನು ಕೇಂದ್ರ ಗೃಹ ಸಚಿವಾಲಯ ನೇಮಿಸಿ ಆದೇಶ ಹೊರಡಿಸಿದೆ. ಸದರಿ ಈ ಹುದ್ದೆಯಲ್ಲಿ ಡಿಐಜಿ ಆರ್.ಎಂ. ಮೀನಾ ಕಾರ್ಯನಿರ್ವಹಿಸುತ್ತಿದ್ದರು.

## 06 06 2020 'ದಲಿತ','ಹರಿಜನ','ಗಿರಿಜನ' ಪದ ಬಳಸದಂತೆ ಸಮಾಜ ಕಲ್ಯಾಣ ಇಲಾಖೆ ಆದೇಶ



ಬೆಂಗಳೂರು : ಕೇಂದ್ರ ಗೃಹ ಸಚಿವಾಲಯ ಹಾಗೂ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ನಿರ್ದೇಶನದಂತೆ ರಾಜ್ಯದಲ್ಲಿ ದಲಿತ ಎನ್ನುವ ಪದವನ್ನು ಬಳಸದಂತೆ ರಾಜ್ಯದ ಸಮಾಜ ಕಲ್ಯಾಣ ಇಲಾಖೆ ಆದೇಶ ಹೊಡಸಿದೆ. ರಾಜ್ಯದ ಉಪ ಮುಖ್ಯಮಂತ್ರಿ ಗೋವಿಂದ ಎಂ ಕಾರಜೋಳ ಅವರು ಈ ಕುರಿತು ಮಾಹಿತಿ ನೀಡಿದ್ದು, ರಾಜ್ಯದಲ್ಲಿ ಆಡಳಿತ ಭಾಷೆ, ಪತ್ರ ವ್ಯವಹಾರ, ಪ್ರಮಾಣ ಪತ್ರಗಳಲ್ಲಿ 'ದಲಿತ' ಎನ್ನುವ ಪದವನ್ನು ಬಳಸದಂತೆ ಕೇಂದ್ರ ಗೃಹ ಸಚಿವಾಲಯ ಮತ್ತು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ನಿರ್ದೇಶನದಂತೆ ಸಮಾಜ ಕಲ್ಯಾಣ ಇಲಾಖೆಯು ಆದೇಶ ಹೊರಡಿಸಿದೆ ಎಂದು ತಿಳಿಸಿದ್ದಾರೆ. ಈ ಪದಗಳ ಬದಲಾಗಿ ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಎಂದು ನಮೂದಿಸಬಹುದಾಗಿದೆ ಇದೆ ಸಮಯದಲ್ಲಿ ಅವರು ತಿಳಿಸಿದರು.

# Current affairs of June 2020 from KPSC Vaani

**06 06 2020 ಕೊರೊನಾ ಪರಿಣಾಮದಿಂದ ಮುಂದಿನ ಒಂದು ವರ್ಷ ಹೊಸ ಯೋಜನೆಗಳಿಲ್ಲ ಕೇಂದ್ರ ಸರ್ಕಾರ**



ನವದೆಹಲಿ : ದೇಶದಲ್ಲಿ ವ್ಯಾಪಿಸುತ್ತಿರುವ ಕೊರೊನಾ ವೈರಸ್ ನಿಂದಾಗಿ ಈಗಾಗಲೇ ದೇಶದ ಆರ್ಥಿಕತೆ ಮೇಲೆ ತೀವ್ರ ಗಂಭೀರ ಪರಿಣಾಮ ಬೀರಿದೆ. ಈ ಹಿನ್ನಲೆಯಲ್ಲಿ ಮುಂದಿನ ಒಂದು ವರ್ಷ ಕಾಲ ಯಾವುದೇ ಹೊಸ ಯೋಜನೆಗಳನ್ನು ಘೋಷಿಸದಿರಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಕೊರೊನಾ ವಿರುದ್ಧದ ಹೋರಾಟಕ್ಕೆ ಸಂಪನ್ಮೂಲ ಕ್ರೋಡೀಕರಿಸಬೇಕಿರುವದರಿಂದ ವಿತ್ತ ಸಚಿವಾಲಯವು ಈ ಆದೇಶ ಹೊರಡಿಸಿದೆ. ಈ ಹಿನ್ನಲೆಯಲ್ಲಿ ಮುಂದಿನ ಒಂದು ವರ್ಷದ ಅವಧಿಗೆ ಕೇಂದ್ರದಿಂದ ಯಾವುದೇ ಹೊಸ ಯೋಜನೆಯನ್ನು ಘೋಷಣೆ ಮಾಡದಿರಲು ನಿರ್ಧರಿಸಲಾಗಿದೆ.

**06 06 2020 40ವರ್ಷಗಳ ಬಳಿಕ ಮಹಿಳಾ ಏಶಿಯನ್ ಕಪ್‌ಗೆ ಭಾರತದ ಆತಿಥ್ಯ**



ಹೊಸದಿಲ್ಲಿ: 2022ರ ಎಎಫ್‌ಸಿ ಮಹಿಳಾ ಏಶ್ಯನ್ ಕಪ್ ಫುಟ್ಬಾಲ್ ಪಂದ್ಯಾವಳಿಗಳನ್ನ ಭಾರತದಲ್ಲಿ ಆಯೋಜಿಸಲು ಏಶ್ಯನ್ ಫುಟ್ಬಾಲ್ ಕಾನ್ಫೆಡರೇಶನ್ (ಎಎಫ್‌ಸಿ) ನಿರ್ಧರಿಸಿದೆ.
* ಈ ಕ್ರೀಡಾಕೂಟವನ್ನು 1979ರಲ್ಲಿ ಮೊದಲ ಬಾರಿ ಭಾರತದಲ್ಲಿ ಆಯೋಜಿಸಲಾಗಿತ್ತು ಆಗ ಭಾರತ ತಂಡ ರನ್ನರ್ ಅಪ್ ಪ್ರಶಸ್ತಿ ಪಡೆದಿತ್ತು.
* ಭಾರತ ಈ ಮೊದಲು 2016ರಲ್ಲಿ AFC ಅಂಡರ್ 16 ಚಾಂಪಿಯನ್‌ಶಿಪ್ ಹಾಗೂ 2017ರಲ್ಲಿ ಫಿಫಾ ಅಂಡರ್ 17 ವಿಶ್ವಕಪ್ ಪಂದ್ಯಾವಳಿಯನ್ನು ಯಶಸ್ವಿಯಾಗಿ ಆಯೋಜಿಸಿತ್ತು.

# Current affairs of June 2020 from KPSC Vaani

## 06 06 2020 ಕೇಂದ್ರದಿಂದರಾಜ್ಯದಪಾಲಿನ4,314ಕೋಟಿ`GST'ಹಣ ಬಿಡುಗಡೆ



ಬೆಂಗಳೂರು : ಕೇಂದ್ರ ಸರ್ಕಾರವು ಕರ್ನಾಟಕದ ಪಾಲಿನ ಸರಕು ಮತ್ತು ಸೇವಾ ತೆರಿಗೆ ಹಣವನ್ನು ಬಿಡುಗಡೆ ಮಾಡಿದ್ದು, ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯನ್ವಯ ಆದಾಯ ನಷ್ಟ ಪರಿಹಾರವಾಗಿ ಕೇಂದ್ರ ಸರ್ಕಾರವು ರಾಜ್ಯಕ್ಕೆ ಮೂರು ತಿಂಗಳ ಬಾಕಿ ಮೊತ್ತ ರೂಪಾಯಿ 4,314 ಕೋಟಿ ಅನುದಾನ ಬಿಡುಗಡೆ ಮಾಡಿದೆ.
*2019ರ ಡಿಸೆಂಬರ್ ನಿಂದ 2020ರ ಫೆಬ್ರುವರಿ ತಿಂಗಳವರೆಗಿನ ಆದಾಯ ನಷ್ಟದ ಪರಿಹಾರದ ಮೊತ್ತ ಇದಾಗಿದೆ.
* 3 ತಿಂಗಳ ಅವಧಿಯಲ್ಲಿ ರಾಜ್ಯ ಎದುರಿಸಿದ ಆದಾಯ ನಷ್ಟದ ಪರಿಹಾರ ಒದಗಿಸಲಾಗಿದೆ ಎಂದು ಕೇಂದ್ರ ಹಣಕಾಸು ಇಲಾಖೆ ತಿಳಿಸಿದೆ.

## 06 06 2020 ಜೂನ್05:ವಿಶ್ವಪರಿಸರದಿನ




ಪ್ರತಿ ವರ್ಷ, ವಿಶ್ವ ಪರಿಸರ ದಿನವನ್ನು ಜೂನ್ 5 ರಂದು ಆಚರಿಸಲಾಗುತ್ತದೆ. ಈ ದಿನವನ್ನು ಮೊದಲ ಬಾರಿಗೆ 1974 ರಲ್ಲಿ ಅಮೇರಿಕಾದ ಸ್ಪೋಕೇನ್ ನಗರದಲ್ಲಿ ಆಚರಿಸಲಾಯಿತು. ಪರಿಸರದ ಬಗ್ಗೆ ಜಾಗೃತಿ ಮತ್ತು ಸಂರಕ್ಷಣೆಯನ್ನು ಉತ್ತೇಜಿಸಲು ಈ ದಿನವನ್ನು ಆಚರಿಸಲಾಗುತ್ತದೆ. ಈ ವರ್ಷ ಕೊಲಂಬಿಯಾ ಮತ್ತು ಜರ್ಮನಿಯ ಸಹಯೋಗದೊಂದಿಗೆ ವಿಶ್ವ ಪರಿಸರ ದಿನ 2020 ಅನ್ನು ಆಯೋಜಿಸುತ್ತಿದೆ.
* ಆಶಯ: "ನಮಗೆ ಇರುವುದೊಂದೇ ಭೂಮಿ ಅದರ ರಕ್ಷಣೆ ನಮ್ಮೆಲ್ಲರ ಹೊಣೆ' ಎಂಬುದು ಸಾರ್ವತ್ರಿಕವಾದ ಆಶಯವಾಗಿದೆ.
* ಹಿನ್ನೆಲೆ: 1972 ರಲ್ಲಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಮಾನವ ಪರಿಸರ ಕುರಿತ ಸ್ಟಾಕ್ಹೋಮ್ ಸಮ್ಮೇಳನದ ಮೊದಲ ದಿನದಂದು ವಿಶ್ವ ಪರಿಸರ ದಿನವನ್ನು ಆಚರಿಸಲು ನಿರ್ಧರಿಸಲಾಯಿತು.
* THEME OF 2020 IS: 'ಜೀವವೈವಿಧ್ಯ'

# Current affairs of June 2020 from KPSC Vaani

## 06 06 2020 ದಕ್ಷಿಣ ಭಾರತದ ಈ ಎರಡು ಜಿಲ್ಲೆಗಳು ಕೋರೋಣ ಮುಕ್ತ




ಚಾಮರಾಜನಗರ: ಇಡೀ ದಕ್ಷಿಣ ಭಾರತದಲ್ಲಿ ಪ್ರಸ್ತುತ ಎರಡೇ ಎರಡು ಜಿಲ್ಲೆಗಳು ಕೋವಿಡ್ ಸೋಂಕಿನ ಭೀತಿಯಿಂದ ಮುಕ್ತವಾಗಿವೆ. ಆ ಎರಡು ಜಿಲ್ಲೆಗಳೆಂದರೆ ಒಂದು ಕರ್ನಾಟಕದ ಚಾಮರಾಜನಗರ ಮತ್ತು ತೆಲಂಗಾಣದ ವಾರಂಗಲ್ ಗ್ರಾಮಾಂತರ.
* ಚಾಮರಾಜನಗರ ಜಿಲ್ಲೆ ಕರ್ನಾಟಕದ ಏಕೈಕ ಕೋವಿಡ್ ಮುಕ್ತ ಜಿಲ್ಲೆ ಎಂಬುದು ಖಚಿತವಾಗಿದೆ.
* ದಕ್ಷಿಣ ಭಾರತದಲ್ಲಿ ಕೇವಲ ಎರಡು ಜಿಲ್ಲೆಗಳು ಮಾತ್ರ ಕೋವಿಡ್ ಮುಕ್ತ ವಾಗಿದ್ದು, ದಕ್ಷಿಣ ಭಾರತದ ಆಂಧ್ರ ಪ್ರದೇಶ, ತಮಿಳುನಾಡು, ಕೇರಳದ ಎಲ್ಲ ಜಿಲ್ಲೆಗಳಲ್ಲೂ ಪಾಸಿಟಿವ್ ಪ್ರಕರಣಗಳು ಕಂಡು ಬಂದಿವೆ.
* ಕರ್ನಾಟಕದ ಏಕೈಕ ಕೋವಿಡ್ ಮುಕ್ತ ಜಿಲ್ಲೆಯಾದ ಚಾಮರಾಜನಗರ ತೆಲಂಗಾಣದ ವಾರಂಗಲ್ ಗ್ರಾಮಾಂತರ ಜಿಲ್ಲೆಯ ಜೊತೆ ಈ ಗೌರವ ಹಂಚಿಕೊಳ್ಳುವ ಮೂಲಕ ಅಪರೂಪದ ಸಾಧನೆ ಮಾಡಿದೆ.


## 06 06 2020 ಕಿರಣ್ ಮಜುಂದಾರ್ ಶಾ ಅವರಿಗೆ ಪ್ರತಿಷ್ಠಿತ ಇವೈ(EY) ವಿಶ್ವದ ವರ್ಷದ ಉದ್ಯಮಿ ಪ್ರಶಸ್ತಿ




ದೆಹಲಿ: ಬಯೋಕಾನ್ ಕಂಪನಿಯ ಕಾರ್ಯನಿರ್ವಾಹಕ ಮುಖ್ಯಸ್ಥರಾದ ಕಿರಣ್ ಮಜುಂದಾರ್ ಶಾ ಅವರಿಗೆ 2020ನೇ ಸಾಲಿನ ಪ್ರತಿಷ್ಠಿತ ಇವೈ(EY) ವಿಶ್ವದ ವರ್ಷದ ಉದ್ಯಮಿ ಪ್ರಶಸ್ತಿ ಲಭಿಸಿದೆ.
* ಕಳೆದ 20 ವರ್ಷಗಳಲ್ಲಿ ಭಾರತದಲ್ಲಿ ಈ ಪ್ರಶಸ್ತಿಗೆ ಭಾಜನರಾದ ಮೂರನೇ ಭಾರತೀಯ ವ್ಯಕ್ತಿ ಇವರಾಗಿದ್ದಾರೆ.
* ಕೊಟಕ್ ಮಹೀಂದ್ರಾ ಬ್ಯಾಂಕ್ ನ ಉದಯ್ ಕೊಟಕ್ (2014) ಮತ್ತು ಇನ್ಫೋಸಿಸ್ ಟೆಕ್ನಾಲಜೀಸ್ ಲಿಮಿಟೆಡ್ ನ ನಾರಾಯಣ ಮೂರ್ತಿ (2005) ಈ ಪ್ರಶಸ್ತಿ ಪಡೆದಿದ್ದರು.
* 2011ರಲ್ಲಿ ಸಿಂಗಪುರದ ಹೈಫ್ಲಕ್ಸ್ ಲಿಮಿಟೆಡ್‌ನ ಒಲಿವಿಯಾ ಲುಮ್ ಅವರ ನಂತರ ಈ ಪ್ರಶಸ್ತಿಯನ್ನು ಪಡೆದ ಎರಡನೇ ಮಹಿಳೆ ಎಂಬ ಹೆಗ್ಗಳಿಕೆಗೂ ಮಜುಂದಾರ್ ಶಾ ಪಾತ್ರರಾಗಿದ್ದಾರೆ.
* 67 ವರ್ಷದ ಕಿರಣ್ ಮಜುಂದಾರ್ ಶಾ 1978 ರಲ್ಲಿ ಕೇವಲ ಇಬ್ಬರು ಉದ್ಯೋಗಿಗಳು ಮತ್ತು 500 ಡಾಲರ್‌ದೊಂದಿಗೆ ಬಯೋಕಾನ್ ಕಂಪನಿಯನ್ನು ಸ್ಥಾಪಿಸಿದರು.

# Current affairs of June 2020 from KPSC Vaani

**07 06 2020 ಫೋರ್ಬ್ಸ್ ವಿಶ್ವದ ಶ್ರೀಮಂತ ಸೆಲೆಬ್ರಿಟಿಗಳ ಪಟ್ಟಿಯಲ್ಲಿ ಅಕ್ಷಯಕುಮಾರಗೆ ಸ್ಥಾನ**



ವಾರ್ಷಿಕ ಅತಿ ಹೆಚ್ಚು ಸಂಭಾವನೆ ಪಡೆದ ವಿಶ್ವದ ಟಾಪ್ 100 ಸೆಲೆಬ್ರಿಟಿಗಳ ಹೆಸರನ್ನು ಫೋರ್ಬ್ಸ್ ನಿಯತಕಾಲಿಕೆ ಬಿಡುಗಡೆ ಮಾಡಿದ್ದು, ಈ ಪಟ್ಟಿಯಲ್ಲಿ ಸ್ಥಾನ ಪಡೆದ ಭಾರತದ ಏಕೈಕ ಸೆಲೆಬ್ರಿಟಿಯಾಗಿ ಅಕ್ಷಯ್ ಕುಮಾರ್ ಕಾಣಿಸಿಕೊಂಡಿದ್ದಾರೆ. ವಾರ್ಷಿಕ 365 ಕೋಟಿ ರೂಪಾಯಿ ಸಂಭಾವನೆ ಪಡೆಯುವ ಮೂಲಕ ಅಕ್ಷಯ ಈ ಪಟ್ಟಿಯಲ್ಲಿ 52ನೇ ಸ್ಥಾನದಲ್ಲಿದ್ದಾರೆ.
* ಲಾಕ್ ಡೌನ್ ಪರಿಣಾಮವಾಗಿ ಪಟ್ಟಿಯಲ್ಲಿ ಕಳೆದ ವರ್ಷ 33ನೇ ಸ್ಥಾನದಲ್ಲಿದ್ದ ಅಕ್ಷಯ್ ಕುಮಾರ್ ಈ ಬಾರಿ 52ನೇ ಸ್ಥಾನಕ್ಕೆ ಕೆಳಗಿಳಿದಿದ್ದಾರೆ.

**07 06 2020 ಕೊರೋನ ವಿರುದ್ಧ ಜಾಗೃತಿಗಾಗಿ 'ಬದಲಾಗು ನೀನು, ಬದಲಾಯಿಸು ನೀನು' ದೃಶ್ಯರೂಪಕ**




ಬೆಂಗಳೂರು : ರಾಜ್ಯ ಸರ್ಕಾರವು ಕೊರೋನ ವೈರಸ್ ವಿರುದ್ಧದ ಹೋರಾಟದಲ್ಲಿ ಹಲವು ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ, ಇದೀಗ ಕೋರೋಣ ಸೋಂಕಿನ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಕನ್ನಡದ ಚಿತ್ರರಂಗ ಹಾಗು ಕ್ರೀಡಾರಂಗದ ಪ್ರಮುಖರು ಭಾಗಿಯಾಗಿರುವ ದೃಶ್ಯರೂಪಕ 'ಬದಲಾಗು ನೀನು, ಬದಲಾಯಿಸು ನೀನು' #MYHERO ವನ್ನು ರಾಜ್ಯದ ಮುಖ್ಯಮಂತ್ರಿ ಯಡಿಯೂರಪ್ಪನವರು ಬಿಡುಗಡೆಗೊಳಿಸಿದರು.

# Current affairs of June 2020 from KPSC Vaani

### 07 06 2020 ತರಂಗ ವಾರಪತ್ರಿಕೆ ಸಂಪಾದಕಿ ಡಾ. ಯು.ಬಿ. ರಾಜಲಕ್ಷ್ಮಿಯವರಿಗೆ ಖಾದ್ರಿ ಶಾಮಣ್ಣ ಪ್ರಶಸ್ತಿ



ಬೆಂಗಳೂರು: ಹಿರಿಯ ಪತ್ರಕರ್ತೆ, ತರಂಗ ವಾರಪತ್ರಿಕೆಯ ಸಂಪಾದಕಿಯಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಯು.ಬಿ.ರಾಜಲಕ್ಷ್ಮಿಯವರಿಗೆ ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಉಡುಪಿಯ ಜಿಲ್ಲೆಯ ಕಾರ್ಕಳದವರಾದ ಡಾ. ಯು.ಬಿ. ರಾಜಲಕ್ಷ್ಮಿ ಕಳೆದ 37 ವರ್ಷಗಳಿಂದ ಪತ್ರಿಕೋದ್ಯಮದಲ್ಲಿ ತಮ್ಮ ಸೇವೆ ಸಲ್ಲಿಸುತ್ತಿದ್ದು, 1987 ರಲ್ಲಿ ಉದಯವಾಣಿ ಪತ್ರಿಕೆಯ ಸೋದರ ವಾರ ಪತ್ರಿಕೆಯಾದ ತರಂಗ ವಾರಪತ್ರಿಕೆಯಲ್ಲಿ ತಮ್ಮ ಸೇವೆ ಆರಂಭಿಸಿ ಪ್ರಸ್ತುತ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.
* ಮೈಸೂರು ವಿವಿಯಲ್ಲಿ ಕನ್ನಡ ಎಂ.ಎ ಮತ್ತು ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ ಪಡೆದು ಹಂಪಿ ವಿವಿಯಲ್ಲಿ ಡಾಕ್ಟರೇಟ್ ಪಡೆದಿದ್ದಾರೆ.
* ಇವರ ಪ್ರತಿಕಾರಂಗದ ಸಾಧನೆಯನ್ನು ಪರಿಗಣಿಸಿ, ಖಾದ್ರಿ ಶಾಮಣ್ಣ ಟ್ರಸ್ಟ್ ಈ ವರ್ಷದ ಪ್ರಶಸ್ತಿಯನ್ನು ನೀಡುತ್ತಿದ್ದು, ಪ್ರಶಸ್ತಿ 15 ಸಾವಿರ ರೂ. ನಗದು ಹಾಗೂ ಫಲಕ ಹೊಂದಿರುತ್ತದೆ.

### 08 06 2020 ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದಿಂದ 'ಬೆಂಗಳೂರು ಮೇಘ ಸಂದೇಶ' ಆಪ್ ಬಿಡುಗಡೆ



ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ರಾಜ್ಯದಲ್ಲಿನ ವಿವಿಧ ನೈಸರ್ಗಿಕ ವಿಕೋಪಗಳ ಕುರಿತು ಉಸ್ತುವಾರಿ ಹಾಗೂ ಜವಾಬ್ದಾರಿಗಳನ್ನು ಹೊಂದಿರುತ್ತದೆ. ಅಲ್ಲದೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಸಂಸ್ಥೆಗಳಿಗೆ ವಿಪತ್ತು ನಿರ್ವಹಣೆಗೆ ಕುರಿತ ಎಲ್ಲ ತಂತ್ರಜ್ಞಾನ ಆಧಾರಿತ ತಾಂತ್ರಿಕ ನೆರವನ್ನು ನೀಡುತ್ತಿದೆ. ಪ್ರಸ್ತುತ KSNDMC ಯು ಭಾರತೀಯ ವಿಜ್ಞಾನ ಸಂಸ್ಥೆ (IISc). ಬೆಂಗಳೂರು ಇವರ ಸಹಯೋಗದೊಂದಿಗೆ 'ಬೆಂಗಳೂರು ನಗರ ಪ್ರವಾಹ ನಿರ್ವಹಣೆ ಮಾದರಿ' ಯನ್ನು ಅಭಿವೃದ್ಧಿಪಡಿಸಿದ್ದು. ಈ ಯೋಜನೆಯ ಮೂಲಕ ಬೆಂಗಳೂರು ನಗರದಲ್ಲಿ ಸಂಭವಿಸಬಹುದಾದ ಮಳೆ ಮುನ್ಸೂಚನೆ. ಪ್ರವಾಹ ಮುನ್ಸೂಚನೆ ಹಾಗೂ ಮುನ್ನೆಚ್ಚರಿಕೆಗಳನ್ನು ಪ್ರತಿ ದಿನ ನಗರದ ವಿವಿಧ ಇಲಾಖೆಗಳ ವಲಯವಾರು ಅಧಿಕಾರಿಗಳಿಗೆ ನೀಡಲಗುವದು.

# Current affairs of June 2020 from KPSC Vaani

## 08 06 2020 ಜಿಯೋಸಂಸ್ಥೆಯಲ್ಲಿADIAನಿಂದ5,683ಕೋಟಿರೂ ಹೂಡಿಕೆ

ಮುಂಬೈ : ಅಬು ಧಾಬಿ ಇನ್ವೆಸ್ಟ್‌ಮೆಂಟ್ ಅಥಾರಿಟಿ (ADIA) ಸಂಸ್ಥೆಯು ರಿಲಯನ್ಸ್ ಸಂಸ್ಥೆಯ ಅಂಗ ಸಂಸ್ಥೆಯಾದ ಜಿಯೋದಲ್ಲಿ ಶೇ. 1.16 ರಷ್ಟು ಪಾಲುನ್ನು ಖರೀದಿಸಲು ನಿರ್ಧರಿಸಿರುವದಾಗಿ ತಿಳಿದುಬಂದಿದ್ದು,ಈ ಮೂಲಕಸಂಸ್ಥೆಯುಒಟ್ಟು5,683ಕೋಟಿರೂಬಂಡವಾಳಹೂಡಿಕೆಮಾಡುವುದು.

* ರಿಲಾಯನ್ಸ್ ಜಿಯೋದಲ್ಲಿ ಹೂಡಿಕೆ ಅಥವಾ ಪಾಲು ಖರೀದಿ ಮಾಡುತ್ತಿರುವ 7ನೇ ಸಂಸ್ಥೆ ADIA ಯಾಗಿದೆ.

* ಈಗಾಗಲೇ ಫೇಸ್‌ಬುಕ್, ಸಿಲ್ವರ್ ಲೇಕ್, ವಿಸ್ಟಾ ಈಕ್ವಿಟಿ, ಜನರಲ್ ಅಟ್ಲಾಂಟಿಕ್, ಕೆಕೆಆರ್, ಮುಬಾದಲ ಮತ್ತು ಈಗ ಅಬುಧಾಬಿ ಇನ್‌ವೆಸ್ಟ್‌ಮೆಂಟ್ ಅಥಾರಿಟಿ ಸಂಸ್ಥೆ ಈವರೆಗೆ ಜಿಯೋದಲ್ಲಿ ಹೂಡಿಕೆ ಮಾಡಿವೆ.

* ಈ 7 ಸಂಸ್ಥೆಗಳ ಹೂಡಿಕೆ ಒಪ್ಪಂದಗಳಿಂದಾಗಿ ರಿಲಾಯನ್ಸ್ ಜಿಯೋಗೆ ಸಂಸ್ಥೆಗೆ ಒಟ್ಟು ರೂಪಾಯಿ 97,885.65 ಕೋಟಿ ಬಂಡವಾಳ ಹರಿದುಬರಲಿದೆ.

* ಇಲ್ಲಿಯವರೆಗೆ ಜಿಯೋ ಸಂಸ್ಥೆಯು ತನ್ನ ಒಟ್ಟು ಶೇ. 21.06ರಷ್ಟು ಪಾಲನ್ನು ಮಾರಿದಂತಾಗಿದೆ.


## 08 06 2020 ಚಂದನವನದನಾಯಕನಟ'ಚಿರಂಜೀವಿಸರ್ಜಾ'ನಿಧನ



ಚಂದನವನದ ನಟ ಚಿರಂಜೀವಿ ಸರ್ಜಾ ಅವರಿಗೆ ತೀವ್ರ ಉಸಿರಾಟದ ತೊಂದರೆಯಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರು ಎಳೆದಿದ್ದಾರೆ. ಇವರು ಹುಟ್ಟಿದ್ದು ಬೆಂಗಳೂರಿನಲ್ಲಿ. ತಮ್ಮ ಬಾಲ್ಯ ಶಿಕ್ಷಣವನ್ನು ಬಾಲ್ಡ್ವಿನ್ ಬಾಲಕರ ಪ್ರೌಢ ಶಾಲೆಯಲ್ಲಿ ಪೂರ್ಣಗೊಳಿಸಿದರು. ಇವರು ಸುಮಾರು4ವರ್ಷಗಳಿಂದಅವರಚಿಕ್ಕಪ್ಪರಾದ ಅರ್ಜುನ್‌ಸರ್ಜಾರವರಸಹಾಯಕನಿರ್ದೇಶಕರಾಗಿಕೆಲಸವನ್ನು ಮಾಡಿ ನಂತರದ ದಿನಗಳಲ್ಲಿ ಅಂದರೆ 2009 ರಿಂದ ಬೆಳ್ಳಿ ಪರದೆಗೆ ಕಾಲಿಟ್ಟರು. 2009 ರಲ್ಲಿ ತೆರೆಗೆ ಬಂದ 'ವಾಯುಪುತ್ರ' ಎಂಬ ಕನ್ನಡ ಚಲನಚಿತ್ರದಲ್ಲಿ ಮುಖ್ಯಪಾತ್ರ ವಹಿಸಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ವಿಶಿಷ್ಟ ನಟನೆಯ ಮೂಲಕ ಗುರ್ತಿಸಿಕೊಂಡಿದ್ದ ನಟ ಚಿರಂಜೀವಿ ಸರ್ಜಾ ಅವರಿಗೆ ಇಂದು ತೀವ್ರ ತರವಾದಂತ ಉಸಿರಾಟದ ತೊಂದರೆ ಕಾಣಿಸಿಕೊಂಡ ಹಿನ್ನಲೆ ಅವರನ್ನು ಕೂಡಲೇ ಕುಟುಂಬಸ್ಥರು ಹತ್ತಿರದಅಪಲೋಆಸ್ಪತ್ರೆಗೆದಾಖಲಿಸಿದರುಕೂಡಚಿಕಿತ್ಸೆಫಲಕಾರಿಯಾಗದೇನಿಧನರಾಗಿದ್ದಾರೆ.

# Current affairs of June 2020 from KPSC Vaani

### 08 06 2020 ಗೀತರಚನೆಕಾರ ಜಾವೇದ್ ಅಖ್ತರ್‌ಗೆ ಪ್ರತಿಷ್ಠಿತ 'ರಿಚರ್ಡ್ ಡಾಕಿನ್ಸ್' ಪ್ರಶಸ್ತಿ



ಮುಂಬೈ : ರಾಷ್ಟ್ರೀಯ ಪ್ರಶಸ್ತಿ ವಿಜೇತ ಗೀತರಚನೆಕಾರ ಮತ್ತು ಚಲನಚಿತ್ರಗಳ ಸಾಹಿತ್ಯ ರಚನೆಕಾರ ಜಾವೇದ್ ಅಖ್ತರ್ ಅವರನ್ನು ಪ್ರತಿಷ್ಠಿತ ರಿಚರ್ಡ್ ಡಾಕಿನ್ಸ್ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ. ಭಾರತದ ಚಿತ್ರರಂಗದಲ್ಲಿ ಪ್ರಮುಖ ವ್ಯಕ್ತಿಯಾಗಿರುವ ಜಾವೇದ್ ಅಖ್ತರ್ ಅವರು ಹಲವು ಸಾಮಾಜಿಕ ವಿಷಯಗಳ ಬಗ್ಗೆ ಧ್ವನಿಯೆತ್ತಿತ್ತಿರುತ್ತಾರೆ. ಪೌರತ್ವ ತಿದ್ದುಪಡಿ ಕಾಯ್ದೆ, ಇಸ್ಲಾಮೊಫೋಬಿಯಾ ಸೇರಿ ಮುಂತಾದ ವಿಷಯಗಳ ಬಗ್ಗೆ ತಮ್ಮ ಅನಿಸಿಕೆ ಹಾಗೂ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.

### 09 06 2020 ಪ್ರತಿದಿನ ಒಂದು ಕೋಟಿ ಬ್ಯಾರೆಲ್ ತೈಲ ಉತ್ಪಾದನೆ ಕಡಿತ : ಒಪೆಕ್ ರಾಷ್ಟ್ರಗಳ ಸಮ್ಮತಿ



ಮಾಸ್ಕೋ : ಜಾಗತಿಕವಾಗಿ ವ್ಯಪಿಸಿರುವ ಕೊರೊನಾ ಸಂಕಷ್ಟದಿಂದಾಗಿ ತೈಲ ಬೆಲೆಯಲ್ಲಿ ತೀವ್ರ ಏರುಪೇರುಗಳಾಗಿದ್ದು, ಈ ತೈಲ ಬೆಲೆ ಬಿಕ್ಕಟ್ಟು ಶಮನಗೊಳಿಸಲು ಪೆಟ್ರೋಲಿಯಂ ರಫ್ತು ರಾಷ್ಟ್ರಗಳ ಸಂಘಟನೆ (ಒಪೆಕ್) ಮತ್ತು ಮಿತ್ರ ರಾಷ್ಟ್ರಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿ ಜುಲೈ ತಿಂಗಳ ಅಂತ್ಯದ ವರೆಗೆ ಪ್ರತಿ ದಿನ ಸೀಮಿತ ಒಂದು ಕೋಟಿ ಬ್ಯಾರೆಲ್ ತೈಲ ಮಾತ್ರ ಉತ್ಪಾದಿಸಲು ಹಾಗು ಈ ಮೂಲಕ ತೈಲ ಬೆಲೆಯಲ್ಲಿ ಹಿಡಿತ ಸಾಧಿಸುವ ನಿರ್ಧಾರಕ್ಕೆ ಸಮ್ಮತಿಸಿವೆ. ಈ ಸಭೆಯಲ್ಲಿ ವಿವಿಧ ದೇಶಗಳ ಸಚಿವರು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಸಭೆ ನಡೆಸಿ ಬೆಲೆ ನಿಯಂತ್ರಣಕ್ಕಾಗಿ ಉತ್ಪಾದನೆ ಕಡಿತಗೊಳಿಸಲು ಕೈಗೊಳ್ಳಬಹುದಾದ ಕ್ರಮಗಳು ಸೇರಿ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ.

# Current affairs of June 2020 from KPSC Vaani



# Current affairs of June 2020 from KPSC Vaani

## 09 06 2020 ಬೆಂಗಳೂರು ಪೊಲೀಸರರಿಂದ 'ನಮ್ಮ ಹಿರಿಯರು' ಯೋಜನೆ



ಬೆಂಗಳೂರು : ಬೆಂಗಳೂರು ಪೊಲೀಸರು ಇತ್ತೀಚಿಗೆ 'ನಮ್ಮ ಹಿರಿಯರು' ಎಂಬ ವಿನೂತನ ಕಾರ್ಯಕ್ರಮವನ್ನು ಆರಂಭಿಸಿದ್ದಾರೆ. ಈ ಕಾರ್ಯಕ್ರಮವು ಸಾರ್ವಜನಿಕರಿಂದ ಅಪಾರ ಮೆಚ್ಚುಗೆ ಪಡೆದಿದ್ದು, ಹಿರಿಯರಿಗೆ ಯಾವುದೇ ಸಮಸ್ಯೆ ಇದ್ದರೂ, ಸಾರ್ವಜನಿಕರು "ನಮ್ಮ ಹಿರಿಯರು" ಕಾರ್ಯಕ್ರಮದ ಮೂಲಕ ಪೊಲೀಸ ಇಲಾಖೆಯನ್ನು ಸಂಪರ್ಕಮಾಡಬಹುದು. ಅಲ್ಲದೆ ಮನೆಯಲ್ಲಿ ಇರುವ ಹಿರಿಯರು ತಮಗೆ ಬೇಕಾದ ಸಹಾಯ ಮತ್ತು ರಕ್ಷಣೆಯನ್ನು ಪೊಲೀಸರ ಮೂಲಕ ಪಡೆಯಬಹುದಾಗಿದೆ.

* ಈ ಯೋಜನೆಗೆ ನಟ ರಮೇಶ್ ಅರವಿಂದ್ ಕೈ ಜೋಡಿಸಿದ್ದಾರೆ.
* 8277946994 & 8277946995 ಈ ಎರಡು ವಾಟ್ಸ್ ಅಪ್ ನಂಬರ್‌ಗಳಿಗೆ ಕರೆ ಅಥವಾ ಸಂದೇಶಗಳ ಮೂಲಕ ಹಿರಿಯರು ಸದಸ್ಯರಾಗಬೇಕು, ಬಳಿಕ ಈ ವಿವರ ಪೊಲೀಸರ ಬಳಿ ಸದಾ ಇರುತ್ತದೆ.

## 09 06 2020 ಸ್ವಿಟ್ಜರ್ಲೆಂಡ್ ನ ಭಾರತದ ಮುಂದಿನ ರಾಯಭಾರಿಯಾಗಿ ಮೊನಿಕಾ ಕಪಿಲ್ ಮೊಹ್ತಾ ನೇಮಕ




ನವದೆಹಲಿ: ಸ್ವಿಟ್ಜರ್ಲೆಂಡ್ ನ ಭಾರತದ ಮುಂದಿನ ರಾಯಭಾರಿಯಾಗಿ ಮೊನಿಕಾ ಕಪಿಲ್ ಮೊಹ್ತಾ ಅವರನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯ ನೇಮಿಸಿ ಪ್ರಕಟಣೆ ಹೊರಡಿಸಿದೆ. ಭಾರತೀಯ ವಿದೇಶಾಂಗ ಸೇವೆಯ 1985ರ ಬ್ಯಾಚಿನ ಅಧಿಕಾರಿಯಾಗಿರುವ ಮೊನಿಕಾ ಪ್ರಸ್ತುತ ಸ್ವಿಡನ್ ದೇಶದ ಭಾರತೀಯ ರಾಯಭಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಶೀಘ್ರದಲ್ಲಿಯೇ ಅವರು ಸ್ವಿಟ್ಜರ್ಲೆಂಡ್ ನ ಭಾರತದ ಮುಂದಿನ ರಾಯಭಾರಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

# Current affairs of June 2020 from KPSC Vaani

### 09 06 2020 ಭೂಮಿಯನ್ನು ಹೋಲುವ ಮತ್ತೊಂದು ಗ್ರಹ ಪತ್ತೆ



ಜರ್ಮನಿಯಾ ಗೊಟ್ಟಿಂಗನ್‌ನಲ್ಲಿರುವ ಮ್ಯಾಕ್ಸ್ ಪ್ಲ್ಯಾಂಕ್ ಇನ್‌ಸ್ಟಿಟ್ಯೂಟ್ ಫಾರ್ ಸೋಲಾರ್ ಸಿಸ್ಟಮ್ ರಿಸರ್ಚ್ ನೇತೃತ್ವದ ಖಗೋಳ ವಿಜ್ಞಾನಿಗಳ ತಂಡವು ಭೂಮಿಯನ್ನು ಹೋಲುವ ಮತ್ತೊಂದು ಗ್ರಹವನ್ನು ಪತ್ತೆಹಚ್ಚಿದೆ. * ಈ ನೂತನ ಗ್ರಹಕ್ಕೆ 'ಪ್ಲಾನೆಟ್ ಕೆಒಐ 456.04' ಎಂದು ಹೆಸರಿಸಲಾಗಿದೆ.

* ಇದು ನಾವು ವಾಸಿರುವ ಭೂಮಿಯಷ್ಟೇ ದೊಡ್ಡದಾಗಿದ್ದು, ಭೂಮಿಯಿಂದ 3,000 ಜ್ಯೋತಿರ್ವರ್ಷಗಳಷ್ಟು ದೂರವಿದೆ.

* ಇತ್ತೀಚೆಗೆ, ಭೂಮಿಯಷ್ಟೇ ದೊಡ್ಡದಾಗಿರುವ ಸೂಪರ್ ಅರ್ತ್, ಕೆಪ್ಲರ್ 452ಬಿ, ಪ್ರೋಕ್ಸಿಮಾ ಬಿ ಎಂಬ 3 ಗ್ರಹಗಳನ್ನ ಪತ್ತೆಯಾಗಿತ್ತು. ಈಗ, "ಪ್ಲಾನೆಟ್ ಕೆಒಐ 456.04"ಗ್ರಹವನ್ನು ಪತ್ತೆ ಹಚ್ಚಲಾಗಿದೆ.

* 3,000 ಜ್ಯೋತಿರ್ವರ್ಷ:ಭೂಮಿಗೂ,ಹೊಸ ಗ್ರಹಕ್ಕೂ ಇರುವ ದೂರ

*378ದಿನ:ಸೂರ್ಯನನ್ನು ಒಂದು ಸುತ್ತು ಹಾಕಲು ಪ್ಲಾನೆಟ್ ಕೆಒಐ 456.04 ತೆಗೆದುಕೊಳ್ಳುವ ಸಮಯ

### 10 06 2020 ಕೇಂದ್ರದ ಮಾಜಿ ಸಚಿವ ಅರ್ಜುನ್ ಚರಣ್ ಸೇಥಿ ನಿಧನ



ಭುವನೇಶ್ವರ್ : ಕೇಂದ್ರದ ಮಾಜಿ ಸಚಿವ ಅರ್ಜುನ್ ಚರಣ್ ಸೇಥಿಯವರು ದೀರ್ಘಕಾಲದ ಅನಾರೋಗ್ಯ ಸಮಸ್ಯೆಯಿಂದ ದಿನಾಂಕ 08June2020ರಂದು ತಮ್ಮ 79ನೇ ವಯಸ್ಸಿನಲ್ಲಿ ನಿಧನರಾದರು.


* ಭದ್ರಾಕ್ ಲೋಕಸಭಾ ಕ್ಷೇತ್ರದಿಂದ 8 ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು.

* 2000 2004 ರವರೆಗೆ ಅಟಲ್ ಬಿಹಾರಿ ವಾಜಪೇಯಿ ಅವರ ಎನ್ ಡಿ ಎ ಸರ್ಕಾರದಲ್ಲಿ ಜಲ ಸಂಪನ್ಮೂಲ ಸಚಿವರಾಗಿ ತಮ್ಮ ಸೇವೆ ನೀಡಿದ್ದಾರೆ.

* ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದ ಸೇಥಿ ಮೃದು ಮಾತಿನ ವ್ಯಕ್ತಿತ್ವ ಉಳ್ಳವರಾಗಿದ್ದರು.

# Current affairs of June 2020 from KPSC Vaani

### 10 06 2020 'ಕೊರೋನಾ ವಾರಿಯರ್ ಪ್ರಶಸ್ತಿ' ಪಡೆದ ಅಗರ್ವಾಲ್ ಸಮಾಜದ ಅಧ್ಯಕ್ಷ 'ಸಂಜಯ್ ರಾಮವತಾರ್ ಗಾರ್ಗ್'




ಬೆಂಗಳೂರು :ಪ್ರತಿಷ್ಠಿತ ಟೈಮ್ಸ್ ಗ್ರೂಪ್ ಕೋರೋಣ ಲಾಕ್ ಡೌನ್ ಸಮಯದಲ್ಲಿ ಕೋವಿಡ್ 19 ಸೋಂಕು ತಡೆಗಟ್ಟುವ ನಿಟ್ಟಿನಲ್ಲಿ, ಕೊರೋನಾ ಬಗೆಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಿಸಿಕೊಂಡ ಅರ್ಹ ವ್ಯಕ್ತಿಯನ್ನು ಗುರುತಿಸಿ "ಕೊರೋನಾ ವಾರಿಯರ್ ಅವಾರ್ಡ್" ನೀಡಿದೆ. ಟೈಮ್ಸ್ ಗ್ರೂಪ್ ನೀಡುವ ಈ ಪ್ರಶಸ್ತಿಯನ್ನು ಅಗರ್ವಾಲ್ ಸಮಾಜದ ಅಧ್ಯಕ್ಷರಾದ ಸಂಜಯ್ ರಾಮವತಾರ್ ಗಾರ್ಗ್ ಅವರಿಗೆ ದೊರೆತಿದೆ. ಲಾಕ್ ಡೌನ್ ಸಮಯದಲ್ಲಿ ಸಂಕಷ್ಟಕ್ಕೆ ಒಳಗಾದ ಜನರಿಗೆ ಅಗರ್ವಾಲ್ ಸಮಾಜದ ಸಂಜಯ್ ರಾಮವತಾರ್ ಗಾರ್ಗ್ ಒದಗಿಸಿದ ಸಾಮಾಜಿಕ ಕಾರ್ಯವನ್ನು ಗಮನಿಸಿದ ಸಿಎಸ್ಆರ್ ಟೈಮ್ಸ್ ಮತ್ತು ಇಂಡಿಯಾ ಅಚೀವರ್ ಫಾರ್ಮ್, ಕೋವಿಡ್ 19 ವಾರಿಯರ್ ಅವಾರ್ಡ್ ನೀಡಿ ಗೌರವಿಸಿದೆ. ಈ ಮೂಲಕ ಸಿಎಸ್ಆರ್ ಟೈಮ್ಸ್ ಪ್ರಶಸ್ತಿಯನ್ನು ಬೆಂಗಳೂರಿನ ಅಗರ್ವಾಲ್ ಸಮಾಜ ಪಡೆದಿದೆ.

### 10 06 2020 ಉತ್ತರಾಖಂಡದ ಬೇಸಿಗೆ ರಾಜಧಾನಿಯಾಗಿ ಭರಾರಿಸೈನ್ ಘೋಷಣೆ



ಡೆಹ್ರಾಡೂನ್: ಉತ್ತರಾಖಂಡದ ಭರಾರಿಸೈನ್ (ಗೈರ್‌ಸೈನ್) ನಗರವನ್ನು ರಾಜ್ಯದ ಬೇಸಿಗೆ ರಾಜಧಾನಿ ಎಂದು ಘೋಷಿಸಲಾಗಿದೆ. ಚಾಮೋಲಿ ಜಿಲ್ಲೆಯ ಗೈರ್‌ಸೈನ್‌ನಿಂದ 14 ಕಿ.ಮೀ. ದೂರದಲ್ಲಿರುವ ಭರಾರಿಸೈನ್ ನಗರವನ್ನು ಉತ್ತರಾಖಂಡದ ಬೇಸಿಗೆ ರಾಜಧಾನಿಯನ್ನಾಗಿ ಘೋಷಿಸಿ ಉತ್ತರಾಖಂಡ ರಾಜ್ಯ ಸರಕಾರ ಅಧಿಸೂಚಿಸಿದೆ ಇದಕ್ಕೆ ರಾಜ್ಯಪಾಲರು ಕೂಡ ಅನುಮೋದನೆ ನೀಡಿದ್ದಾರೆ. ಭರಾರಿಸೈನ್ ನಗರದಲ್ಲಿ ಈಗಾಗಲೇ ಹಲವಾರು ವಿಧಾನಸಭಾ ಕಲಾಪಗಳನ್ನು ಆಯೋಜಿಸಲಾಗಿದ್ದು, ಇದೀಗ ಈ ನಗರವನ್ನು ಅಧಿಕೃತವಾಗಿ ಬೇಸಿಗೆ ರಾಜದಾನಿಯನ್ನಾಗಿಸಿದೆ. ಅಲ್ಲದೆ ಪ್ರಸ್ತುತ ರಾಜಧಾನಿಯಾಗಿರುವ ಡೆಹ್ರಾಡೂನ್ ನಗರವನ್ನು ಚಳಿಗಾಲದ ರಾಜಧಾನಿಯಾಗಿ ಮುಂದುವರೆಸಲಾಗುವದು.
* 2000 ನೇ ವರ್ಷದಲ್ಲಿ ಉತ್ತರಪ್ರದೇಶ ರಾಜ್ಯದ ಹಿಮಾಲಯ ಪರ್ವತ ಪ್ರಾಂತ್ಯವನ್ನು ಬೇರ್ಪಡಿಸಿ ಉತ್ತರಾಖಂಡ ರಾಜ್ಯವನ್ನು ರಚಿಸಲಾಗಿತ್ತು.

# Current affairs of June 2020 from KPSC Vaani

**11 06 2020 ವಿಶ್ವಸಂಸ್ಥೆ ಸಾಮಾನ್ಯ ಸಭೆಗೆ ಈ ಬಾರಿ ಜಾಗತಿಕ ನಾಯಕರು ಇಲ್ಲ**



ವಿಶ್ವಸಂಸ್ಥೆ: ವಿಶ್ವ ಸಂಸ್ಥೆಯ ಮಹತ್ವದ 75ನೇ ಸಾಮಾನ್ಯ ಸಭೆಯು ಇದೇ ಸೆಪ್ಟೆಂಬರ್ 15ರಿಂದ ಆರಂಭಗೊಳ್ಳಬೇಕಿತ್ತು. ಆದರೆ ಜಾಗತಿಕವಾಗಿ ಕೋವಿಡ್ ಸೋಂಕು ಆವರಿಸಿರುವ ಹಿನ್ನಲೆ ಮುಂದಿನ ಕೆಲವು ತಿಂಗಳು ವಿಶ್ವಸಂಸ್ಥೆಯಲ್ಲಿ ಯಾವುದೇ ಮುಖ್ಯ ಸಭೆಗಳು ನಡೆಯುವುದು ಅನುಮಾನವಾಗಿದೆ. 75 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಪಾಲ್ಗೊಳ್ಳಲು ವಿಶ್ವದ ಯಾವ ನಾಯಕರೂ ನ್ಯೂಯಾರ್ಕ್‌ಗೆ ಬರುತ್ತಿಲ್ಲ ಎಂದು ಸಾಮಾನ್ಯಸಭೆಯ ಅಧ್ಯಕ್ಷ ಟಿಜ್ಜನಿ ಮುಹಮ್ಮದ್ ಬಂದೆ ಅವರು ತಿಳಿಸಿದ್ದಾರೆ.

**11 06 2020 ಭಾರತದ ಆರ್ಥಿಕತೆ 3.2 ಪರ್ಸೆಂಟ್ ಕುಸಿಯುವ ಎಚ್ಚರಿಕೆ ನೀಡಿದ ವಿಶ್ವ ಬ್ಯಾಂಕ್**




ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಆರ್ಥಿಕತೆ 3.2 ಪರ್ಸೆಂಟ್ ನಷ್ಟು ಕುಗ್ಗಲಿದೆ ಎಂದು ವಿಶ್ವಬ್ಯಾಂಕ್ ತಿಳಿಸಿದೆ. ಜಾಗತಿಕವಾಗಿ ವ್ಯಾಪಿಸಿರುವ ಕೊರೊನಾ ಸೋಂಕಿನ ನಿಯಂತ್ರಣಕ್ಕಾಗಿ ವಿಧಿಸಿದ ಲಾಕ್ ಡೌನ್ ನಿಂದ ಭಾರತದ ಆರ್ಥಿಕತೆ ಮೇಲೆ ಪರಿಣಾಮ ಆಗಲಿದೆ ಎಂದು ಈಗಾಗಲೇ ಹಲವು ಸಂಸ್ಥೆಗಳು ತಿಳಿಸಿದ್ದು, ಇದೆ ವಿಷಯಗಳನ್ನೇ ಈಗ ವಿಶ್ವ ಬ್ಯಾಂಕ್ ಮತ್ತೊಮ್ಮೆ ಹೇಳಿದಂತಾಗಿದೆ. 2017ರಲ್ಲಿ ಭಾರತದ ಆರ್ಥಿಕತೆ ದರವು 7 ಪರ್ಸೆಂಟ್ ಇತ್ತು. ಆ ನಂತರ 2018ರಲ್ಲಿ 6.1 ಪರ್ಸೆಂಟ್ ಗೆ ಇಳಿಯಿತು. 2020ರ ಆರ್ಥಿಕ ವರ್ಷದಲ್ಲಿ 4.2% ಕುಗ್ಗಿದೆ ಎಂದು ವಿಶ್ವ ಬ್ಯಾಂಕ್ ಹೇಳಿದೆ.

# Current affairs of June 2020 from KPSC Vaani

## 11 06 2020 ಕರ್ನಾಟಕ ಸಂಘದ ಜೀವಮಾನ ಸಾಧನೆ ಪ್ರಶಸ್ತಿಗೆ ಚಂಪಾ ಮತ್ತು ಡಾ.ಎಚ್.ಎಸ್.ರಾಘವೇಂದ್ರ ರಾವ್ ಆಯ್ಕೆ



ಶಿವಮೊಗ್ಗ: ಕರ್ನಾಟಕ ಸಂಘದ ಈ ವರ್ಷದ ಜೀವಮಾನ ಸಾಧನೆ ಪ್ರಶಸ್ತಿ ಘೋಷಣೆ ಮಾಡಿದ್ದು, ಈ ಪ್ರಶಸ್ತಿಗೆ ಡಾ.ಚಂದ್ರಶೇಖರ ಪಾಟೀಲ ಹಾಗೂ ಡಾ.ಎಚ್.ಎಸ್.ರಾಘವೇಂದ್ರ ರಾವ್ ಅವರನ್ನು ಆಯ್ಕೆ ಮಾಡಲಾಗಿದೆ. ಕಾವ್ಯ ಕ್ಷೇತ್ರದ ಮಧೂರಿವ ಸಾಧನೆ ಗುರುತಿಸಿ ಡಾ.ಚಂದ್ರಶೇಖರ ಪಾಟೀಲ ಅವರಿಗೆ ದ.ರಾ.ಬೇಂದ್ರೆ ಪ್ರಶಸ್ತಿ, ಮತ್ತು ವಿಮರ್ಶಾ ಕ್ಷೇತ್ರದ ಸಾಧನೆಗೆ ಡಾ.ಎಚ್.ಎಸ್.ರಾಘವೇಂದ್ರ ಅವರಿಗೆ ಪ್ರೊ. ತೀ.ನಂ. ಶ್ರೀಕಂಠಯ್ಯ ಪ್ರಶಸ್ತಿ ಯನ್ನು ಘೋಷಿಸಲಾಗಿದೆ. ಈ ಪ್ರಶಸ್ತಿಗಳು ತಲಾ 25 ಸಾವಿರ ರೂ. ನಗದು ಪುರಸ್ಕಾರ ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ ಎಂದು ಕರ್ನಾಟಕ ಸಂಘದ ಗೌರವ ಕಾರ್ಯದರ್ಶಿ ಡಾ. ಎಚ್. ಎಸ್. ನಾಗಭೂಷಣ ಮಾಹಿತಿ ನೀಡಿದ್ದಾರೆ.

## 11 06 2020 ಭಾರತದಆರ್ಥಿಕತೆಶೇ.9.5ಕ್ಕೆ ಏರಿಕೆ = ಫಿಚ್‌ರೇಟಿಂಗ್ಸ್ ಕಂಪೆನಿ



ನವದೆಹಲಿ: ದೇಶದಲ್ಲಿ ಕೋವಿಡ್ 19 ಸೋಂಕು ನಿಯಂತ್ರಣಕ್ಕಾಗಿ ವಿಧಿಸಿರುವ ಲಾಕ್‌ಡೌನ್ ನಿಂದಾಗಿ ತೀವ್ರ ಇಳಿಮುಖ ಕಂಡಿರುವ ಭಾರತದ ಆರ್ಥಿಕತೆ, ಬರುವ ಮುಂದಿನ ಹಣಕಾಸು ವರ್ಷದಲ್ಲಿ (2021 22) ತ್ವರಿತ ಬೆಳವಣಿಗೆ ಕಾಣುವ ನೀರಿಕ್ಷೆಯಿದ್ದು, ಈ ಮೂಲಕ ಶೇ. 9.5 ಕ್ಕೇರಬಹುದೆಂದು ಎಂದು ವಿಶ್ವದ ಪ್ರಮುಖ ಕ್ರೆಡಿಟ್ ರೇಟಿಂಗ್ ಸಂಸ್ಥೆಗಳಲ್ಲೊಂದಾದ "ಫಿಚ್ ರೇಟಿಂಗ್ಸ್ ಕಂಪೆನಿ" ವರದಿ ಮಾಡಿದೆ. ಫಿಚ್ ರೇಟಿಂಗ್ಸ್ ಕಂಪೆನಿ ಪ್ರಕಟಿಸಿರುವ ಅಪಾಕ್ ಸಾವೆರಿನ್ ಕ್ರೆಡಿಟ್ ಓವರ್‌ವ್ಯೂ ಎಂಬ ವರದಿಯಲ್ಲಿ ಈ ವಿಚಾರನ್ನು ಕಂಪನಿಯು ಉಲ್ಲೇಖೀಸಿದೆ. ಹಾಗೂ ಪ್ರಸಕ್ತ ಹಣಕಾಸು ವರ್ಷದಲ್ಲಿ ನಿರೀಕ್ಷಿಸಲಾಗಿದ್ದ ಒಟ್ಟು ರಾಷ್ಟ್ರೀಯ ಉತ್ಪನ್ನ (GDP) ಯಲ್ಲಿ ಶೇ. 5ರಷ್ಟು ಇಳಿಮುಖವಾಗಲಿದೆ ಎಂದು ತಿಳಿಸಿದೆ.

# Current affairs of June 2020 from KPSC Vaani

### 11 06 2020 ರಾಜ್ಯಸರ್ಕಾರದಿಂದನೇಕಾರಸಮ್ಮಾನ್‌ಯೋಜನೆಜಾರಿ



ಬೆಂಗಳೂರು : ಕೋವಿಡ್ 19 ಲಾಕ್‌ಡೌನ್ ಸಮಯದಲ್ಲಿ ರಾಜ್ಯ ಸರ್ಕಾರದಿಂದ ಘೋಷಣೆಯಾಗಿರುವ ನೇಕಾರ ಸಮ್ಮಾನ್ ಯೋಜನೆಯನ್ನು ಜಾರಿ ಮಾಡಲಾಗಿದೆ. ನೇಕಾರ ಸಮ್ಮಾನ್ ಯೋಜನೆ : ಲಾಕ್ ಡೌನ್ ನಿಂದಾಗಿ ಕೈಮಗ್ಗ ನೇಕಾರರು ಸಂಕಷ್ಟದಲ್ಲಿರುವುದನ್ನು ಮನಗಂಡು ರಾಜ್ಯ ಸರ್ಕಾರದಿಂದ ಜಾರಿಗೊಳಿಸಲಾಗಿರುವ ನೇಕಾರ ಸಮ್ಮಾನ್ ಯೋಜನೆ ಉಪಯೋಗ ಪಡೆಯಲು ಅರ್ಹ ಕೈಮಗ್ಗ ನೇಕಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

*ರಾಜ್ಯ ಸರ್ಕಾರ 2020 21ನೇ ಸಾಲಿನಿಂದ ಕೈಮಗ್ಗ ನೇಕಾರಿಕೆ ಹಾಗೂ ಇತರೆ ಕೈಮಗ್ಗ ಚಟುಚಟಿಕೆ ನಡೆಸುವ ನೇಕಾರರಿಗೆ ತಲಾ 2 ಸಾವಿರ ರೂ ನೆರವು ನೀಡಲು ನೇಕಾರ ಸಮ್ಮಾನ್ ಯೋಜನೆಯನ್ನು ಜಾರಿಗೊಳಿಸಲಾಗಿದೆ.

### 11 06 2020 ಅವನಿಚತುರ್ವೇದಿ:ಭಾರತದಮೊದಲಮಹಿಳಾಫೈಟರ್‌ಪೈಲೆಟ್



ಭಾರತೀಯ ಸೇನೆಯ ಯುದ್ಧ ವಿಮಾನವನ್ನು ಹಾರಿಸುವ ಮೂಲಕ ಅವನಿ ಚತುರ್ವೇದಿ ಅವರು ಹೊಸ ಇತಿಹಾಸ ನಿರ್ಮಿಸಿದ್ದಾರೆ.

* ಅಕ್ಟೋಬರ್ 27, 1993 ರಂದು ಜನಿಸಿದ ಇವರು ರಾಜಸ್ಥಾನದ ಬನಸ್ಥಾಲಿ ವಿಶ್ವವಿದ್ಯಾಲಯದಿಂದ ಬಿ.ಟೆಕ್ ಪದವಿ ಪಡೆದಿದ್ದು, ತಮ್ಮ ವಿಶ್ವವಿದ್ಯಾಲಯದ ಪ್ಲೇಯಿಂಗ್ ಕ್ಲಬ್‌ನಿಂದ ವಿಮಾನ ಹಾರಾಟದ ಅನುಭವ ಪಡೆದಿದ್ದರಂತೆ.
* ಗುಜರಾತ್‌ನ ಜಮ್‌ನಗರದಿಂದ ಎಂಐಜಿ 21 ಬೈಸನ್ ವಿಮಾನವೇರಿ ಹಾರಾಟ ಮಾಡಿದ್ದಲ್ಲದೆ ರಷ್ಯಾ ನಿರ್ಮಿತ ಸೂಪರ್ ಸೋನಿಕ್ ಯುದ್ಧ ವಿಮಾನವನ್ನು ಸುಮಾರು 30 ನಿಮಿಷಗಳ ಕಾಲ ಹಾರಾಟ ನಡೆಸಿದ್ದಾರೆ.
* 2018ರಲ್ಲಿ ಇವರನ್ನು ಪೈಲಟ್ ಲೆಫ್ಟಿನೆಂಟ್ ಹುದ್ದೆಗೆ ಭಡ್ತಿ ನೀಡಲಾಗಿದೆ.

ಇತರೆ ಪ್ರಮುಖ ಮಹಿಳೆಯರು :

* ತಿಹಾರ್‌ನ ಪುರುಷರ ಜೈಲ್‌ನ ಮೊದಲ ಮಹಿಳಾ ಅಧೀಕ್ಷಕಿ ಅಂಜು ಮಾಂಗಿಯಾ
* ವಂಕಡರಥ್ ಸರಿತಾ ದೆಹಲಿಯ ಮೊದಲ ಮಹಿಳಾ ಬಸ್ ಚಾಲಕಿ
* ಸುರೇಖಾ ಯಾದವ್ ಪ್ಯಾಸೆಂಜರ್ ರೈಲಿನ ಮೊದಲ ಮಹಿಳಾ ಚಾಲಕಿ
* ಪ್ರಿಯಾ ಜಿಂಗನ್ ಸೇನೆ ಸೇರಿದ ಮೊದಲ ಮಹಿಳೆ

# Current affairs of June 2020 from KPSC Vaani

**12 06 2020 ವಾಣಿಜ್ಯ ಮಂಡಳಿಯ 95ನೇ ವಾರ್ಷಿಕ ಅಧಿವೇಶದಲ್ಲಿ ಪ್ರಧಾನಿ ಮೋದಿ ಭಾಷಣ**



ನವದೆಹಲಿ: ಭಾರತೀಯ ವಾಣಿಜ್ಯ ಮಂಡಳಿಯ 95ನೇ ವಾರ್ಷಿಕ ಸಮಗ್ರ ಅಧಿವೇಶನವನ್ನು ಪ್ರಧಾನಿ ನರೇಂದ್ರ ಮೋದಿ ಅವರು ದಿನಾಂಕ 11 ಜೂನ್‌ರ ಬೆಳಗ್ಗೆ 11 ಗಂಟೆಗೆ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಉದ್ಘಾಟಿಸಿ ಭಾಷಣ ಮಾಡಿದರು.
* ಇದೆ ವೇಳೆ ಮಾತನಾಡಿದ ಅವರು ಭಾರತವನ್ನು ಸ್ವಾವಲಂಬಿ ರಾಷ್ಟ್ರವನ್ನಾಗಿಸುವ ಕುರಿತು "ಜನರು, ಗ್ರಹ ಮತ್ತು ಲಾಭ" (People, Planet & Profit) ಗಳ ಮೇಲೆ ಕೇಂದ್ರೀಕರಿಸಲು ಮತ್ತು ಜಾಗತಿಕವಾಗಿ ಸ್ಪರ್ಧಾತ್ಮಕ ಪೂರೈಕೆಯಾ ಸರಪಳಿಗಳನ್ನು ರಚಿಸಲು ಉದ್ಯಮಗಳನ್ನು ಕೇಳಿಕೊಂಡಿದ್ದಾರೆ.
* ಜೂನ್ 2ರಂದು ಪ್ರಧಾನಿ ಮೋದಿ ಕಾನ್ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ(CII)ಯ 125ನೇ ವರ್ಷದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಭಾಗವಹಿಸಿ ಮಾತನಾಡಿದ್ದರು.

**12 06 2020 ಗುಜರಾತ್‌ನ ಗಿರ್ ಫಾರೆಸ್ಟ್‌ನಲ್ಲಿ ಸಿಂಹಗಳ ಸಂಖ್ಯೆ ಶೇಕಡ 29ರಷ್ಟು ಹೆಚ್ಚಳ**



ನವದೆಹಲಿ : ಲಯನ್ ಸೆನ್ಸಸ್ 2020ರ ಪ್ರಕಾರ ಗುಜರಾತ್‌ನ ಗಿರ್ ಫಾರೆಸ್ಟ್‌ನಲ್ಲಿ ಶೇಕಡ 29ರಷ್ಟು ಸಿಂಹಗಳ ಸಂಖ್ಯೆ ಹೆಚ್ಚಾಗಿದೆ ಎಂದು ಮಾಹಿತಿ ದೊರೆತಿದೆ.
* ಮೇ 2015ರಲ್ಲಿ ಅರಣ್ಯ ಇಲಾಖೆ ಸಿಂಹಗಳ ಸಂಖ್ಯೆಯನ್ನು ಏಣಿಕೆ ಮಾಡಿತ್ತು. ಗಣತಿಯ ಪ್ರಕಾರ ಗುಜರಾತ್‌ನಲ್ಲಿ 523 ಸಿಂಹಗಳು ಇದ್ದವು. ಆದರೆ, ಐದು ವರ್ಷಗಳಲ್ಲಿ ಸಿಂಹದ ಸಂಖ್ಯೆಗಳಲ್ಲಿ ಏರಿಕೆ ಕಂಡಿದೆ. ಒಟ್ಟು 151 ಸಿಂಹಗಳ ಸಂಖ್ಯೆ ಹೆಚ್ಚಾಗಿದೆ.
* ದೇಶದಲ್ಲಿ ಅತಿ ಹೆಚ್ಚು ಸಿಂಹಗಳು ಇರುವ ರಾಜ್ಯ ಗುಜರಾತ್ ಆಗಿದೆ. ಸದ್ಯ ಗುಜರಾತ್‌ನ ಗಿರ್ ಫಾರೆಸ್ಟ್‌ನಲ್ಲಿ ಸುಮಾರು 674 ಸಿಂಹಗಳಿವೆ. ಅಲ್ಲದೆ ಸಿಂಹಗಳ ವಿತರಣಾ ವ್ಯಾಪ್ತಿ ಸಹ ಶೇಕಡ 36ರಷ್ಟು ಹೆಚ್ಚಾಗಿದೆ.
* ಈ ಕುರಿತು ಪ್ರಧಾನಿ ಮೋದಿಯವರು ಕೂಡ ಟ್ವೀಟ್ ಮಾಡುವ ಮೂಲಕ ಮಾಹಿತಿ ಹಂಚಿಕೊಂಡಿದ್ದಾರೆ.

# Current affairs of June 2020 from KPSC Vaani

### 12 06 2020 1018 ಪ್ರದೇಶಗಳ ಇಂಗ್ಲೀಷ್ ಸ್ಪೆಲ್ಲಿಂಗ್ ಬದಲಿಸಿದ ತಮಿಳುನಾಡು ಸರ್ಕಾರ




ಚೆನ್ನೈ : ತಮಿಳುನಾಡಿನ ಎಐಎಡಿಎಂಕೆ ಸರ್ಕಾರವು ರಾಜ್ಯದ ಸುಮಾರು 1018 ಪ್ರದೇಶಗಳ ಹೆಸರುಗಳ ಇಂಗ್ಲೀಷ್ ಸ್ಪೆಲ್ಲಿಂಗ್ ಬದಲಾಯಿಸಲು ಮುಂದಾಗಿದೆ. ಚೆನ್ನೈ ಸೇರಿದಂತೆ ತಮಿಳುನಾಡಿನ ರಾಜ್ಯದ ಹಲವು ಪ್ರಮುಖ ಸ್ಥಳಗಳಿಗೆ ಸ್ಥಳೀಯರ ಉಚ್ಚಾರಣೆ ರೀತಿಯಲ್ಲಿ ತಮಿಳರಿಗೆ ಅರ್ಥವಾಗುವಂಥ ಸ್ಪೆಲ್ಲಿಂಗ್ ನೀಡಲು ನಿರ್ಧರಿಸಲಾಗಿದೆ. ತಮಿಳುನಾಡಿನ ಎಲ್ಲಾ 37 ಕಂದಾಯ ಜಿಲ್ಲೆಗಳ ವ್ಯಾಪ್ತಿಯಲ್ಲಿ ಹೆಸರು ಬದಲಾವಣೆ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದೆಂದು ಎಂದು ತಮಿಳುನಾಡಿನ ಸಂಸ್ಕೃತಿ ಖಾತೆ ಸಚಿವ ಕೆ ಪಾಂಡ್ಯರಾಜನ್ ತಿಳಿಸಿದ್ದಾರೆ.

### 12 06 2020 ಜೂನ್ 12:ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ



ಅಂತಾರಾಷ್ಟ್ರೀಯ ಕಾರ್ಮಿಕರ ಸಂಘಟನೆಯ ನಿರ್ಣಯದಂತೆ ಜೂ.12ರಂದು ವಿಶ್ವದಾದ್ಯಂತ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನವನ್ನು ಆಚರಿಸಲಾಗುತ್ತಿದೆ. ಈ ಆಚರಣೆ ಮೂಲಕ ಜಾಗತಿಕವಾಗಿ ಜನರಿಗೆ ಬಾಲಕಾರ್ಮಿಕತೆಯ ಬಗ್ಗೆ ಅರಿವು ಮೂಡಿಸುವದು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯಾ ಮುಖ್ಯ ಉದ್ದೇಶವಾಗಿದೆ. ಆದರೆ ಕೋವಿಡ್ 19ರ ಹಿನ್ನೆಲೆ ಯಲ್ಲಿ ಉಂಟಾದ ಆರ್ಥಿಕ ಹಿನ್ನಡೆ, ಕಾರ್ಮಿಕರ ಜೀವನ ಮತ್ತು ಜೀವನೋಪಾಯದ ಮೇಲೆ ಭಾರಿ ಪರಿಣಾಮ ಬೀರಿರುವದರಿಂದ ಈ ಬಿಕ್ಕಟ್ಟು ಸಾವಿರಾರು ದುರ್ಬಲ ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆಯ ಮಕ್ಕಳನ್ನು ಕಾರ್ಮಿಕ ಪದ್ಧತಿಗೆ ತಳ್ಳುವ ಸಾಧ್ಯತೆ ಇರುವ ಕಾರಣ ಮಕ್ಕಳನ್ನು ರಕ್ಷಿಸಲು ಹಿಂದೆಂದಿಗಿಂತಲೂ ಹೆಚ್ಚು ಶ್ರಮವಹಿಸುವ ಅಗತ್ಯತೆ ಇರುತ್ತದೆ.

* ಬಾಲಕಾರ್ಮಿಕ ಹಾಗೂ ಕಿಶೋರಾವಸ್ಥೆಯ ಕಾರ್ಮಿಕರ (ನಿಷೇಧ ಮತ್ತು ನಿಯಂತ್ರಣ)ತಿದ್ದುಪಡಿ ಕಾಯ್ದೆ 1986: 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಯಾವುದೇ ವೃತ್ತಿ ಮತ್ತು ಕೆಲಸಕ್ಕೆ ನೇಮಕ ಮಾಡಿಕೊಳ್ಳುವುದು ನಿಷೇಧಿಸಲ್ಪಟ್ಟಿದೆ. 14ರಿಂದ 18 ವರ್ಷದೊಳಗಿನ ಕಿಶೋರಾವಸ್ಥೆಯ ಕಾರ್ಮಿಕರನ್ನು ಅಪಾಯ ಕಾರಿ ಉದ್ದಿಮೆಗಳಲ್ಲಿ ನೇಮಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ.

# Current affairs of June 2020 from KPSC Vaani

### 12 06 2020 ನ್ಯಾಷನಲ್ ಇನ್‌ಸ್ಟಿಟ್ಯೂಷನಲ್ ರ್ಯಾಂಕಿಂಗ್ ಫ್ರೇಮ್‌ವರ್ಕ್(NIRF) ಶ್ರೇಯಾಂಕಪಟ್ಟಿಯಲ್ಲಿ ಬೆಂಗಳೂರಿನIISCಅಗ್ರ ಸ್ಥಾನ



ನವದೆಹಲಿ: ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದ ನ್ಯಾಷನಲ್ ಇನ್‌ಸ್ಟಿಟ್ಯೂಷನಲ್ ರ್ಯಾಂಕಿಂಗ್ ಫ್ರೇಮ್‌ವರ್ಕ್ (NIRF) ದೇಶದ ಶಿಕ್ಷಣ ಸಂಸ್ಥೆಗಳ ಶ್ರೇಯಾಂಕ ಪಟ್ಟಿಯನ್ನು ಪ್ರಕಟಿಸಿದೆ.

* NIRF ವಾರ್ಷಿಕ ಶ್ರೇಯಾಂಕ ಪಟ್ಟಿಯ ಪ್ರಕಾರ, ಐಐಎಸ್‌ಸಿ ಬೆಂಗಳೂರು, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ ಮತ್ತು ಬನಾರಸ್ ಹಿಂದೂ ವಿಶ್ವವಿದ್ಯಾಲಯ ಮೊದಲ ಮೂರು ಅತ್ಯುನ್ನತ ವಿಶ್ವವಿದ್ಯಾಲಯಗಳ ಸಾಲಿನಲ್ಲಿವೆ.
* ಐಐಎಂ ಅಹಮದಾಬಾದ್ ದೇಶದ ಅತ್ಯುನ್ನತ ಬಿ ಸ್ಕೂಲ್ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದು, ಐಐಎಂ ಬೆಂಗಳೂರು ಎರಡನೇ ಮತ್ತು ಐಐಎಂ ಕೋಲ್ಕತ್ತ ಮೂರನೇ ಸ್ಥಾನ ಲಭಿಸಿದೆ.
* ಅಗ್ರ ಶ್ರೇಯಾಂಕದ ಕಾಲೇಜುಗಳ ಪಟ್ಟಿಯಲ್ಲಿ ದೆಹಲಿಯ ಮಿರಾಂಡಾ ಕಾಲೇಜು ಮೊದಲ ಸ್ಥಾನ ಪಡೆದಿದ್ದು, ದೆಹಲಿಯ ಲೇಡಿ ಶ್ರೀರಾಮ್ ಮಹಿಳಾ ಕಾಲೇಜು ಎರಡನೇ ಮತ್ತು ಸೇಂಟ್ ಸ್ಟೀಫನ್ಸ್ ಕಾಲೇಜು ಮೂರನೇ ಸ್ಥಾನ ಪಡೆದಿವೆ.
* ಎಂಜಿನಿಯರಿಂಗ್ ವಿಭಾಗದಲ್ಲಿ ಐಐಟಿ ಮದ್ರಾಸ್ ಮೊದಲ, ಐಐಟಿ ದೆಹಲಿ ಎರಡನೇ ಮತ್ತು ಐಐಟಿ ಮುಂಬೈ ಮೂರನೇ ಸ್ಥಾನ ಗಳಿಸಿವೆ.
* ಫಾರ್ಮಸಿ ವಿಭಾಗದಲ್ಲಿ ದೆಹಲಿಯ ಜಾಮಿಯಾ ಹಮ್‌ದರ್ದ್ ಇನ್‌ಸ್ಟಿಟ್ಯೂಟ್ ಮೊದಲ ಸ್ಥಾನ, ಚಂಡೀಗಡದ ಪಂಜಾಬ್ ವಿಶ್ವವಿದ್ಯಾಲಯ ಎರಡನೇ ಮತ್ತು ಮೊಹಾಲಿಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಾಸ್ಯೂಟಿಕಲ್ ಸಂಶೋಧನಾ ಕೇಂದ್ರ ಮೂರನೇ ಸ್ಥಾನ ಪಡೆದಿವೆ.
* ವೈದ್ಯಕೀಯ ಕಾಲೇಜುಗಳ ವಿಭಾಗದಲ್ಲಿ ದೆಹಲಿಯ ಏಮ್ಸ್ ಮೊದಲ ಸ್ಥಾನ ಪಡೆದಿದ್ದು, ಚಂಡೀಗಡದ ಪಿಜಿಐ ಎರಡನೇ ಮತ್ತು ವೆಲ್ಲೂರಿನ ಸಿಎಂಸಿ ಮೂರನೇ ಸ್ಥಾನ ಪಡೆದಿವೆ.

### 13 06 2020 ಮೀಸಲಾತಿಮೂಲಭೂತಹಕ್ಕಲ್ಲ:ಸುಪ್ರೀಂಕೋರ್ಟ್



ನವದೆಹಲಿ: ಮೀಸಲಾತಿಯು ಮೂಲಭೂತ ಹಕ್ಕಲ್ಲವೆಂದು ಸುಪ್ರೀಂಕೋರ್ಟ್ ಬುಧವಾರ ಅಭಿಪ್ರಾಯ ಪಟ್ಟಿದೆ. ತಮಿಳುನಾಡು ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ OBC ವಿದ್ಯಾರ್ಥಿಗಳ ಮೀಸಲು ಖೋಟಾದ ಸೀಟುಗಳನ್ನು ನಿರಾಕರಿಸಿದ್ದ ಪ್ರಕರಣಗಳ ಅರ್ಜಿಗಳನ್ನು ಒಟ್ಟಾಗಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಮೀಸಲಾತಿಯು ಯಾವುದೇ ಭಾರತೀಯನ ಮೂಲಭೂತ ಹಕ್ಕಾಗಿರುವದಿಲ್ಲ ಹಾಗು ಮೀಸಲಾತಿ ತನ್ನ ಮೂಲಭೂತ ಹಕ್ಕೆಂದು ಯಾರೂ ಕೂಡಾ ಪ್ರತಿಪಾದಿಸಲು ಸಾಧ್ಯವಿಲ್ಲ. ಮೀಸಲಾತಿಯ ಸೌಲಭ್ಯಗಳನ್ನು ನೀಡದೆ ಇರುವುದು ಕೂಡ ಸಾಂವಿಧಾನಿಕ ಹಕ್ಕಿನ ಉಲ್ಲಂಘನೆಯೆಂದು ಪರಿಗಣಿಸಲಾಗುವದಿಲ್ಲ ಎಂದು ನ್ಯಾಯಮೂರ್ತಿ ಎಲ್.ನಾಗೇಶ್ವರರಾವ್ ನೇತೃತ್ವದ ನ್ಯಾಯಪೀಠ ಸ್ಪಷ್ಟಪಡಿಸಿತು.

## 13 06 2020 ಸಮುದ್ರದಆಳಕ್ಕಿಳಿದಮೊದಲಮಹಿಳೆ:Kathy Sullivan




68ವರ್ಷದ KathySullivanಸಮುದ್ರಮಟ್ಟದಿಂದ 36,070ಅಡಿ ಆಳಕ್ಕೆ ಇಳಿಯುವ ಮೂಲಕ ವಿಶ್ವದ ಅತ್ಯಂತ ಆಳದ ಕಡಲಿನ ಬಿಂದುವಿಗೆ ತಲುಪಿ ಬಂದ ವಿಶ್ವದ ಮೊದಲ ಮಹಿಳೆ ಎಂಬ ನೂತನ ದಾಖಲೆ ಮಾಡಿದರು. KathySullivanಅವರು ಪೆಸಿಫಿಕ್ ಮಹಾಸಾಗರದ ಮಾರಿಯಾನ ಟ್ರೆಂಚ್ ಎಂಬ ಪಾತಾಳ ಕಣಿವೆಯಲ್ಲಿರುವ ಅತ್ಯಂತ ಆಳದ ಕೇಂದ್ರಕ್ಕೆ 'ಚಾಲೆಂಜರ್ ಡೀಪ್' (ಆಳ 10,994 ಮೀ) ಇಲ್ಲಿಗೆ 'ಲಿಮಿಟಿಂಗ್ ಫ್ಯಾಕ್ಟರ್' ಎಂಬ ವಿಶೇಷ ವಾಹನದಲ್ಲಿ ತಲುಪುವ ಮೂಲಕ ಈ ಸಾಧನೆ ಮಾಡಿದರು.
* 37 ವರ್ಷಗಳ ಹಿಂದೆಯೇ ಬಾಹ್ಯಾಕಾಶದಲ್ಲಿ ನಡೆಯುವ ಮೂಲಕ ಬಾಹ್ಯಾಕಾಶದಲ್ಲಿ ನಡೆದ ಮೊದಲ ಅಮೆರಿಕನ್ ಮಹಿಳೆ ಎಂದು ಸಾಧನೆ ಮಾಡಿದ್ದ, ನಾಸಾದ ಮಾಜಿ ಗಗನಯಾತ್ರಿ Kathy Sullivan ಇದೀಗ ಮತ್ತೊಂದು ಸಾಧನೆ ಮಾಡಿದರು.

## 13 06 2020 ಪೂರ್ವ ನೌಕಾಪಡೆ ಕಮಾಂಡರ್ ಮುಖ್ಯಸ್ಥರಾಗಿ ಬಿಸ್ವಜಿತ್ ಅಧಿಕಾರ ಸ್ವೀಕಾರ



ವಿಶಾಖಪಟ್ಟಣಂ : ಈಸ್ಟರ್ನ್ ನೇವಲ್ ಕಮಾಂಡ್ (ENC) ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಬಿಸ್ವಜಿತ್ ದಾಸ್‌ಗುಪ್ತಾ ಅವರು ನೇಮಕಗೊಂಡಿದ್ದು, ದಿನಾಂಕ 12 ಜೂನ್ ರಿಂದ ಅಧಿಕಾರ ವಹಿಸಿಕೊಂಡಿದ್ದಾರೆ. ಈ ಮೊದಲು ಈ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವೈಸ್ ಅಡ್ಮಿರಲ್ ಎಸ್. ಎನ್. ಘೋರ್ಮಡೆ ಯವರು ನವದೆಹಲಿಯ ರಕ್ಷಣಾ ಸಚಿವಾಲಯದ (ನೌಕಾಪಡೆ) ಇಂಟಿಗ್ರೇಟೆಡ್ ಹೆಡ್ ಕ್ವಾರ್ಟರ್ಸ್ ನಿಯಂತ್ರಕ ಸಿಬ್ಬಂದಿಯಾಗಿ ವರ್ಗಾವಣೆಗೊಂಡ ಹಿನ್ನಲೆ ದಾಸ್‌ಗುಪ್ತಾ ನೂತನವಾಗಿ ಈ ಅಧಿಕಾರ ವಹಿಸಿಕೊಂಡರು. ದಾಸ್‌ಗುಪ್ತಾ ಅವರು ಕಾರ್ಯಾಚರಣೆ, ತರಬೇತಿ, ಸಿಬ್ಬಂದಿ ನೇಮಕಾತಿ, ನಿರ್ದೇಶನದಂತಹ ಹಲವು ಪ್ರಮುಖ ಜವಾಬ್ದಾರಿ ನಿರ್ವಹಿಸಿದ ಅನುಭವ ಹೊಂದಿದ್ದು, ಇವರ ಸೇವೆ ಪರಿಗಣಿಸಿ ಅತಿ ವಿಶಿಷ್ಟ ಸೇವಾ ಪದಕ ಮತ್ತು ವಿಶಿಷ್ಟ ಸೇವಾ ಪದಕ ಗೌರವಕ್ಕೆ ಪಾತ್ರರಾಗಿದ್ದಾರೆ.

# Current affairs of June 2020 from KPSC Vaani



# Current affairs of June 2020 from KPSC Vaani

### 13 06 2020 ಲಾಕ್‌ಡೌನ್‌ನಿಂದಾಗಿದೇಶದಲ್ಲಿಆಹಾರಹಣದುಬ್ಬರಏರಿಕೆ



ನವದೆಹಲಿ: ಕೋರೋಣ ಸೋಂಕು ನಿಯಂತ್ರಿಸಲು ವಿಧಿಸಿರುವ ಲಾಕ್‌ಡೌನ್ ಕಾರಣಕ್ಕೆ ಕೇಂದ್ರ ಸರ್ಕಾರವು ಮೇ ತಿಂಗಳ ಚಿಲ್ಲರೆ ಹಣದುಬ್ಬರದ ಕೆಲ ವಿವರನ್ನು ಪ್ರಕಟಿಸಿದ್ದು, ಆಹಾರ ಪದಾರ್ಥಗಳ ಬೆಲೆ ಶೇ 9.28ರಷ್ಟು ಏರಿಕೆಯಾಗಿದೆ.

* ಗ್ರಾಹಕರ ಆಹಾರ ಬೆಲೆ ಸೂಚ್ಯಂಕವು (CFPI) ಶೇಕಡ 9.28 ರಸ್ತಾಗಿದ್ದು ಕಳೆದ ವರ್ಷದ ಇದೆ ಸಮಯದಲ್ಲಿ ಇದು ಕೇವಲ ಶೇ 1.83ರಷ್ಟಿತ್ತು.

### 13 06 2020 ಬ್ಯಾಂಕ್‌ಗಳCEOಗಳಗರಿಷ್ಠವಯೋಮಿತಿ70ವರ್ಷಕ್ಕೆ ಹೆಚ್ಚಳ




ನವದೆಹಲಿ: ಬ್ಯಾಂಕಿಂಗ್ ಕ್ಷೇತ್ರದ ಆಡಳಿತ ಸುಧಾರಿಸಲು ಮುಖ್ಯ ಉದ್ದೇಶದಿಂದ ಬ್ಯಾಂಕ್‌ಗಳ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಮತ್ತು ಪೂರ್ಣಾವಧಿ ನಿರ್ದೇಶಕರ ಗರಿಷ್ಠ ವಯೋಮಿತಿಯನ್ನು 70 ವರ್ಷಗಳಿಗೆ ವಿಸ್ತರಿಸುವ ಹಾಗೂ ಪ್ರವರ್ತಕರ ಗರಿಷ್ಠ ಕಾರ್ಯಾವಧಿಯನ್ನು 10 ವರ್ಷಕ್ಕೆ ನಿಗದಿ ಮಾಡುವ ಬಗ್ಗೆ ಭಾರತೀಯ ರಿಸರ್ವ ಬ್ಯಾಂಕ್ ಪ್ರಸ್ತಾವ ಮಾಡಿದೆ. ಸಿಇಒ ಮತ್ತು ಡಬ್ಲ್ಯುಟಿಡಿ 70 ವರ್ಷದನಂತರಆ ಹುದ್ದೆಯಲ್ಲಿ ಮುಂದುವರೆಯುವಂತಿಲ್ಲ.

# Current affairs of June 2020 from KPSC Vaani

## 14 06 2020 ರಾಜ್ಯಸಭೆಗೆ ಕರ್ನಾಟಕದ ಮೂರೂ ಪಕ್ಷಗಳ ನಾಲ್ವರು ಅಭ್ಯರ್ಥಿಗಳು ಅವಿರೋಧ ಆಯ್ಕೆ



ಬೆಂಗಳೂರು: ಕರ್ನಾಟಕ ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳ ಆಯ್ಕೆಗೆ ನಡೆದ ದ್ವೈವಾರ್ಷಿಕ ಚುನಾವಣೆಯಲ್ಲಿ ರಾಜ್ಯದ ಮೂರೂ ಪ್ರಮುಖ ಪಕ್ಷಗಳ ನಾಲ್ವರು ಅಭ್ಯರ್ಥಿಗಳು ಅವಿರೋಧ ಆಯ್ಕೆಯಾಗಿದ್ದಾರೆ. ಆಯ್ಕೆಯಾದವರ ವಿವರ ಈ ಕೆಳಗಿನಂತಿದೆ

* ಜೆಡಿಎಸ್ ನಿಂದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ
*ಕಾಂಗ್ರೆಸ್ ನಿಂದ ಮಲ್ಲಿಕಾರ್ಜುನ ಖರ್ಗೆ
* ಬಿಜೆಪಿಯಿಂದ ಯ ಈರಣ್ಣ ಕಡಾಡಿ ಹಾಗೂ ಅಶೋಕ್ ಗಸ್ತಿ ಈ ಎಲ್ಲ ಅಭ್ಯರ್ಥಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿಯಾದ ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಪ್ರಕಟಿಸಿದ್ದಾರೆ.

## 14 06 2020 ರತನ್ ಲಾಲ್ ಅವರು ವಿಶ್ವ ಆಹಾರ ಪ್ರಶಸ್ತಿಗೆ ಆಯ್ಕೆ



ನವದೆಹಲಿ/ವಾಷಿಂಗ್ಟನ್:ಭಾರತಮೂಲದಅಮೆರಿಕದಮಣ್ಣುವಿಜ್ಞಾನಿಡಾ|ರತನ್‌ಲಾಲ್‌ಅವರನ್ನುಈ ವರ್ಷದ ಕೃಷಿ ಕ್ಷೇತ್ರದ ನೊಬೆಲ್ ಎಂದೇ ಪ್ರಸಿದ್ಧವಾಗಿರುವ ಪ್ರತಿಷ್ಠಿತ ವಿಶ್ವ ಆಹಾರ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.ಡಾ | ರತನಲಾಲ್‌ಅವರುಭಾರತೀಯಶಾಸ್ತ್ರ,ಪುರಾಣಗಳಿಂದಸ್ಫೂರ್ತಿಪಡೆದು ಮಣ್ಣಿನ ಗುಣಮಟ್ಟ ಸಂರಕ್ಷಣೆಗಾಗಿ ರೂಪಿಸಿದ ಮಾದರಿಗಳು ಸಣ್ಣ ರೈತರಿಗೆ ಬಹು ಉಪಯುಕ್ತವಾಗಿವೆ. ಅಲ್ಲದೆ ಇವರ ನೀಡಿರುವ ಸಲಹೆಗಳು ವಿಶ್ವವ್ಯಾಪ್ತಿ ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ನೆರವಾಗಿರುವದನ್ನು ಪರಿಗಣಿಸಿ ಈ ಪ್ರತಿಷ್ಠಿತ ಪ್ರಶಸ್ತಿಗೆ ಇವರನ್ನು ಆಯ್ಕೆ ಮಾಡಲಾಗಿದೆ.

* ಈ ಮೊದಲು 1987ರಲ್ಲಿ ದೇಶದ ಹಸಿರು ಕ್ರಾಂತಿಯ ಪಿತಾಮಹರೆಂದೇ ಕರೆಸಿಕೊಳ್ಳುವ ಡಾ| ಎಂ.ಎಸ್. ಸ್ವಾಮಿನಾಥನ್ ಈ ಪ್ರಶಸ್ತಿಗೆ ಆಯ್ಕೆಯಾಗಿದ್ದರು.

# Current affairs of June 2020 from KPSC Vaani

### 14 06 2020 ನಿರ್ಮಲಾ ಸೀತಾರಾಮನ್ ನೇತೃತ್ವದಲ್ಲಿ ನಡೆದ GST ಮಂಡಳಿ ಸಭೆ




ನವದೆಹಲಿ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಇತ್ತೀಚಿಗೆ GST ಕೌನ್ಸಿಲ್ ಸಭೆ ನಡೆಯಿತು. ಈ ಸಭೆಯಲ್ಲಿ ಹಲವು ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು.

* ತೆರಿಗೆ ಪಾವತಿಯನ್ನು ಬಾಕಿ ಉಳಿಸಿಕೊಂಡ ವ್ಯಾಪಾರಿಗಳ ವಿಳಂಬ ಶುಲ್ಕವನ್ನು ಕಡಿಮೆ ಮಾಡಲಾಗಿದೆ. ಅಲ್ಲದೆ ತೆರಿಗೆ ಪಾವತಿಸದವರಿಗೆ ವಿಳಂಬ ಶುಲ್ಕವನ್ನು ಸಂಪೂರ್ಣವಾಗಿ ತೆಗೆದುಹಾಕಲಾಗಿದೆ.
* ವಾರ್ಷಿಕವಾಗಿ 5 ಕೋಟಿ ರೂಪಾಯಿಗೂ ಹೆಚ್ಚು ವಹಿವಾಟು ನಡೆಸುವ ವ್ಯಾಪಾರಿಗಳ ವಿಳಂಬವಾಗಿ ವಿಳಂಬವಾಗಿ ಸಲ್ಲಿಸುವ ಜಿಎಸ್ಟಿ ರಿಟರ್ನ್ ಗೆ ವಿಧಿಸುತ್ತಿದ್ದ ಬಡ್ಡಿಯನ್ನು ಶೇಕಡ 50 ರಷ್ಟು ಕಡಿತಗೊಳಿಸಲಾಗಿದೆ.
* ಫೆಬ್ರುವರಿ, ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ GST ರಿಟರ್ನ್ ಸಲ್ಲಿಕೆ ವಿಳಂಬ ಮಾಡಿದವರಿಗೆ ವಿಧಿಸಲಾಗುತ್ತಿದ್ದ ಬಡ್ಡಿಯನ್ನು ಶೇಕಡ 18ರಿಂದಶೇಕಡ9ಕ್ಕೆ ಇಳಿಕೆಮಾಡಲಾಗಿದೆ.ಇದುಸೆಪ್ಟಂಬರ್ ತಿಂಗಳವರೆಗೂಇದುಅನ್ವಯವಾಗಲಿದೆ.

### 14 06 2020 ಜೂನ್14:ವಿಶ್ವರಕ್ತದಾನಿಗಳದಿನwor




ಪ್ರತಿವರ್ಷ ಜೂನ್ 14 ರಂದು "ಅಂತಾರಾಷ್ಟ್ರೀಯ ರಕ್ತದಾನ ದಿನ" ವನ್ನಾಗಿ ವಿಶ್ವಸಂಸ್ಥೆಯು ಆಚರಿಸಲಾಗುತ್ತದೆ. ಆಸ್ಟ್ರಿಯಾ ವೈದ್ಯ ಕಾರ್ಲ್ ಲ್ಯಾಂಡ್‌ಸ್ಟೇನರ್ ಅವರು ಮಾನವನ ರಕ್ತದ ಮೊದಲ ಮೂರು ಗ್ರೂಪ್‌ಗಳನ್ನು ಸಂಶೋಧಿಸಿದ ದಿನದ ನೆನಪಿಗಾಗಿ ಪ್ರತಿ ವರ್ಷ ಜೂನ್ 14 ರಂದು ಈ ದಿನವನ್ನು ಆಚರಿಸಲಾಗುತ್ತದೆ. * ಭಾರತದಲ್ಲಿ ಅಕ್ಟೋಬರ್ 1ರಂದು ರಾಷ್ಟ್ರೀಯ ರಕ್ತದಾನ ದಿನವನ್ನಾಗಿ ಆಚರಿಸಲಾಗುತ್ತದೆ.

# Current affairs of June 2020 from KPSC Vaani

### 15 06 2020 ಏಷ್ಯನ್ ಚಾಂಪಿಯನ್‌ಶಿಪ್ ವಿಜೇತೆ ಗೋಮತಿ ಮಾರಿಮುತು ಪದಕದಿಂದ ಹೊರಕ್ಕೆ




ಏಷ್ಯನ್ ಚಾಂಪಿಯನ್‌ಶಿಪ್ ವಿಭಾಗದಲ್ಲಿ ಚಿನ್ನದ ಪದಕ ಪಡೆದಿದ್ದ ಗೋಮತಿ ಮಾರಿಮುತು ಅವರನ್ನು ಪದಕದಿಂದ ತೆಗೆದುಹಾಕಲಾಗಿದ್ದು, ಅಲ್ಲದೆ ಕ್ರೀಡಾ ಚಟುವಟಿಕೆಗಳಿಂದ 4 ವರ್ಷಗಳ ಕಾಲ ನಿಷೇಧ ಹೇರಲಾಗಿದೆ.
* ಗೋಮತಿ ಮಾರಿಮುತು ತಮಿಳುನಾಡು ಮೂಲದ ಭಾರತೀಯ ಫೀಲ್ಡ್ ರನ್ನರ್ ಆಗಿದ್ದು. ಕತಾರ್‌ನ ದೋಹಾದಲ್ಲಿ ನಡೆದ 2019 ರ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಮಹಿಳೆಯರ ವಿಭಾಗದ 800 ಮೀಟರ್ ಓಟದ ಸ್ಪರ್ಧೆಯಲ್ಲಿ ಅವರು ಚಿನ್ನದ ಪದಕವನ್ನು ಪಡೆದಿದ್ದರು, ಹಾಗೂ ಡೋಪಿಂಗ್ ಆರೋಪದಡಿಯಲ್ಲಿ ರಕ್ತದ ಮಾದರಿ ಪರೀಕ್ಷೆಯಲ್ಲಿ ಧನಾತ್ಮಕ ವರದಿ ಬಂದ ಹಿನ್ನಲೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ.

### 15 06 2020 “ಆರೋಗ್ಯ ಪಥ” : ಆರೋಗ್ಯ ಸಲಹೆಗಳಿಗಾಗಿ ನೂತನ ಪೋರ್ಟಲ್ ಆರಂಭ




ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ ನ್ಯಾಷನಲ್ ಹೆಲ್ತ್ ಸಪ್ಲೈ ಚೈನ್ ಪೋರ್ಟಲ್ ನಿಂದ ನೂತನವಾಗಿ "ಆರೋಗ್ಯ ಪಥ" ಎಂಬ ಅರೋಗ್ಯ ಸಂಬಂಧಿ ಪೋರ್ಟಲನ್ನು ಆರಂಬಿಸಿದ್ದು, ಈ ಪೋರ್ಟಲ್ ಮೂಲಕ ಆರೋಗ್ಯ ಸಂಬಂದಿಸಿದ ಮಾಹಿತಿ ಪಡೆಯಬಹುದಾಗಿದೆ.
* "ಆರೋಗ್ಯ ಪಥ"ವು ಪೂರೈಕೆದಾರರು, ತಯಾರಕರು ಮತ್ತು ಗ್ರಾಹಕರಿಗೆ ಸೇವೆ ಒದಗಿಸಲಿದೆ.
* COVID 19 ರ ಕಾರಣದಿಂದಾಗಿ ಪ್ರಸ್ತುತ ಉದ್ಭವಿಸುತ್ತಿರುವ ರಾಷ್ಟ್ರೀಯ ಆರೋಗ್ಯ ತುರ್ತುಸ್ಥಿತಿಯು ನಿಯಂತ್ರಿಸಲು ಈ ಪೋರ್ಟಲ್‌ಉ ಉಪಯುಕ್ತವಾಗಿರಲಿದೆ.

# Current affairs of June 2020 from KPSC Vaani

**15 06 2020 ಜೂನ್ 15:ವಿಶ್ವಹಿರಿಯರನಿಂದನೆಜಾಗೃತಿದಿನ (World Elder Abuse Awareness Day)**




ಪ್ರತಿ ವರ್ಷದ ಜೂನ 15 ರಂದು ವಿಶ್ವಸಂಸ್ಥೆಯಿಂದ ವಿಶ್ವ ಹಿರಿಯರ ನಿಂದನೆ ಜಾಗೃತಿ ದಿನವನ್ನು ಆಚರಿಸಲಾಗುತ್ತದೆ. ಈ ದಿನದ ಆಚರಣೆಯ ಮುಖ್ಯ ಉದ್ದೇಶವು ವಯಸ್ಸಾದವರ ನಿರ್ಲಕ್ಷ್ಯ ಮತ್ತು ನಿಂದನೆಯ ಮೇಲೆ ಪರಿಣಾಮ ಬೀರುವ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಜನಸಂಖ್ಯಾ ಪ್ರಕ್ರಿಯೆಗಳ ಬಗ್ಗೆ ಜಾಗೃತಿ ಮೂಡಿಸುವದಾಗಿದೆ. ಈ ವರ್ಷದ ಘೋಷವಾಕ್ಯ : ಧ್ವನಿಗಳನ್ನು ಎತ್ತುವುದು (Lifting up Voices)

**15 06 2020 ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ ನಿಧನ**



ಜೂನ್ 14,2020ರಂದು ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ ಅವರು ಮುಂಬೈ ನಗರದ ಅಪಾರ್ಟ್ಮೆಂಟ್ ಒಂದರಲ್ಲಿ ಶವವಾಗಿ ಪತ್ತೆಯಾಗಿದ್ದರು. ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮುಂಬೈ ಪೊಲೀಸರು ಮಾಹಿತಿ ನೀಡಿದ್ದಾರೆ.

*ಹಲವಾರು TV ಸೀರೀಸ್ ಗಳಲ್ಲಿ ಮುಖ್ಯ ಪಾತ್ರದಲ್ಲಿ ನಟಿಸಿದ್ದ ಇವರು, ಇತ್ತೀಚಿಗೆ ಭಾರತೀಯ ಕ್ರಿಕೆಟರ್ ಎಂ ಎಸ್ ಧೋನಿಯವರ ಕುರಿತಾದ "ಎಂ ಎಸ್ ಧೋನಿ: ದಿ ಅನ್ಟೋಲ್ಡ್ ಸ್ಟೋರಿ" ಮುಖ್ಯ ಪಾತ್ರದಲ್ಲಿ ನಟಿಸಿ, ಈ ಚಿತ್ರದಲ್ಲಿನ ನಟನೆಗಾಗಿ 2017 ರಲ್ಲಿ ಮೆಲ್ಬೋರ್ನ್‌ನ ಭಾರತೀಯ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದಿದ್ದರು. ಅಲ್ಲದೆ ಹಲವು ಸ್ಕ್ರೀನ್ ಪ್ರಶಸ್ತಿಗಳು, ಗಿಲ್ಡ್ ಪ್ರಶಸ್ತಿಗಳು, ಐಟಿಎ ಪ್ರಶಸ್ತಿಗಳನ್ನು ಪಡೆದಿರುತ್ತಾರೆ.

# Current affairs of June 2020 from KPSC Vaani

### 16 06 2020 ಕೃತಕ ಬುದ್ಧಿಮತ್ತೆಯಲ್ಲಿ ಜಾಗತಿಕ ಸಹಭಾಗಿತ್ವಕ್ಕೆ ಸೇರಿದ ಭಾರತ




ಭಾರತವು ಕೃತಕ ಬುದ್ಧಿಮತ್ತೆಯ ಜಾಗತಿಕ ಸಹಭಾಗಿತ್ವದ ಸಂಸ್ಥಾಪಕ ಸದಸ್ಯರಾಗಿ ಇತ್ತೀಚಿಗೆ ಸೇರಿಕೊಂಡಿದೆ.
* ಭಾರತದೊಂದಿಗೆ ಸೇರಿಕೊಂಡ ಇತರ ಪ್ರಮುಖ ಸದಸ್ಯ ರಾಷ್ಟ್ರಗಳೆಂದರೆ ಯುಕೆ, ಯುಎಸ್ಎ, ಯುರೋಪಿಯನ್ ಯೂನಿಯನ್, ಆಸ್ಟ್ರೇಲಿಯಾ, ಫ್ರಾನ್ಸ್, ಕೆನಡಾ, ಜರ್ಮನಿ, ಮೆಕ್ಸಿಕೊ, ಇಟಲಿ, ಕೊರಿಯಾ ಗಣರಾಜ್ಯ, ಸಿಂಗಾಪುರ, ನ್ಯೂಜಿಲೆಂಡ್, ಇತ್ಯಾದಿ.
* ಭಾರತವು ಇತ್ತೀಚೆಗೆ ನ್ಯಾಷನಲ್ AI ಸ್ಟ್ರಾಟಜಿ ಮತ್ತು ನ್ಯಾಷನಲ್ ಎಐ ಪೋರ್ಟಲ್ ಅನ್ನು ಪ್ರಾರಂಭಿಸಿತ್ತು. ಇದು ಶಿಕ್ಷಣ, ಆರೋಗ್ಯ ರಕ್ಷಣೆ, ಕೃಷಿ, ಇ ಕಾಮರ್ಸ್, ದೂರಸಂಪರ್ಕ, ಹಣಕಾಸು ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಕೃತಕ ಬುದ್ಧಿಮತ್ತೆಯನ್ನು ಹತೋಟಿಗೆ ತಂದಿದೆ.

### 16 06 2020 SIPRIYearBook:ಭಾರತಮತ್ತು ಚೀನಾದ ಪರಮಾಣು ಶಸ್ತ್ರಾಸ್ತ್ರಗಳ ಹೆಚ್ಚಳ



ಸ್ವೀಡಿಷ್ ಥಿಂಕ್ ಟ್ಯಾಂಕ್ 2020 ರ ವಾರ್ಷಿಕ ಪುಸ್ತಕವನ್ನು (YearBook) SIPRI ಪ್ರಕಟಿಸಿದ್ದು, ವಾರ್ಷಿಕ ಪುಸ್ತಕದ ಪ್ರಕಾರ, ಭಾರತ ಮತ್ತು ಚೀನಾಗಳು ಕಳೆದ ವರ್ಷ 2019 ಕ್ಕೆ ಹೋಲಿಸಿದರೆ ತಮ್ಮ ಪರಮಾಣು ಶಸ್ತ್ರಾಸ್ತ್ರಗಳನ್ನು ಹೆಚ್ಚಿಸಿಕೊಂಡಿವೆ. ಚೀನಾ ರಾಷ್ಟ್ರವು ತನ್ನ ಪರಮಾಣು ಶಸ್ತ್ರಾಗಾರವನ್ನು ಆಧುನೀಕರಿಸುತ್ತಿದೆ ಎಂದು ಥಿಂಕ್ ಟ್ಯಾಂಕ್ ವರದಿ ಮಾಡಿದೆ. ಅಲ್ಲದೆ ಭಾರತಕ್ಕೆ ಹೋಲಿಸಿದರೆ ಚೀನಾ ಮತ್ತು ಪಾಕಿಸ್ತಾನ ಹೆಚ್ಚು ಪರಮಾಣು ಸಿಡಿತಲೆಗಳನ್ನು ಹೊಂದಿರುವದಾಗಿ ವರದಿಯಾಗಿದೆ.
ಥಿಂಕ್ ಟ್ಯಾಂಕ್ SIPRI YearBook ನ ಪ್ರಮುಖಾಂಶಗಳು:
* ಭಾರತವು ಒಟ್ಟು 150 ಪರಮಾಣು ಯುದ್ಧ ಸಿಡಿತಲೆಗಳನ್ನ ಹೊಂದಿದೆ.
*ಚೀನಾದಲ್ಲಿ 290 ಮತ್ತು ಪಾಕಿಸ್ತಾನವು ಸುಮಾರು 150 ರಿಂದ 160 ಪರಮಾಣು ಯುದ್ಧ ಸಿಡಿತಲೆಗಳನ್ನ ಹೊಂದಿದೆ.
*ಭಾರತ ತನ್ನ ಪರಮಾಣು ಶಸ್ತ್ರಾಸ್ತ್ರ ಸಂಗ್ರಹ ರಾಶಿ ಮತ್ತು ಪರಮಾಣು ಮೂಲಸೌಕರ್ಯಗಳನ್ನು ವಿಸ್ತರಿಸುತ್ತಿದೆ ಎಂದು ವರದಿ ಹೇಳಿದೆ.
* ಚೀನಾ ಮೊದಲ ಬಾರಿಗೆ ಪರಮಾಣು ಟ್ರೈಡ್ ಅನ್ನು ಅಭಿವೃದ್ಧಿಪಡಿಸುತ್ತಿದೆ ಎಂದು ಥಿಂಕ್ ಟ್ಯಾಂಕ್ ಹೇಳುತ್ತದೆ.

# Current affairs of June 2020 from KPSC Vaani

## 16 06 2020 ಭಾರತ, ರಷ್ಯಾ, ಚೀನಾ ಮಾತುಕತೆ



ನವದೆಹಲಿ: ಇದೆ ಜೂನ್ 22 ರಂದು ಭಾರತದ ವಿದೇಶಾಂಗ ವ್ಯಹಾರಗಳ ಸಚಿವ ಎಸ್. ಜೈಶಂಕರ್ ಅವರು ಚೀನಾ ಹಾಗೂ ರಷ್ಯಾದ ರಾಷ್ಟ್ರಗಳ ವಿದೇಶಾಂಗ ವ್ಯವಹಾರಗಳ ಸಚಿವರೊಂದಿಗೆ ಆನ್‌ಲೈನ್ ಮಾತುಕತೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಎರಡು ರಾಷ್ಟ್ರಗಳ ಸಮಸ್ಯೆಗಳನ್ನು ಸಾಮಾನ್ಯವಾಗಿ ಮೂರನೇ ರಾಷ್ಟ್ರದ ಸಮ್ಮುಖದಲ್ಲಿ ಚರ್ಚಿಸುವುದಿಲ್ಲವಾದ್ದರಿಂದ, ಈ ಸಭೆಯಲ್ಲಿ ಭಾರತ  ಚೀನಾ ಗಡಿ ಸಮಸ್ಯೆ ಕುರಿತ ಚರ್ಚೆಯಾಗುವ ಸಾಧ್ಯತೆಗಳು ಕಡಿಮೆ ಎಂದು ಮೂಲಗಳು ತಿಳಿಸಿವೆ.

## 16 06 2020 ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭ ಮುಂದೂಡಿಕೆ



ಲಾಸ್ ಏಂಜಲಿಸ್ : ಜಾಗತಿಕವಾಗಿ ವ್ಯಾಪಿಸಿರುವ ಕೋವಿಡ್ 19 ಸಾಂಕ್ರಾಮಿಕ ಹಿನ್ನೆಲೆಯಲ್ಲಿ ವಿಶ್ವ ಚಿತ್ರರಂಗದ ಅತ್ಯುನ್ನತ ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭವನ್ನೂ ಮುಂದಿನ ವರ್ಷದ ಏಪ್ರಿಲ್ 25ಕ್ಕೆ ಮುಂದೂಡಲಾಯಿತು. 93ನೇ ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಎಂಟು ವಾರ ಮುಂದಕ್ಕೆ ಹಾಕಲಾಗಿದೆ ಎಂದು ಹಾಲಿವುಡ್ ವೇಳಾಪಟ್ಟಿ ಬಿಡುಗಡೆ ಮಾಡಿರುವ ಅಕಾಡಮಿ ಸ್ಪಷ್ಟಪಡಿಸಿದೆ. ಆಸ್ಕರ್‌ಗೆ ಅರ್ಹ ಚಿತ್ರಗಳನ್ನು ಸಲ್ಲಿಸಲು ಗಡುವನ್ನು ಡಿಸೆಂಬರ್ 31ರಿಂದ 2021ರ ಫೆಬ್ರುವರಿ 28ಕ್ಕೆ ಮುಂದೂಡಲಾಗಿದ್ದು, ಇದೆ ಕಾರಣದಿಂದ ಪ್ರಶಸ್ತಿ ಪ್ರದಾನ ಸಮಾರಂಭ ವಿಸ್ತರಿಸಿರುವುದರಿಂದ ಚಿತ್ರ ನಿರ್ಮಾಪಕರು ತಮ್ಮ ಚಿತ್ರ ನಿರ್ಮಾಣ ಕಾರ್ಯ ಪೂರ್ಣಗೊಳಿಸಲು ಮತ್ತು ಚಿತ್ರಗಳನ್ನು ಬಿಡುಗಡೆ ಮಾಡಲು ಸಮಯಾವಕಾಶ ನೀಡಿದಂತಾಗಿದೆ ಎಂದು ಅಕಾಡಮಿ ಅಧ್ಯಕ್ಷ ಡೇವಿಡ್ ರುಬಿನ್ ಮತ್ತು ಸಿಇಓ ಡ್ವಾನ್ ಹಡ್ಸನ್ ಹೇಳಿಕೆ ನೀಡಿದ್ದಾರೆ.

# Current affairs of June 2020 from KPSC Vaani

## 16 06 2020 ಕಾರವಾರದಲ್ಲಿ ಆರಂಭವಾಗಲಿದೆ ಅಂತಾರಾಷ್ಟ್ರೀಯ ಕ್ರೀಡಾಂಗಣ



ಪ್ರಸ್ತುತ ರಾಜ್ಯದಲ್ಲಿ ಬೆಂಗಳೂರು ನಗರವು ಮಾತ್ರ ಅಂತಾರಾಷ್ಟ್ರೀಯ ಕ್ರೀಡಾಂಗಣವನ್ನು ಹೊಂದಿದ್ದು, ಉತ್ತರ ಕನ್ನಡ ಜಿಲ್ಲೆಯಲ್ಲಿ ರಾಜ್ಯದಲ್ಲೇ ಎರಡನೇ ಅಂತಾರಾಷ್ಟ್ರೀಯ ಕ್ರೀಡಾಂಗಣ ಆರಂಭಿಸಲು ಸಿದ್ಧತೆ ನಡೆಸಲಗುತ್ತಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ್ ಅವರು ಕೆ.ಎಸ್.ಸಿ.ಎ ಅಧ್ಯಕ್ಷ ರೋಜರ್ ಬಿನ್ನಿ ಹಾಗೂ ಕಾರ್ಯದರ್ಶಿ ಸಂತೋಷ್ ಮೇನನ್ ಅವರನ್ನು ಅವರ ಬೆಂಗಳೂರಿನ ಕಚೇರಿಯಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಪ್ರಸ್ತುತ ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣಕ್ಕಾಗಿ ಕಾರವಾರ ಗೋವಾ ಗಡಿ ಭಾಗದ ಕಾಳಿನದಿ ಹಾಗೂ ಅರಬ್ಬಿ ಸಮುದ್ರ ಸೇರುವ ಸಂಗಮ ಸ್ಥಳವಾದ ಸದಾಶಿವಗಡ್‌ನಲ್ಲಿ 12 ಎಕರೆ ಜಮೀನನನ್ನು ನಿಗದಿ ಮಾಡಲಾಗಿದೆ. ಪ್ರಸಕ್ತ ಬಜೆಟ್‌ನಲ್ಲಿ ಅನುಮೋದನೆ ಪಡೆದು ಕಾರ್ಯ ಪ್ರಾರಂಭಿಸಲಾಗುತ್ತದೆ.

## 16 06 2020 ಭಾರತದ ವಾಯುಪಡೆಗೆ ಶೀಘ್ರದಲ್ಲಿ ಸೇರಲಿರುವ ಬ್ರಹ್ಮೋಸ್ ಕ್ಷಿಪಣಿ




ನವದೆಹಲಿ: ಬ್ರಹ್ಮೋಸ್ ವಾಯು ಉಡಾಯಿತ ಕ್ರೂಸ್ ಕ್ಷಿಪಣಿ (ALCM)ಗೆ ಎಫ್‌ಆರ್‌ಸಿ ಪ್ರಮಾಣ ಪತ್ರ ಸಿಕ್ಕಿದೆ. ಭಾರತೀಯ ವಾಯುಪಡೆಯಲ್ಲಿ ಎಫ್‌ಆರ್‌ಸಿ ಪ್ರಮಾಣ ಪತ್ರ ಪಡೆದ ಮೊದಲ ಕ್ಷಿಪಣಿ ಎಂಬ ಹೆಗ್ಗಳಿಕೆಗೆ ಬ್ರಹ್ಮೋಸ್ ಪಾತ್ರವಾಗಿದೆ.

* ಜೂನ್ 10 ರಂದು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ ವಿವಿಧ ಭಾಗಿದಾರರ ಉನ್ನತ ಮಟ್ಟದ ಸಭೆಯಲ್ಲಿ ಬ್ರಹ್ಮೋಸ್ ಕ್ಷಿಪಣಿಗೆ FRC ನೀಡಲಾಗಿದೆ. ಡಿಆರ್‌ಡಿಒ, ಎಎಸ್‌ಟಿಇ, ಎಸ್‌ಡಿಐ ಸೇರಿದಂತೆ ವಿವಿಧ ಭಾಗಿದಾರರು ಸಭೆಯಲ್ಲಿ ಭಾಗಿಯಾಗಿದ್ದರು.


*ಬ್ರಹ್ಮೋಸ್ ಕ್ಷಿಪಣಿಯನ್ನು DRDO ತಯಾರಿಸಿದ್ದು, ಭೂಮಿ, ಆಕಾಶ ಮತ್ತು ಸಮುದ್ರದಿಂದಲೂ ಉಡಾಯಿಸಬಹುದಾಗಿದೆ. ಬ್ರಹ್ಮೋಸ್ ವಿಶ್ವದ ಶಬ್ದಾತೀತ ವೇಗದ ಕ್ಷಿಪಣಿಗಳಲ್ಲಿ ಒಂದಾಗಿದೆ. ಈಗಾಗಲೇ ಈ ಕ್ಷಿಪಣಿಯ ಪರೀಕ್ಷೆ ಯಶ್ವಸ್ವಿಯಾಗಿದೆ.

* ರಷ್ಯಾ ಮತ್ತು ಭಾರತದ ಸಹಭಾಗಿತ್ವದಲ್ಲಿ ಬ್ರಹ್ಮೋಸ್ ಕ್ಷಿಪಣಿ ಸಿದ್ಧವಾಗಿದೆ. 2007ರಲ್ಲಿ ಭೂಮಿಯಿಂದ ಭೂಮಿಗೆ ಉಡಾವಣೆಗೊಳ್ಳುವ ಬ್ರಹ್ಮೋಸ್ ಕ್ಷಿಪಣಿ ಸೇನೆಯನ್ನು ಸೇರಿತ್ತು. ಆಕಾಶದಿಂದ ಉಡಾಯನ ಮಾಡಲು ಈಗ FRC ಸಿಕ್ಕಿದೆ.

* 2014ರಲ್ಲಿ ಸಮುದ್ರದಿಂದಲೂ ಉಡಾವಣೆ ಮಾಡಬಲ್ಲ ಬ್ರಹ್ಮೋಸ್ ಕ್ಷಿಪಣಿ ನೌಕಾಪಡೆಗೆ ಸೇರ್ಪಡೆಗೊಂಡಿತ್ತು. ರಷ್ಯಾದ ಪಿ 800 ಕ್ಷಿಪಣಿ ಮಾದರಿಯಲ್ಲಿಯೇ ಬ್ರಹ್ಮೋಸ್ ತಯಾರು ಮಾಡಲಾಗಿದೆ. ಭಾರತ ಮತ್ತು ರಷ್ಯಾದ ಎರಡು ನದಿಗಳ ಹೆಸರನ್ನು ಸೇರಿಸಿ ಕ್ಷಿಪಣಿಗೆ ಬ್ರಹ್ಮೋಸ್ ಎಂದು ನಾಮಕರಣ ಮಾಡಲಾಗಿದೆ.

# Current affairs of June 2020 from KPSC Vaani

### 17 06 2020 ಭಾರತದಲ್ಲಿ ತಾಪಮಾನ 4.4 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆಯಾಗಲಿದೆ = ಸರಕಾರದ ವರದಿ




ನವದೆಹಲಿ: ಈ ಶತಮಾನದ ಅಂತ್ಯದ ವೇಳೆಗೆ ಭಾರತದ ಸರಾಸರಿ ತಾಪಮಾನ 4.4 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚಾಗುವದಲ್ಲದೆ ಬಿಸಿಲಿನ ಧಗೆ 3 ರಿಂದ 4 ಪಟ್ಟು ಏರಿಕೆಯಾಗಬಹುದಾದ ಸಾಧ್ಯತೆಯಿದೆ ಎಂದು ಸರಕಾರದ ವರದಿ ತಿಳಿಸಿದೆ.

* ಭಾರತದ ಸರಾಸರಿ ತಾಪಮಾನ 1901 2018ರ ನಡುವೆ ಸುಮಾರು 0.7 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆಯಾಗಿದೆ ಹಾಗೂ ಇದು ಹಸಿರು ಮನೆ ಅನಿಲಗಳಿಂದ (ಗ್ರೀನ್ ಹೌಸ್ ಗ್ಯಾಸ್) ಉಂಟಾಗಿದೆ, ಎಂದು ಭೂ ವಿಜ್ಞಾನ ಸಚಿವಾಲಯದ ವರದಿ ತಿಳಿಸಿದೆ.
* ವರದಿಯನ್ನು ಭೂವಿಜ್ಞಾನಗಳ ಸಚಿವಾಲಯದ ಅಧೀನದಲ್ಲಿ ಬರುವ ಪುಣೆಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಮಿಟ್ರೋರಾಲಜಿಯ ಘಟಕವಾದ ಸೆಂಟರ್ ಫಾರ್ ಕ್ಲೈಮೇಟ್ ಚೇಂಜ್ ರಿಸರ್ಚ್ ತಯಾರಿಸಿದೆ.
* ಈ ಶತಮಾನದ ಅಂತ್ಯದೊಳಗೆ ಗರಿಷ್ಠ ತಾಪಮಾನದ ದಿನ ಹಾಗೂ ಕನಿಷ್ಠ ತಾಪಮಾನದ ರಾತ್ರಿಯ ತಾಪಮಾನಗಳಲ್ಲಿ ಕ್ರಮವಾಗಿ 4.7 ಹಾಗೂ 5.5 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆಯಾಗಲಿದೆ.

### 17 06 2020 ಭಾರತ ಗಡಿಯಲ್ಲಿ 20 ಯೋಧರು ಹುತಾತ್ಮ: ಸೇನೆ ಪ್ರತಿದಾಳಿಗೆ 43 ಚೀನಾ ಯೋಧರು ಸಾವು




ನವದೆಹಲಿ : ಪೂರ್ವ ಲಡಾಖ್ ಪ್ರದೇಶದ ಗಲ್ವಾನ್ ಕಣಿವೆಯಲ್ಲಿ ಭಾರತ ಮತ್ತು ಚೀನಾ ಸೈನಿಕರ ನಡುವೆ ಘರ್ಷಣೆ ನಡೆದಿದ್ದು, ಈ ಘರ್ಷಣೆಯಲ್ಲಿ ಭಾರತದ 20 ಯೋಧರು ಸೇರಿ ಚೀನಾ ರಾಷ್ಟ್ರದ 43 ಯೋಧರು ಹತ್ಯೆ ನಡೆದಿರುವದಾಗಿ ವರದಿಯಾಗಿದೆ. ಈ ಮೂಲಕ 53 ವರ್ಷಗಳ ಬಳಿಕ ಚೀನಾದಿಂದ ಈ ನೀಚ ಕೃತ್ಯ ನಡೆಸಲಾಗಿದೆ. ಈ ಉಭಯ ರಾಷ್ಟ್ರಗಳ ಘರ್ಷಣೆಯಲ್ಲಿ ಯಾವುದೇ ಗುಂಡಿನ ಚಕಮಕಿ ನಡೆದಿಲ್ಲ. ಬದಲಿಗೆ ಕಲ್ಲು, ರಾಡ್, ಬಡಿಗೆಯಿಂದ ಭಾರತದ ಸೈನಿಕರನ್ನು ಹತ್ಯೆ ಮಾಡಲಾಗಿದ್ದು, ಉಭಯ ದೇಶಗಳ ಗಡಿಯಲ್ಲಿ ಪ್ರಕ್ಷುಬ್ಧ ವಾತಾವರಣ ಇರುವದಾಗಿ ವರದಿಯಾಗಿದೆ.

* ಈ ಘಟನೆ ಕುರಿತಂತೆ ವಿಶ್ವಸಂಸ್ಥೆ ಕಳವಳ ವ್ಯಕ್ತಪಡಿಸಿದ್ದು ಉಭಯ ರಾಷ್ಟ್ರಗಳು ದೇಶಗಳು ತಾಳ್ಮೆ ವಹಿಸಬೇಕು ಎಂದು ತಿಳಿಸಿದೆ.

# Current affairs of June 2020 from KPSC Vaani



# Current affairs of June 2020 from KPSC Vaani

## 17 06 2020 ರಿಲಯನ್ಸ್ ಜಿಯೋದಲ್ಲಿ 10,750 ಕೋಟಿ ಹೂಡಿಕೆ ಮಾಡಲಿರುವ ಸೌದಿ ಅರೇಬಿಯಾದ PIF

ಹಲವು ಕಂಪನಿಗಳು ಈಗಾಗಲೇ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಒಡೆತನದ ಜಿಯೋ ಸಂಸ್ಥೆಯಲ್ಲಿ ಹೂಡಿಕೆ ಮಾಡುತ್ತಿದ್ದು, ಇದೀಗ ಈ ಸಾಲಿಗೆ ಸೌದಿ ಅರೇಬಿಯಾದ ವೆಲ್ತ್ ಫಂಡ್ ಆಗಿರುವ ಪಬ್ಲಿಕ್ ಇನ್ವೆಸ್ಟ್ ಮೆಂಟ್ ಫಂಡ್(Public Investment Fund) (ಪಿಐಎಫ್) ಸೇರಿಕೊಂಡಿದೆ. ರಿಲಯನ್ಸ್ ಇಂಡಸ್ಟ್ರೀಸ್ ಗೆ ಸೇರಿದ ಜಿಯೋ ಪ್ಲಾಟ್ ಫಾರ್ಮ್ ನಲ್ಲಿ 2.33 ಪರ್ಸೆಂಟ್ ಪಾಲನ್ನು ಪಡೆಯಲು ಈ ಸಂಸ್ಥೆಯು ಸುಮಾರು 150ಕೋಟಿ ಅಮೆರಿಕನ್ ಡಾಲರ್ (10,750 ಕೋಟಿ ರುಪಾಯಿಗೂ ಹೆಚ್ಚು) ಹೂಡಿಕೆ ಮಾಡಲು ಮುಂದಾಗಿದೆ ಎಂದು ಗಲ್ಫ್ ನ್ಯೂಸ್ ವರದಿ ಮಾಡಿದೆ.

## 17 06 2020 ಉದ್ಯಾನನಗರ ಬೆಂಗಳೂರಿಗೆ ಖೇಲೊ ಇಂಡಿಯಾ ಶ್ರೇಷ್ಠತಾ ಕೇಂದ್ರ

ಬೆಂಗಳೂರು : ಬೆಂಗಳೂರು ನಗರದ ಹೊರವಲಯದಲ್ಲಿರುವ ವಿದ್ಯಾನಗರದ ಕ್ರೀಡಾವಸತಿ ಶಾಲೆ ಕೇಂದ್ರಕ್ಕೆ ಖೇಲೊ ಇಂಡಿಯಾ ಶ್ರೇಷ್ಠತಾ ಕೇಂದ್ರದ ಮಾನ್ಯತೆ ಸಿಗಲಿದೆ. ಕೇಂದ್ರ ಕ್ರೀಡಾ ಇಲಾಖೆಯು ಅಂತಿಮಗೊಳಿಸಿರುವ ಪಟ್ಟಿಯಲ್ಲಿ ಒಟ್ಟು ಎಂಟು ರಾಜ್ಯಗಳಿಗೆ ಶ್ರೇಷ್ಠತಾ ಕೇಂದ್ರ ಸ್ಥಾಪಿಸಲಾಗುವದು ಅದರಲ್ಲಿ ಕರ್ನಾಟಕವೂ ಒಂದು. ಕಳೆದ ವರ್ಷವೇ ರಾಜ್ಯ ಕ್ರೀಡಾ ಇಲಾಖೆಯು ಖೇಲೊ ಇಂಡಿಯಾ ಶ್ರೇಷ್ಠತಾ ಕೇಂದ್ರ ಸ್ಥಾಪನೆಗೆ ಪ್ರಸ್ತಾವ ಸಲ್ಲಿಸಿತ್ತು.

* ವಿದ್ಯಾನಗರ ಕೇಂದ್ರದಲ್ಲಿ ಉತ್ತಮ ಮೂಲಸೌಲಭ್ಯಗಲಿದ್ದು ಸುಮಾರು 68 ಎಕರೆ ಜಾಗದಲ್ಲಿ ಅಥ್ಲೆಟಿಕ್ಸ್, ವಾಲಿಬಾಲ್, ಫುಟ್‌ಬಾಲ್ ಮತ್ತು ಬ್ಯಾಸ್ಕೆಟ್‌ಬಾಲ್ ಕ್ರೀಡೆಯ ಉತ್ತಮ ಸೌಲಭ್ಯಗಳು ಇವೆ. ಜೊತೆಗೆ ಒಳಾಂಗಣ ಕ್ರೀಡಾಂಗಣ 10 ಮೀಟರ್ ಶೂಟಿಂಗ್ ರೇಂಜ್, ಜಿಮ್ನಾಷಿಯಂ ಸೇರಿ ವಸತಿ ಸಂಕೀರ್ಣವನ್ನು ಒಳಗೊಂಡಿದೆ. ಅಲ್ಲದೆ ಇಲ್ಲಿ ಈಜುಗೊಳವನ್ನು ಕಾಣಬಹುದಾಗಿದೆ. ಆದ್ದರಿಂದ ಇಲ್ಲಿಗೆ ಶ್ರೇಷ್ಠತಾ ಕೇಂದ್ರದ ಮಾನ್ಯತೆ ಸಿಗುವ ಸಾಧ್ಯತೆಯನ್ನು ನಿರೀಕ್ಷಿಸಲಾಗಿತ್ತು' ಎಂದು ಇಲಾಖೆಯ ಮೂಲಗಳು ತಿಳಿಸಿವೆ.
*'ಮೆಗಾ ಸೆಂಟರ್' ಎಂಬ ಹೆಸರಿನಲ್ಲಿ ಈ ಶ್ರೇಷ್ಠತಾ ಕೇಂದ್ರವು ಕಾರ್ಯ ನಿರ್ವಹಿಸುತ್ತದೆ.
* ಕರ್ನಾಟಕ, ಒಡಿಶಾ, ಕೇರಳ, ತೆಲಂಗಾಣ, ಅರುಣಾಚಲಪ್ರದೇಶ, ಮಣಿಪುರ, ಮಿಜೋರಾಂ ಮತ್ತು ನಾಗಾಲ್ಯಾಂಡ್ ರಾಜ್ಯಗಳ ಲ್ಲಿ ಖೇಲೊ ಇಂಡಿಯಾ ಶ್ರೇಷ್ಠತಾ ಕೇಂದ್ರ ಸ್ಥಾಪನೆಗೆ ಅಂತಿಮಗೊಳಿಸಿದೆ.

# Current affairs of June 2020 from KPSC Vaani

### 17 06 2020 ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ನೂತನ ಕುಲಪತಿಯಾಗಿ ಎಂ.ಡಿ ವೆಂಕಟೇಶ್ ನೇಮಕ




ಮಣಿಪಾಲ : ಪ್ರಸ್ತುತ ಸಿಕ್ಕಿಂ ಮಣಿಪಾಲ ವಿವಿಯಲ್ಲಿ ಕುಲಪತಿಯಾಗಿರುವ ನಿವೃತ್ತ ಲೆಫ್ಟಿನೆಂಟ್ ಜನರಲ್ ಡಾ.ಎಂ.ಡಿ.ವೆಂಕಟೇಶ್ ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (ಮಾಹೆ)(MAHE)ನ ನೂತನ ಕುಲಪತಿಯಾಗಿ ನೇಮಕಗೊಂಡಿದ್ದಾರೆ. ಪ್ರಸ್ತುತ ಡಾ. ಎಚ್.ವಿನೋದ್ ಭಟ್ ಅವರು ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ನ ಕುಲಪತಿಯಾಗಿ ಸೇವೆ ಸಲ್ಲಿಸುತ್ತಿದ್ದು, ಇದೆ ಜುಲೈ 01 ರಂದು ಅವರು ನಿವೃತ್ತಿಗೊಳ್ಳಲಿದ್ದಾರೆ. ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದಿಂದ ಇನ್ ಸ್ಟಿಟ್ಯೂಟ್ ಆಫ್ ಎಮಿನೆನ್ಸ್ ಎಂದು ಗುರುತಿಸಲ್ಪಟ್ಟಿರುವ MAHE ಯ ನೂತನ ಕುಲಪತಿಯಾಗಿ ಡಾ.ಎಂ.ಡಿ.ವೆಂಕಟೇಶ್ ಜು.1ರಂದು ಅಧಿಕಾರ ಸ್ವೀಕರಿಸಲಿದ್ದಾರೆ.

### 18 06 2020 ವಿದೇಶಿ ನೇರ ಹೂಡಿಕೆ ಆಕರ್ಷಣೆಯಲ್ಲಿ ಭಾರತಕ್ಕೆ 9 ನೇ ಸ್ಥಾನ



ನವದೆಹಲಿ: ಕೊರೊನ್ ವೈರಸ್ ಜಾಗತಿಕವಾಗಿ ವ್ಯಾಪಿಸುತ್ತಿರುವ ಭೀತಿಯ ಸಮಯದಲ್ಲೂ ವಿದೇಶಿ ನೇರ ಹೂಡಿಕೆ ಆಕರ್ಷಿಸುವುದನ್ನು ಭಾರತ ಮುಂದುವರೆಸಲಿದೆ ಎಂದು ವಿಶ್ವಸಂಸ್ಥೆಯ ಟ್ರೇಡ್ ಅಂಡ್ ಡೆವಲಪ್‌ಮೆಂಟ್ ಕಾನ್ಫರೆನ್ಸ್ (UN Conference on Trade and Development) ತಿಳಿಸಿದೆ.

* 2018 19 ನೇ ಆರ್ಥಿಕ ವರ್ಷದಲ್ಲಿ ಅತಿ ಹೆಚ್ಚು ವಿದೇಶಿ ನೇರ ಹೂಡಿಕೆಯನ್ನು ಪಡೆದ 9 ನೇ ದೇಶವಾಗಿ ಭಾರತ ಹೊರಹೊಮ್ಮಿದೆ. ಭಾರತ 51 ಬಿಲಿಯನ್ ಡಾಲರ್ ವಿದೇಶಿ ನೇರ ಹೂಡಿಕೆಯನ್ನು ಪಡೆದಿದೆ ಎಂದು ಟ್ರೇಡ್ ಅಂಡ್ ಡೆವಲಪ್‌ಮೆಂಟ್ ಕಾನ್ಫರೆನ್ಸ್ ವರದಿ ಹೇಳಿದೆ.
* ಭಾರತವು2008ರಲ್ಲಿ ವಿದೇಶಿನೇರಬಂಡವಾಳಆಕರ್ಷಣೆಯಲ್ಲಿ 12ನೇಸ್ಥಾನದಲ್ಲಿತ್ತು.ಈಗ ಏಷ್ಯಾದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಐದನೇ ಅತಿದೊಡ್ಡ ಆರ್ಥಿಕತೆಯಾಗಿ ಭಾರತವು ಬೆಳೆಯುತ್ತಿದೆ.
* ಒಟ್ಟಾರೆಯಾಗಿ 2005 ರ ನಂತರ ಮೊದಲ ಬಾರಿಗೆ ಜಾಗತಿಕ ವಿದೇಶಿ ನೇರ ಹೂಡಿಕೆ 1ಟ್ರಿಲಿಯನ್‌ಡಾಲರ್ ಗಿಂತಕಡಿಮೆಯಾಗಿದೆವಿದೇಶಿನೇರಹೂಡಿಕೆ2020ರಲ್ಲಿ ಶೇಕಡಾ45ರಷ್ಟು ಕುಸಿಯುವ ನಿರೀಕ್ಷೆಯಿದೆ ಎಂದು ವರದಿ ಹೇಳುತ್ತದೆ.

# Current affairs of June 2020 from KPSC Vaani

**18 06 2020 ಕೊರೋನಾ ಪರಿಣಾಮ ಶೇ.56 ರಷ್ಟು GST ಕುಸಿದ ಏಪ್ರಿಲ್ ಮೇ ತಿಂಗಳ ಆದಾಯ**




ನವದೆಹಲಿ : ಭಾರತದಾದ್ಯಂತ ದೇಶಾದ್ಯಂತ ಕೊರೋನಾ ವೈರಸ್ ನಿಂದ ವಿಧಿಸಿದ ಲಾಕ್ ಡೌನ್ ಪರಿಣಾಮ ದೇಶದ ಬಹುತೇಕ ಉದ್ಯಮ ಚಟುವಟಿಕೆ ಸ್ಥಗಿತವಾಗಿದ್ದರ ಪರಿಣಾಮ ದೇಶದ GST ಆದಾಯ ಶೇ.56 ರಷ್ಟು ಕುಸಿತಗೊಂಡಿದೆ. ಕೇಂದ್ರ ಸರ್ಕಾರದ ಮೂಲಗಳ ಮಾಹಿತಿಯ ಪ್ರಕಾರ, ಕೊರೋನಾ ಲಾಕ್ ಡೌನ್ ನಿಂದಾಗಿ ಏಪ್ರಿಲ್ ತಿಂಗಳಲ್ಲಿ ಶೇ.56 ರಷ್ಟು ಮತ್ತು ಮೇ ತಿಂಗಳಿನಲ್ಲಿ ಶೇ 42 ರಷ್ಟು ಜಿಎಸ್‌ಟಿ ಆದಾಯ ಕುಸಿದಿದೆ ಎನ್ನಲಾಗಿದೆ.

**18 06 2020 ಭಾರತ ಚೀನಾ ಲಡಾಕ್ ಲಡಾಯಿ, ಸಂಯಮ ಕಾಪಾಡಲು ವಿಶ್ವಸಂಸ್ಥೆ ಮನವಿ**



ನವದೆಹಲಿ :ಭಾರತ ಮತ್ತು ಚೀನಾ ನಡುವಿನ Lineofcontrol(LAC)ನಲ್ಲಿ ಹಿಂಸಾಚಾರ ಮತ್ತು ಸಾವುಗಳ ವರದಿಗಳ ಬಗ್ಗೆ ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಆತಂಕ ವ್ಯಕ್ತಪಡಿಸಿದ್ದು, ಉಭಯ ರಾಷ್ಟ್ರಗಳಿಗೆ ಗರಿಷ್ಠ ಸಂಯಮ ಕಾಪಾಡಿಕೊಳ್ಳಬೇಕೆಂದು ಮನವಿ ಮಾಡಿದ್ದಾರೆ. ನಾವು ವರದಿಗಳನ್ನು ಸಕಾರಾತ್ಮಕವಾಗಿ ಗಮನಿಸುತ್ತೇವೆ. ಭಾರತ ಮತ್ತು ಚೀನಾ ನಡುವಿನ ವಾಸ್ತವಿಕ ನಿಯಂತ್ರಣ ರೇಖೆಯಲ್ಲಿ (ಎಲ್ಎಸಿ) ಹಿಂಸಾಚಾರ ಮತ್ತು ಸಾವುಗಳ ವರದಿಗಳ ಬಗ್ಗೆ ನಾವು ಕಳವಳ ಹೊಂದಿದ್ದೇವೆ ಮತ್ತು ಗರಿಷ್ಠ ಸಂಯಮವನ್ನು ನಿರ್ವಹಿಸುವಂತೆ ಎರಡೂ ಕಡೆಯವರನ್ನು ಒತ್ತಾಯಿಸುತ್ತೇವೆ ಎಂದು ಅವರು ತಿಳಿಸಿದ್ದಾರೆ.

# Current affairs of June 2020 from KPSC Vaani

### 18 06 2020 ಬ್ರಿಟಿಷ್ ಕೈಗಾರಿಕಾ ಮಹಾಒಕ್ಕೂಟ ಅಧ್ಯಕ್ಷರಾಗಿ ಭಾರತ ಸಂಜಾತ ಕರಣ್ ಬಿಲಿಮೊರಿಯಾ ಆಯ್ಕೆ



ಲಂಡನ್ :ಭಾರತ ಸಂಜಾತ ಉದ್ಯಮಿ ಲಾರ್ಡ್ ಕರಣ್ ಬಿಲಿಮೊರಿಯಾ ಅವರು ಸುಮಾರು 1.90ಲಕ್ಷ ಸದಸ್ಯರನ್ನು ಒಳಗೊಂಡ ಕಾನ್ಫಡರೇಷನ್ ಆಫ್ ಬ್ರಿಟಿಷ್ ಇಂಡಸ್ಟ್ರಿ (ಬ್ರಿಟಿಷ್ ಕೈಗಾರಿಕಾ ಮಹಾಒಕ್ಕೂಟ) ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇವರು ಯುಕೆ ಇಂಡಿಯಾ ಬಿಸಿನೆಸ್ ಕೌನ್ಸಿಲ್‌ನ ಸಂಸ್ಥಾಪಕ ಅಧ್ಯಕ್ಷರಾಗಿಯೂ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿದ್ದಾರೆ.
* 58 ವರ್ಷ ಪ್ರಾಯದ ಕರಣ್ ಅವರು ಕೋಬ್ರಾ ಬಿಯರ್ ಕಂಪನಿಯ ಸಂಸ್ಥಾಪಕರಾಗಿದ್ದು, ಕಳೆದ ವರ್ಷ ಮಹಾಒಕ್ಕೂಟದ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದರು.

### 18 06 2020 ಇಂದು ಮಾಸ್ಕ್ ದಿನಾಚರಣೆ ಆಚರಿಸಲು ಸರಕಾರದ ಆದೇಶ



ಬೆಂಗಳೂರು : ಕರ್ನಾಟಕ ರಾಜ್ಯ ಸರ್ಕಾರವು ಕೊರೊನ ಸೋಂಕಿನ ಬಗ್ಗೆ ರಾಜ್ಯದ ಜನ ಸಮುದಾಯದಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲು ಇಂದು 'ಮಾಸ್ಕ್ ದಿನ' ವನ್ನಾಗಿ ಆಚರಿಸುವಂತೆ ರಾಜ್ಯ ಸರಕಾರ ಕರೆ ನೀಡಿದೆ ಇಂದು ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಆಡಳಿತವು ಚುನಾಯಿತ ಪ್ರತಿನಿಧಿಗಳು, ಗಣ್ಯ ವ್ಯಕ್ತಿಗಳು, ವೈದ್ಯಕೀಯ ಸಿಬ್ಬಂದಿಗಳು ಆಯಾ ಪ್ರದೇಶಗಳ ಸಾರ್ವಜನಿಕರಿಗೆ ಪಾದಯಾತ್ರೆಯ ಮೂಲಕ ಕೊರೊನ ಬಗ್ಗೆ ಜಾಗೃತಿ ಮೂಡಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯಭಾಸ್ಕರ್ ಆದೇಶಿಸಿದ್ದಾರೆ.

# Current affairs of June 2020 from KPSC Vaani

## 18 06 2020 ಅಖಿಲ ಭಾರತ ವ್ಯಾಪಾರಿಗಳ ಒಕ್ಕೂಟದಿಂದ 3 ಸಾವಿರ ಚೀನೀ ಉತ್ಪನ್ನಗಳಿಗೆ ನಿರ್ಬಂಧ




ನವದೆಹಲಿ : ಭಾರತ ಮತ್ತು ಚೀನಾ ರಾಷ್ಟ್ರಗಳ ನಡುವೆ ಉದ್ಭವಿಸಿರುವ ಗಡಿ ಸಮಸ್ಯೆಯಿಂದಾಗಿ ಅಖಿಲ ಭಾರತ ವ್ಯಾಪಾರಿಗಳ ಒಕ್ಕೂಟ (ಸಿಎಐಟಿ)ವು ಸುಮಾರು 3 ಸಾವಿರ ಚೀನೀ ಉತ್ಪನ್ನಗಳಿಗೆ ನಿರ್ಬಂಧ ಘೋಷಿಸುವ ಮೂಲಕ ಚೀನಕ್ಕೆ ಆಘಾತ ನೀಡಿದೆ.
* ಕಾಸ್ಮೆಟಿಕ್ಸ್, ಬ್ಯಾಗ್, ಗೊಂಬೆ, ಪೀಠೋಪಕರಣ, ಪಾದರಕ್ಷೆ, ವಾಚ್ ಸೇರಿದಂತೆ 450 ಸಂಸ್ಥೆಗಳ 3 ಸಾವಿರ ಉತ್ಪನ್ನಗಳಿಗೆ ನಿರ್ಬಂಧ ಹೇರಿದೆ.
* ಜೂ.10 ರಿಂದಲೇ ಭಾರತೀಯ ಸಾಮಾನ್ ಹಮಾರಾ ಅಭಿಯಾನ್ ಆರಂಭಿಸಿದ್ದೇವೆ. ದೇಶೀಯ ವಸ್ತುಗಳಿಗೆ ಪ್ರೋತ್ಸಾಹ ನೀಡಲು ಕರೆನೀಡುತ್ತಿದ್ದೇವೆ' ಎಂದು ಪ್ರವೀಣ್ ಖಂಡೇಲ್ವಾಲ್ ತಿಳಿಸಿದ್ದಾರೆ.

## 18 06 2020 ಚೀನಾಮೂಲದAIIBಬ್ಯಾಂಕ್‌ನಿಂದಭಾರತಕ್ಕೆ5,714 ಕೋಟಿರೂಪಾಯಿಸಾಲ

ನವದೆಹಲಿ: ಭಾರತ ಮತ್ತು ಚೀನಾ ರಾಷ್ಟ್ರಗಳ ಮಧ್ಯ ಗಡಿ ವಿವಾದ ತಾರಕಕ್ಕೆ ಏರಿರುವ ಹಿನ್ನಲೆಯಲ್ಲೇ ಚೀನಾಮೂಲದAsianInfrastructureInvestmentBank (AIIB)ಭಾರತಕ್ಕೆ ಸುಮಾರು5,714ಕೋಟಿರೂಪಾಯಿಸಾಲವನ್ನುಮಂಜೂರುಮಾಡಿದೆ.ಕೋವಿಡ್ 19 ವಿರುದ್ಧದ ಭಾರತದ ಹೋರಾಟವನ್ನು ಬಲಪಡಿಸಲು ಈ ಸಾಲ ಸಹಾಯ ಮಾಡಲಿದೆ ಎಂದು ದಿ ಹಿಂದೂಸ್ತಾನ್ ಟೈಮ್ಸ್ ವರದಿ ಮಾಡಿದೆ.
* ಏಷ್ಯನ್ ಡೆವಲಪ್ಮೆಂಟ್ ಬ್ಯಾಂಕ್‌ನ (ADB) ಸಹಕಾರದೊಂದಿಗೆ ಭಾರತಕ್ಕೆ ಈ ಸಾಲ ಸೌಲಭ್ಯ ದೊರೆಯಲಿದೆ.

# Current affairs of June 2020 from KPSC Vaani

## 20 06 2020 ವಿಶ್ವದ ಟಾಪ್ ಟೆನ್ ಶ್ರೀಮಂತರ ಪಟ್ಟಿಯಲ್ಲಿ ಮುಕೇಶ್ ಅಂಬಾನಿ = ಆಸ್ತಿ 4,90,960 ಕೋಟಿ ರು.



ರಿಲಯನ್ಸ್ ಇಂಡಸ್ಟ್ರೀಸ್ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಅಧ್ಯಕ್ಷರು ಆಗಿರುವ ಮುಕೇಶ್ ಅಂಬಾನಿ ಅವರು ವಿಶ್ವದ ಟಾಪ್ 10 ಶ್ರೀಮಂತರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಇತ್ತೀಚಿಗೆ ಫೋರ್ಬ್ಸ್ ನವರ ರಿಯಲ್ ಟೈಮ್ ಬಿಲಿಯನೇರ್ ಗಳ ಪಟ್ಟಿ ಪ್ರಕಟವಾಗಿದ್ದು, ಇದರಲ್ಲಿ ಮುಕೇಶ್ ಅವರ ಆಸ್ತಿಯ ಒಟ್ಟು ಮೌಲ್ಯ 6,460 ಕೋಟಿ ಅಮೆರಿಕನ್ ಡಾಲರ್ ಎಂದು ತಿಳಿಸಲಾಗಿದೆ.
* ಅಮೆಜಾನ್ ಸ್ಥಾಪಕ ಜೆಫ್ ಬೆಜೋಸ್ ಒಟ್ಟು 16,040 ಕೋಟಿ ಅಮೆರಿಕನ್ ಡಾಲರ್ ಆಸ್ತಿ ಹೊಂದುವ ಮೂಲಕ ಈ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ.
* ಬಿಲ್ ಗೇಟ್ಸ್ 10,990 ಕೋಟಿ ಅಮೆರಿಕನ್ ಡಾಲರ್ ಆಸ್ತಿಯೊಂದಿಗೆ ನಂತರದ ಸ್ಥಾನದಲ್ಲಿದ್ದಾರೆ.
* ಗೂಗಲ್ ಸಹ ಸಂಸ್ಥಾಪಕ ಲ್ಯಾರಿ ಪೇಜ್ 6480ಕೋಟಿ ಡಾಲರ್ ಆಸ್ತಿಯೊಂದಿಗೆ ಮುಕೇಶ್ ಅಂಬಾನಿಗಿಂತ ಒಂದು ಸ್ಥಾನ ಮೇಲಿದ್ದಾರೆ.

## 20 06 2020 ದೇಶದಲ್ಲಿ ಶೀಘ್ರದಲ್ಲಿ 1000 ಖೇಲೊ ಇಂಡಿಯಾ ಕೇಂದ್ರಗಳ ಆರಂಭ




ನವದೆಹಲಿ: ಭಾರತಾದ್ಯಂತ ಜಿಲ್ಲಾ ಮಟ್ಟದಲ್ಲಿ 1000 ಖೇಲೊ ಇಂಡಿಯಾ ಕೇಂದ್ರಗಳನ್ನು (ಕೆಐಸಿ) ಆರಂಭಿಸಲು ಕೇಂದ್ರ ಕ್ರೀಡಾ ಸಚಿವಾಲಯ ಸಿದ್ಧತೆ ನಡೆಸಿದೆ. ಈ ಕೇಂದ್ರಗಳನ್ನು ಆರಂಭಿಸಿ ಇವುಗಳ ನಿರ್ವಹಣೆಯ ಹೊಣೆಯನ್ನು ಕ್ರೀಡಾ ಚಾಂಪಿಯನ್‌ಗಳ ನೆರವು ಪಡೆಯಲು ಇಲಾಖೆ ಚಿಂತನೆ ನಡೆಸಿದೆ.
* ಈ ಹಿಂದೆ ವಿವಿಧ ಕ್ರೀಡೆಗಳಲ್ಲಿ ಚಾಂಪಿಯನ್ ಆದ ಪಟುಗಳು ಈ ಕೇಂದ್ರಗಳನ್ನು ಮುನ್ನಡೆಸಲಿದ್ದಾರೆ ಅಥವಾ ಅವರನ್ನು ಕೋಚ್ ಆಗಿಯೂ ನೇಮಿಸಿಕೊಳ್ಳಲಾಗುತ್ತದೆ.
* 'ಭಾರತವನ್ನು ಒಂದು ಕ್ರೀಡಾ ಶಕ್ತಿಯಾಗಿ ರೂಪಿಸಲು ನಾವು ಶ್ರಮಿಸುತ್ತಿರುವ ಈ ಹೊತ್ತಿನಲ್ಲಿ, ಯುವಕರಿಗೆ ಕ್ರೀಡೆಯು ವೃತ್ತಿ ಬದುಕಿನ ಉತ್ತಮ ಆಯ್ಕೆಯಾಗಿದೆ ಎಂಬುದನ್ನು ಖಚಿತಪಡಿಸಬೇಕಿದೆ' ಎಂದು ಕ್ರೀಡಾ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ.

# Current affairs of June 2020 from KPSC Vaani

**20 06 2020 ಮಹಿಳಾ ವಿವಿ ನೂತನ ಕುಲಪತಿಯಾಗಿ ಓಂಕಾರ ಕಾಕಡೆ ಅಧಿಕಾರ ಸ್ವೀಕಾರ**



ವಿಜಯಪುರ : ರಾಜ್ಯದ ಏಕೈಕ ಮಾಹಿಳಾ ವಿಶ್ವವಿದ್ಯಾಲಯವಾದ ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪ್ರಸ್ತುತ ಸೇವೆಯಲ್ಲಿರುವ ಹಾಲಿ ಕುಲಪತಿ ಪ್ರೊ.ಸಬಿಹಾ ಭೂಮಿಗೌಡ ಅವರು ನಾಲ್ಕು ವರ್ಷಗಳ ಸೇವೆಯ ನಂತರ ಇದೀಗ ನಿವೃತ್ತಿಯಾದ ಹಿನ್ನೆಲೆಯಲ್ಲಿ ಅವರ ಸ್ಥಾನಕ್ಕೆ ನೂತನವಾಗಿ ಸಮಾಜ ವಿಜ್ಞಾನದ ಡೀನ್ ಪ್ರೊ.ಓಂಕಾರ ಕಾಕಡೆ ಅವರನ್ನು ನೇಮಕ ಮಾಡಿ ರಾಜ್ಯದ ರಾಜ್ಯಪಾಲರು ಹಾಗೂ ವಿವಿಯ ಕುಲಾಧಿಪತಿಗಳು ಆದ ವಜುಬಾಯಿ ವಾಲಾ ಆದೇಶ ಹೊರಡಿಸಿದ್ದಾರೆ.

**20 06 2020 ಆಶಾ ಕಾರ್ಯಕರ್ತೆಯರಿಗೆ ರಾಜ್ಯಸರ್ಕಾರದಿಂದ ಪ್ರೋತ್ಸಾಹಧನ = ಸಚಿವ ಎಸ್.ಟಿ.ಸೋಮಶೇಖರ**



ಬಳ್ಳಾರಿ : ರಾಜ್ಯದಲ್ಲಿ ಕೋರೋಣ ವೈರಸ್ ವಿರುದ್ದ ಹೋರಾಟದಲ್ಲಿ ಶ್ರಮವಹಿಸಿದ ಎಲ್ಲ 42 ಸಾವಿರ ಜನ ಆಶಾಕಾರ್ಯಕರ್ತೆಯರಿಗೆ ತಲಾ 3 ಸಾವಿರಗಳಂತೆ ರಾಜ್ಯ ಸರ್ಕಾರದಿಂದ ಪ್ರೋತ್ಸಾಹಧನ ವಿತರಣೆ ಮಾಡಲಾಗುತ್ತಿದೆ.
* ಕೋವಿಡ್ 19ರ ಸಂಕಷ್ಟದ ದಿನಗಳಲ್ಲಿ ಆಶಾ ಕಾರ್ಯಕರ್ತೆಯರು ಬಿಸಿಲು ಮಳೆ ಎನ್ನದೇ ಕರ್ತವ್ಯನಿರ್ವಹಣೆ ಮಾಡಿದ್ದು, ಕೋವಿಡ್ ನಿಯಂತ್ರಣದಲ್ಲಿ ಅವರ ಪಾಲು ಬಲುದೊಡ್ಡದು. ಇವರ ಸೇವೆಯನ್ನು ಪರಿಗಣಿಸಿದ ಮುಖ್ಯಮಂತ್ರಿಗಳು ಆಶಾ ಕಾರ್ಯಕರ್ತೆಯರಿಗೆ ತಲಾ 3 ಸಾವಿರ ರೂಪಾಯಿ ಪ್ರೋತ್ಸಾಹಧನ ಘೋಷಿಸಿದ್ದಾರೆ.

### 20 06 2020 ಇಂದಿನಿಂದಗರೀಬ್ಕಲ್ಯಾಣ್ರೋಜ್ಗಾರ್ಯೋಜನೆಆರಂಭ




ನವದೆಹಲಿ : ಪ್ರಧಾನಿ ನರೇಂದ್ರ ಮೋದಿ ಜೂ.20 ರಂದು ಗರೀಬ್ ಕಲ್ಯಾಣ್ ರೋಜ್‌ಗಾರ್ ಅಭಿಯಾನಕ್ಕೆ ಚಾಲನೆ ನೀಡಲಿದ್ದು, ಈ ಯೋಜನೆಯು ಒಟ್ಟು 50 ಸಾವಿರ ಕೋಟಿ ರೂ. ಮೌಲ್ಯದ್ದಾಗಿದೆ. ಕೋರೋಣ ಭೀತಿಯಿಂದಾಗಿ ದೇಶದಲ್ಲಿ ವಿಧಿಸಿದ ಲಾಕ್‌ಡೌನ್ ಸಮಯದಲ್ಲಿ ತವರು ರಾಜ್ಯಗಳಿಗೆ ಮರಳಿರುವ ವಲಸೆ ಕಾರ್ಮಿಕರಿಗೆ ಆರ್ಥಿಕ ನೆರವು ನೀಡಲು ಉದ್ಯೋಗ ಒದಗಿಸುವ ಮುಖ್ಯ ಉದ್ದೇಶದಿಂದ ಯೋಜನೆಯನ್ನು ಆರಂಭಿಸಲಾಗಿದ್ದು, ಒಟ್ಟು 6 ರಾಜ್ಯಗಳ ಕಾರ್ಮಿಕರಿಗೆ ಈ ಯೋಜನೆಯಿಂದ ನೆರವಾಗಲಿದೆ.
* ಬಿಹಾರದ ಖಗಾರಿಯಾ ಜಿಲ್ಲೆಯ ತೆಲಿಹಾರ್ ಗ್ರಾಮದಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ಯೋಜನೆಗೆ ಪ್ರಧಾನಿ ಚಾಲನೆ ನೀಡಲಿದ್ದಾರೆ. ಒಟ್ಟು 125 ದಿನಗಳ ಬೃಹತ್ ಅಭಿಯಾನ ಇದಾಗಿದೆ.
* ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಜಾರ್ಖಂಡ್ ಮತ್ತು ಒಡಿಶಾ ರಾಜ್ಯದ 116 ಜಿಲ್ಲೆಗಳನ್ನು ಈ ಯೋಜನೆಗೆ ಆಯ್ಕೆಮಾಡಲಾಗಿದೆ


### 21 06 2020 2ನೇಮಹಾಯುದ್ಧದ75ನೇವಿಜಯೋತ್ಸವಆಚರಣೆಯಲ್ಲಿ ಪಾಲ್ಗೊಳ್ಳಲಿರುವರಾಜನಾಥ್ಸಿಂಗ್



ನವದೆಹಲಿ : ರಷ್ಯಾದ ಮಾಸ್ಕೊ ನಗರದಲ್ಲಿ ಎರಡನೇ ಮಹಾಯುದ್ಧದಲ್ಲಿ ವಿಜಯೋತ್ಸವದ 75ನೇ ವರ್ಷಾಚರಣೆಯ ನೆನಪಿಗಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಾಸ್ಕೊ ದಲ್ಲಿ ನಡೆಯಲಿರುವ ಈ ಕಾರ್ಯಕ್ರಮಕ್ಕೆ ಭಾರತದಿಂದ ರಕ್ಷಣಾ ಸಚಿವರಾದ ರಾಜನಾಥ್ ಸಿಂಗ್ ಭಾಗವಹಿಸಲಿದ್ದಾರೆ. ಇದೆ ಜೂನ್ 24, 2020ರಂದು ಮಾಸ್ಕೊ ನಗರದಲ್ಲಿ ವಿಕ್ಟರಿ ಪೆರೇಡ್ ನಡೆಯಲಿದೆ.

# Current affairs of June 2020 from KPSC Vaani

### 21 06 2020 ಇಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ




ಪ್ರಧಾನಿ ನರೇಂದ್ರ ಮೋದಿಯವರು 2014 ರ ಸೆಪ್ಟೆಂಬರ್ 27ರಂದು ವಿಶ್ವಸಂಸ್ಥೆಯ ಮಹಾಧಿವೇಶನದ ತಮ್ಮ ಭಾಷಣದಲ್ಲಿ ಯೋಗ ದಿನ ಕುರಿತು ಪ್ರಸ್ತಾಪಿಸಿದ್ದರು. ಅದರಂತೆಯೇ ವಿಶ್ವಸಂಸ್ಥೆಯು ಜೂನ್ 21 ನ್ನು ಅಂತಾರಾಷ್ಟ್ರೀಯ ಯೋಗ ದಿನ ಅಥವಾ ವಿಶ್ವ ಯೋಗ ದಿನವೆಂದು ಘೋಷಿಸುವ ನಿರ್ಣಯವನ್ನು 2014 ರ ಡಿಸೆಂಬರ್ 11 ಕೈಗೊಂಡಿತು. ಅದರಂತೆಯೇ ಪ್ರತಿ ವರ್ಷ ಜೂನ್ 21ರಂದು ಅಂತಾರಾಷ್ಟ್ರೀಯ ಯೋಗ ದಿನ ಅಥವಾ ವಿಶ್ವ ಯೋಗ ದಿನವೆಂದು ಆಚರಿಸಲಾಗುತ್ತದೆ.

* ಜಾಗತಿಕವಾಗಿ ವ್ಯಾಪಿಸಿರುವ ಕೊವಿಡ್ 19 ಪರಿಣಾಮವಾಗಿ ಇದೇ ಮೊದಲ ಬಾರಿಗೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಡಿಜಿಟಲ್ ಆಗಿರಲಿದ್ದು, ಡಿಜಿಟಲ್ ಮೀಡಿಯಾ ವೇದಿಕೆಗಳ ಮೂಲಕ ಯೋಗ ದಿನಾಚರಣೆ ನಡೆಯಲಿದೆ.
* ಪ್ರಧಾನಿ ನರೇಂದ್ರ ಮೋದಿ ಅವರ ಸಂದೇಶ ಕಾರ್ಯಕ್ರಮದ ಕೇಂದ್ರಬಿಂದುವಾಗಿರಲಿದೆ.
* ಈ ವರ್ಷದ ಘೋಷವಾಕ್ಯ: 'Yoga at Home and Yoga with Family'

### 21 06 2020 ಕೆಎಸ್ಎಲ್ ಟಿಎ ಅಭಿವೃದ್ಧಿ ಸಮಿತಿ ಅಧ್ಯಕ್ಷರಾಗಿ ರೋಹನ್ ಬೋಪಣ್ಣ ನೇಮಕ



ಬೆಂಗಳೂರು: ಪ್ರಸ್ತುತ ಕೆಎಸ್ಎಲ್ ಟಿಎ ಉಪಾಧ್ಯಕ್ಷರಾಗಿರುವ ರೋಹನ್ ಬೋಪಣ್ಣ ಅವರನ್ನು ಕೆಎಸ್ಎಲ್ ಟಿಎ ಅಭಿವೃದ್ಧಿ ಸಮಿತಿಯ ಮುಖ್ಯಸ್ಥರನ್ನಾಗಿ ನೇಮಕ ಮಾಡಿ ಕಾರ್ಯಕಾರಿ ಸಮಿತಿಯು ಆದೇಶಿಸಿದೆ.

* ರೋಹನ್ ಬೋಪಣ್ಣವರು ಸಾಕಷ್ಟು ಪರಿಣತಿ ಮತ್ತು ಮೌಲ್ಯ ಹೊಂದಿದ್ದು, ಈ ಹುದ್ದೆ ನಿಭಾಯಿಸುವದರಿಂದ KSLTAಗೆ ಯುವ ಆಟಗಾರರನ್ನು ತಂದು ಅವರಿಂದ ಕೆಲಸ ಮಾಡಿಸುತ್ತಾರೆ.

# Current affairs of June 2020 from KPSC Vaani

**21 06 2020 ಅಮೆರಿಕದ ನ್ಯಾಷನಲ್ ಸೈನ್ಸ್ ಫೌಂಡೇಷನ್ ನಿರ್ದೇಶಕರಾಗಿ ಸೇತುರಾಮನ್ ನೇಮಕ**



ವಾಷಿಂಗ್ಟನ್: ಅಮೆರಿಕಾದ ನ್ಯಾಷನಲ್ ಸೈನ್ಸ್ ಫೌಂಡೇಷನ್‌ನ (NSF) ನಿರ್ದೇಶಕರನ್ನಾಗಿ ಭಾರತ ಮೂಲದ ಅಮೆರಿಕ ವಿಜ್ಞಾನಿಯಾದ ಡಾ.ಸೇತುರಾಮನ್ ಪಂಚನಾಥನ್‌ಅವರನ್ನು ನೇಮಿಸಲು ಅಮೇರಿಕಾ ಸೆನೆಟ್ ಅನುಮೋದಿಸಿದೆ.
* ಇದೆ ಜುಲೈ 6ರಂದು ಸೇತು ರಾಮನ್ ಅವರು NSF ನ ನಿರ್ದೇಶಕರಾಗಿ ಅಧಿಕಾರ ಸ್ವೀಕರಿಸಲಿದ್ದಾರೆ.
* ಅಮೆರಿಕದ ನ್ಯಾಷನಲ್ ಸೈನ್ಸ್ ಫೌಂಡೇಷನ್ ವಿಜ್ಞಾನ ಮತ್ತು ಎಂಜಿನಿಯರಿಂಗ್‌ಗೆ ಸಂಬಂಧಿಸಿದಂತೆ ವೈದ್ಯಕೀಯೇತರ ವಿಭಾಗಗಳಲ್ಲಿ ಮೂಲಭೂತ ಸಂಶೋಧನೆಗಳಿಗೆ ಪ್ರೋತ್ಸಾಹ ಒದಗಿಸುತ್ತದೆ.
* ಅಮೇರಿಕಾ ದೇಶದ ಪ್ರತಿಷ್ಠಿತ ಸಂಸ್ಥೆಯಾದ NSFನ ವಾರ್ಷಿಕ ಬಜೆಟ್ ಸುಮಾರು ₹ 56,426 ಕೋಟಿ (7.4 ಶತಕೋಟಿ ಡಾಲರ್).

**21 06 2020 ಭಾರತೀಯರಿಗಾಗಿ ನೇಪಾಳದಲ್ಲಿ ಹೊಸ ಪೌರತ್ವ ಕಾಯ್ದೆ ಜಾರಿ**



ನವದೆಹಲಿ: ಇತ್ತೀಚಿಗೆ ಕಾಲಾಪಾನಿ, ಲಿಪುಲೇಖ್ ಮತ್ತು ಲಿಂಪಿಯಾಧುರಾ ಬಳಿಯ ಭಾರತದ ಭಾಗವನ್ನು ತನ್ನದೆಂದು ಹೇಳಿಕೊಂಡು ಭಾರತದ ಕೆಂಗಣ್ಣಿಗೆ ಗುರಿಯಾಗಿದ್ದ ನೆರೆಯ ನೇಪಾಳ ರಾಷ್ಟ್ರವು, ಇದೀಗ ಭಾರತೀಯರಿಗಾಗಿ ಹೊರ ಪೌರತ್ವ ಕಾಯ್ದೆಯನ್ನು ಜಾರಿಗೊಳಿಸಲು ಮುಂದಾಗಿದೆ.
* ಈ ನೂತನ ಕಾಯ್ದೆಯ ಪ್ರಕಾರ ನೇಪಾಳದ ಹುಡುಗನನ್ನು ಮದುವೆಯಾದ ಭಾರತೀಯ ಯುವತಿಗೆ ಏಳು ವರ್ಷಗಳ ಬಳಿಕ ನೇಪಾಳದ ಪೌರತ್ವ ದೊರೆಯಲಿದೆ.
* ಭಾರತದಲ್ಲಿ ಜಾರಿಯಲ್ಲಿರುವ ಪೌರತ್ವ ಕಾಯ್ದೆಯ ಪ್ರಕಾರ ನೇಪಾಳದ ಯುವತಿಯರಿಗೆ ಅವರು ಮದುವೆಯಾದ ದಿನದಿಂದಲೇ ಅವರಿಗೆ ಭಾರತದ ಪೌರತ್ವ ದೊರೆಯುತ್ತದೆ. ಆದರೆ ಇದು ಬೇರೆ ದೇಶಗಳ ಯುವತಿಯರಿಗೆ ಅನ್ವಯಿಸುವದಿಲ್ಲ. ಬೇರೆ ರಾಷ್ಟ್ರಗಳ ಯುವತಿಯರಿಗೆ ಅವರು ಮದುವೆಯಾದ 7 ವರ್ಷಗಳ ನಂತರ ಭಾರತೀಯ ಪೌರತ್ವ ನೀಡಲಾಗುತ್ತಿದೆ.

# Current affairs of June 2020 from KPSC Vaani



# Current affairs of June 2020 from KPSC Vaani

**22 06 2020 ಮಾಜಿ ಕ್ರಿಗೆಟಿಗ, ರಣಜಿ ಕ್ರಿಕೆಟ್ ದಿಗ್ಗಜ ರಾಜಿಂದರ್ ಗೊಯೆಲ್ ಇನ್ನಿಲ್ಲ**



ಕೋಲ್ಕತ್ತಾ : ಮಾಜಿ ಕ್ರಿಕೆಟಿಗ, ಎಡಗೈ ಸ್ಪಿನ್ನರ್, ರಣಜಿ ಕ್ರಿಕೆಟ್ ನ ದಿಗ್ಗಜ ಎಂದೇ ಖ್ಯಾತರಾಗಿದ್ದ ರಾಜಿಂದರ್ ಗೊಯೆಲ್ ಅವರು ತಮ್ಮ 77 ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು. ರಾಜಿಂದರ್ ಗೋಯೆಲ್ ಅವರು ಭಾರತ ತಂಡದ ಪರ ಯಾವುದೇ ಅಂತಾರಾಷ್ಟ್ರೀಯ ಕ್ರಿಕೆಟ್ ಆಡಿಲ್ಲವಾದರೂ, ದೇಶೀಯ ವಲಯದಲ್ಲಿ ಉತ್ತಮ ಸ್ಪಿನ್ನರ್ ಆಗಿ ಪರಿಚಯಿಸಿಕೊಂಡಿದ್ದರು.

* ರಾಜಿಂದರ್ 157 ಪ್ರಥಮ ದರ್ಜೆ ಕ್ರಿಕೆಟ್ ಪಂದ್ಯಗಳನ್ನು ಭಾಗಿಯಾಗಿದ್ದು, ಹರ್ಯಾಣ ಪರವಾಗಿ 750 ವಿಕೆಟ್ ಕಬಳಿಸಿದ್ದರು.

* ರಣಜಿ ಕ್ರಿಕೆಟ್ ನಲ್ಲಿ ಅತೀ ಹೆಚ್ಚು ವಿಕೆಟ್ ಪಡೆದ ದಾಖಲೆ ರಾಜಿಂದರ್ ಅವರ ಹೆಸರಲ್ಲಿದೆ. ಅವರು 637 ವಿಕೆಟ್ ಪಡೆದಿದ್ದಾರೆ.

* 1957 58ರಲ್ಲಿ ರಣಜಿ ಪದಾರ್ಪಣೆ ಮಾಡಿದ್ದ ಗೋಯಲ್ ತನ್ನ 44 ವಯಸ್ಸಿನಲ್ಲಿ ವಿದಾಯ ಹೇಳಿದ್ದರು.

* 2017ರಲ್ಲಿ ಬಿಸಿಸಿಐ ರಾಜಿಂದರ್ ಗೋಯೆಲ್ ಅವರಿಗೆ ಸಿಕೆ ನಾಯ್ಡು ಜೀವಮಾನದ ಸಾಧನೆ ಪುರಸ್ಕಾರ ನೀಡಲಾಗಿತ್ತು.

**22 06 2020 ಭಾರತ,ಚೀನಾಗಡಿವಿವಾದ:ಮಧ್ಯಸ್ಥಿಕೆವಹಿಸುವದಾಗಿಟ್ರಂಪ್ ಘೋಷಣೆ**



ವಾಶಿಂಗ್ಟನ್ : ಭಾರತ ಮತ್ತು ಚೀನಾ ರಾಷ್ಟ್ರಗಳ ಮಧ್ಯ ಗಲ್ವಾನ್ ಕಣಿವೆಯಲ್ಲಿ ಗಡಿ ವಿವಾದ ತರಕ್ಕಾಕೇರಿರುವ ಈ ಸಮಯದಲ್ಲಿ ಭಾರತ ಮತ್ತು ಚೀನಾಗಳೆರೆಡರೊಂದಿಗೂ ಅಮೆರಿಕ ಮಾತುಕತೆ ನಡೆಸಿ ಪರಿಸ್ಥಿತಿಯನ್ನು ಶಾಂತಗೊಳಿಸಲು ಪ್ರಯತ್ನಿಸಲಾಗುವದೆಂದು ಆ ದೇಶದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ''ಇದೊಂದು ಅತ್ಯಂತ ಕಠಿಣ ಪರಿಸ್ಥಿತಿಯಾಗಿದ್ದು. ನಾವು ಭಾರತ ಮತ್ತು ಚೀನಾ ರಾಷ್ಟ್ರಗಳೊಂದಿಗೆ ಮಾತನಾಡುತ್ತಿದ್ದೇವೆ. ಆ ದೇಶಗಳು ಅಲ್ಲಿ ದೊಡ್ಡ ಸಮಸ್ಯೆಗೆ ಸಿಲುಕಿಕೊಂಡಿವೆ'' ಎಂದು ಶ್ವೇತಭವನದಲ್ಲಿ ಟ್ರಂಪ್ ಸುದ್ದಿಗಾರರಿಗೆ ಮಾಹಿತಿ ನೀಡಿದರು.

## 22 06 2020 ತ್ರಿಪುರಸರ್ಕಾರದಿಂದಇದೆಜೂನ್25ರಿಂದ‘ಪ್ಲೇಲಿಟಲ್, ಸ್ಟಡಿಲಿಟಲ್’ಯೋಜನೆಆರಂಭ



ಭಾರತದಲ್ಲಿ ಕೋರೋಣ ಸೋಂಕು ಹಬ್ಬುವ ಭೀತಿಯಿಂದ ಬಹುತೇಕ ಎಲ್ಲ ರಾಜ್ಯಗಳು ಶಾಲೆಗಳಿಗೆ ರಜೆಯನ್ನು ಘೋಷಿಸಿವೆ.ಈನಡುವೆತ್ರಿಪುರಾರಾಜ್ಯಸರ್ಕಾರವು2020ರಜೂನ್25ರಿಂದಶಾಲಾ ವಿದ್ಯಾರ್ಥಿಗಳಿಗೆ ಒಂದು ನೂತನ ಯೋಜನೆಯನ್ನು ಆರಂಭಿಸಲು ನಿರ್ಧರಿಸಿದೆ. ಈ ಯೋಜನೆಗೆ ‘ಏಕ್ತು ಖೇಲೋ,ಏಕ್ತು ಪಾಧೋ’ (ಕಡಿಮೆ ಆಟವಾಡಿ, ಕಡಿಮೆ ಓದಿ)ಎಂದು ಹೆಸರಿಡಲಾಗಿದೆ.

ಏನೀ ಯೋಜನೆ ? :- ಈ ನೂತನ ಯೋಜನೆಯಡಿ ಪ್ರತಿದಿನ ಬೆಳಿಗ್ಗೆ, ರಾಜ್ಯದ ಶಿಕ್ಷಣ ಇಲಾಖೆಯ ಪ್ರಧಾನ ಕಚೇರಿಯಿಂದ ಕಲಿಕೆಯ ವಿಷಯಗಳನ್ನು ಪ್ರತಿ ಜಿಲ್ಲೆಯ ಶೈಕ್ಷಣಿಕ ಸಂಯೋಜಕರ ಸಾಮಾಜಿಕ ಮಧ್ಯವಾದವಾಟ್ಸ್ಆಪ್ ಮೂಲಕಅಥವಾSMSಮೂಲಕಹಂಚಲಾಗುವದು.ನಂತರಜಿಲ್ಲೆಯಸಂಯೋಜಕರು ಆ ನಿರ್ದಿಷ್ಟ ಜಿಲ್ಲೆಯಲ್ಲಿರುವ ಶಾಲೆಗಳ ಮುಖ್ಯೋಪಾಧ್ಯಾಯರೊಂದಿಗೆ ಹಂಚಿಕೊಳ್ಳುತ್ತಾರೆ. ಇನ್ನು ಶಾಲೆಯ ಮುಖ್ಯೋಪಾಧ್ಯಾಯರು ಶಿಕ್ಷಕರೊಂದಿಗೆ ಹಾಗು ಅಂತಿಮವಾಗಿ ಶಿಕ್ಷಕರು ಶಾಲೆಯ ನಿರ್ದಿಷ್ಟ ಸಂಖ್ಯೆಯ ವಿದ್ಯಾರ್ಥಿಗಳಿಗೆ ವಿಷಯವನ್ನು ಹಂಚಿಕೊಳ್ಳುತ್ತಾರೆ.

* ಈ ಯೋಜನೆಯಿಂದ ತ್ರಿಪುರ ರಾಜ್ಯದಾದ್ಯಂತ 4,398 ಸರ್ಕಾರಿ ಅನುದಾನಿತಮತ್ತು335ಖಾಸಗಿ ಶಾಲೆಗಳವಿದ್ಯಾರ್ಥಿಗಳಿಗೆಪ್ರಯೋಜನವಾಗಲಿದೆ.

## 22 06 2020 ದಾಖಲೆಗಳ ಪ್ರಕಾರ ಇತಿಹಾಸದಲ್ಲೇ ಮೊದಲ ಬಾರಿಗೆ ಕಾಮಾಖ್ಯದೇವಸ್ಥಾನದಲ್ಲಿಅಂಬುಬಾಚಿಮೇಳರದ್ದು



ಅಸ್ಸಾಂ ರಾಜ್ಯದ ಗುವಾಹಟಿಯಲ್ಲಿರುವ ಶತಮಾನಗಳಷ್ಟು ಹಳೆಯದಾದ ಐತಿಹಾಸಿಕ ಕಾಮಾಖ್ಯ ದೇವಸ್ಥಾನದಲ್ಲಿ, ದಾಖಲೆಗಳ ಪ್ರಕಾರ 1565 ರಿಂದ ಆರು ಶತಮಾನಗಳ ಇತಿಹಾದಲ್ಲೇ ಮೊದಲ ಬಾರಿಗೆ 5 ದಿನಗಳ ಅಂಬುಬಾಚಿ ಮೇಳವನ್ನು ಕೋರೋಣ ವೈರಸ್ ಹರಡುವಿಕೆ ಭೀತಿಯಿಂದ ಆಯೋಜಿಸಲಾಗುವುದಿಲ್ಲ.

* ಪ್ರತಿವರ್ಷ ಜಾತ್ರೆಯು ದೇಶಾದ್ಯಂತದ ಲಕ್ಷಾಂತರ ಯಾತ್ರಾರ್ಥಿಗಳು, ಪ್ರವಾಸಿಗರು, ಸಾಧುಗಳು ಮತ್ತು ಇತರರು ಭಾಗವಹಿಸುತ್ತಾರೆ ಅಸ್ಸಾಂ ರಾಜ್ಯ ಪ್ರವಾಸೋದ್ಯಮದ ಪ್ರಕಾರ, ಕನಿಷ್ಠ 5 ಲಕ್ಷ ಭಕ್ತರು ಮೇಳದಲ್ಲಿ ಪಾಲ್ಗೊಳ್ಳುತ್ತಾರೆ.

ಕಾಮಾಖ್ಯ ದೇವಸ್ಥಾನ :

* ನಿಲಾಚಲ್ ಬೆಟ್ಟದಲ್ಲಿರುವ ಹಿಂದೂ ದೇವಾಲಯವನ್ನು ಇತಿಹಾಸದ ಪ್ರಕಾರ ರಾಜ ನರಕಸುರನು ನಿರ್ಮಿಸಿದನು. 1565 ರಿಂದ ಲಭ್ಯವಿರುವ ಅಧಿಕೃತ ದಾಖಲೆಗಳ ಪ್ರಕಾರ, ಈ ದೇವಾಲಯವನ್ನುಕೋಚ್‌ರಾಜ ನಾರನಾರಾಯಣ್‌ಅವರುಪುನರ್ನಿರ್ಮಿಸಿದರು.

*ಕಾಮಖ್ಯಾ51ಶಕ್ತಿಪೀಠಗಳಲ್ಲಿ ಒಂದಾಗಿದೆ (51 ಶಕ್ತಿ ಪೀಠಗಳಲ್ಲಿ ಪ್ರತಿಯೊಂದೂ ಶಿವನ ಸಹಚರ ಸತಿಯ ದೇಹದ ಭಾಗವನ್ನು ಪ್ರತಿನಿಧಿಸುತ್ತದೆ).

### 23 06 2020 WWE ನ ದಂತಕತೆಯಾಗಿರುವ ಅಂಡರ್‌ಟೇಕರ್‌ರವರಿಂದ ನಿವೃತ್ತಿ ಘೋಷಣೆ



ಡಬ್ಲ್ಯುಡಬ್ಲ್ಯುಇ ಕುಸ್ತಿ ಕ್ಷೇತ್ರದ ಸೂಪರ್ ಸ್ಟಾರ್ 'ದಿ ಅಂಡರ್‌ಟೇಕರ್' ಅವರು ತಮ್ಮ ವೃತ್ತಿ ಬದುಕಿಗೆ ವಿದಾಯ ಘೋಷಿಸಿರುವುದಾಗಿ ತಮ್ಮ ಟ್ವಿಟ್ಟರ್ ಖಾತೆ ಮೂಲಕ ಹಂಚಿಕೊಂಡಿದ್ದಾರೆ.
* ಡಬ್ಲ್ಯುಡಬ್ಲ್ಯುಇ 'ದಿ ಲಾಸ್ಟ್ ರೈಡ್' ಎಂಬ ಆವೃತ್ತಿಯಲ್ಲಿ ಅಂಡರ್ ಟೇಕರ್ ಅವರು ನಿವೃತ್ತಿ ಪಡೆಯುತ್ತಿರುವುದಾಗಿ ಈ ಮೊದಲು ಘೋಷಿಸಿದ್ದರು.
* ಅಂಡರ್ ಟೇಕರ್ ಅವರ ಕೊನೆಯ ಪಂದ್ಯವು 'ರೆಸಲ್‌ಮೇನಿಯಾ 36'ರಲ್ಲಿ ಎಜೆ ಸ್ಟೈಲ್ಸ್ ವಿರುದ್ಧ ನಡೆಯಿತು.

### 23 06 2020 ಐತಿಹಾಸಿಕ ಜಗನ್ನಾಥ ರಥಯಾತ್ರೆಗೆ ಸುಪ್ರೀಂ ಕೋರ್ಟ್ ಅನುಮತಿ



ನವದೆಹಲಿ : ಒಡಿಶಾದ ಐತಿಹಾಸಿಕ ಪುರಿ ಜಗನ್ನಾಥ ರಥ ಯಾತ್ರೆಗೆ ಸುಪ್ರೀಂ ಕೋರ್ಟ್ ಅನುಮತಿ ನೀಡಿ ತೀರ್ಪು ಪ್ರಕಟಿಸಿದ್ದು, ಕಳೆದ ಜೂನ್ 18ರಂದು ಇದೆ ಸುಪ್ರೀಂ ಕೋರ್ಟ್ ರಥಯಾತ್ರೆಗೆ ನೀಡಿದ್ದ ತಡೆಯನ್ನು ಕೆಲ ನಿರ್ಬಂಧಗಳನ್ನು ವಿಧಿಸುವ ಮೂಲಕ ಆಚರಿಸಲು ಅನುಮತಿ ನೀಡಿದೆ.
* ರಥ ಯಾತ್ರೆಯನ್ನು ಆಯೋಜಿಸುವ ನಿರ್ಧಾರವನ್ನು ಒಡಿಶಾ ರಾಜ್ಯ ಸರ್ಕಾರದ ವಿವೇಚನೆಗೆ ಒಳಪಟ್ಟಿದ್ದು, ಪುರಿಯ ಜಗನ್ನಾಥ ಮಂದಿರದಲ್ಲಿ ಮಾತ್ರವೇ ರಥ ಯಾತ್ರೆ ನಡೆಸಲು ಅವಕಾಶ. ಬೇರೆಲ್ಲೂ ರಥಯಾತ್ರೆ ಅನುಮತಿಯಿಲ್ಲ ಎಂದು ಕೋರ್ಟ್ ಆದೇಶಿಸಿದೆ.
* ಪುರಿಯಲ್ಲಿ ಎರಡು ತೇರುಗಳಿದ್ದು ಎರಡು ರಥ ಯಾತ್ರೆಗಳು ನಡೆಯುತ್ತವೆ. ಪ್ರತಿಯೊಂದು ರಥ ಯಾತ್ರೆಯಲ್ಲಿ ಭಕ್ತರ ಸಂಖ್ಯೆ 500 ಮೀರುವಂತಿಲ್ಲ ಎಂದು ಕೋರ್ಟ್ ತಿಳಿಸಿದೆ.
* ಪುರಿ ಮಂದಿರದಲ್ಲಿ ಎರಡು ರಥ ಯಾತ್ರೆ ನಡೆಯಲಿದ್ದು, ಇವುಗಳ ಮಧ್ಯೆ ಕನಿಷ್ಠ 1 ಗಂಟೆ ಅಂತರ ಇರಬೇಕು.
* ರಥ ಎಳೆಯಲು ಬರುವ ಪ್ರತಿಯೊಬ್ಬ ಭಕ್ತರಿಗೂ ಕೊರೋನಾ ಪರೀಕ್ಷೆ ನಡೆಸಿಯೇ ಬಿಡಬೇಕು. ಸಾಮಾಜಿಕ ಅಂತರ ಪಾಲನೆಯಾಗುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಸರ್ವೋಚ್ಚ ನ್ಯಾಯಾಲಯ ತನ್ನ ತೀರ್ಪಿನಲ್ಲಿ ಹೇಳಿದೆ.

### 23 06 2020 : 150 ಬಿಲಿಯನ್ ಡಾಲರ್ ಮಾರುಕಟ್ಟೆ ಮೌಲ್ಯ ಹೆಚ್ಚಿಸಿಕೊಂಡ ಭಾರತದ ಮೊದಲ ಕಂಪನಿ = ರಿಲಯನ್ಸ್ ಇಂಡಸ್ಟ್ರೀಸ್




ಭಾರತದ ರಿಲಾಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಸಂಸ್ಥೆಯ ಮಾರುಕಟ್ಟೆ ಮೌಲ್ಯವು ದಿನಾಂಕ 22 ಜೂನ್ 2020 ರಂದು 150 ಬಿಲಿಯನ್ ಡಾಲರ್ ತಲುಪುವುದರೊಂದಿಗೆ ಭಾರತದ ಮೊದಲ ಕಂಪನಿ ಈ ಸಾಧನೆ ಮಾಡಿದ ಹೆಗ್ಗಳಿಕೆಗೆ ಪಾತ್ರವಾಗಿದೆ. ಸೋಮವಾರ(22 ಜೂನ್) ಬೆಳಗ್ಗೆ ಷೇರು ವಹಿವಾಟಿನಲ್ಲಿ ಕಂಪನಿಯ ಮಾರುಕಟ್ಟೆ ಮೌಲ್ಯ 28,248.97 ಕೋಟಿಯಿಂದ 11,43,667 ಕೋಟಿ ರೂಪಾಯಿಗೆ (150 ಬಿಲಿಯನ್ ಡಾಲರ್) ತಲುಪುವ ಮೂಲಕ ಈ ಸಾಧನೆ ಮಡಿದ ಮೊದಲ ಭಾರತದ ಕಂಪನಿಯಾಗಿ ರಿಲಯನ್ಸ್ ಹೆಗ್ಗಳಿಕೆಗೆ ಪಾತ್ರವಾಯಿತು. ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಅಧ್ಯಕ್ಷರಾದ ಮುಕೇಶ್ ಅಂಬಾನಿಯವರು ತಮ್ಮ ತೈಲ ಉದ್ಯಮದಿಂದ ದೂರಸಂಪರ್ಕ ಉದ್ಯಮದ ನಿವ್ವಳ ಸಾಲ ಮುಕ್ತವಾಗಿದೆ ಎಂದು ಘೋಷಿಸಿದ ನಂತರ ಕಂಪನಿಯ ಮಾರುಕಟ್ಟೆ ಮೌಲ್ಯ 11 ಲಕ್ಷ ಕೋಟಿ ರೂ. ದಾಟಿದೆ.
* ಈ ಮೂಲಕ ವಿಶ್ವದ 10 ಅಗ್ರಗಣ್ಯ ಶ್ರೀಮಂತರ ಪಟ್ಟಿಗೆ ಮುಕೇಶ ಸೇರ್ಪಡೆಗೊಂಡಿದ್ದು, ಅವರಿಗ 9 ನೇ ಸ್ಥಾನದಲ್ಲಿರುವದಾಗಿ ಬ್ಲೂಮ್‌ಗ್ ಬಿಲೇನಿಯರ್ ಸೂಚ್ಯಂಕ ವರದಿ ಮಾಡಿದೆ.

### 23 06 2020 ಜೂನ್ 23 : ಆನ್‌ಲೈನ್ ಬ್ಯಾಂಕಿಂಗ್ ಸೇವೆಗಾಗಿ ಭಾರತೀಯ ಅಂಚೆ ಇಲಾಖೆಯಿಂದ ವಿಶೇಷ ಅಭಿಯಾನ

ಭಾರತೀಯ ಅಂಚೆ ಇಲಾಖೆಯಿಂದ ಡಿಜಿಟಲ್ ಮತ್ತು ಆನ್‌ಲೈನ್ ಬ್ಯಾಂಕಿಂಗ್ ಸೇವೆಯನ್ನು ಈಗಾಗಲೇ ನೀಡಲಾಗುತ್ತಿದ್ದು, ಈ ಕುರಿತು ಜೂನ್ 23ರಂದು ಅಂಚೆ ಇಲಾಖೆಯು ವಿಶೇಷ ಅಭಿಯಾನ ಆಯೋಜಿಸಿದೆ.
* ಅಂಚೆ ಕಚೇರಿಗಳಲ್ಲಿ, ಪೋಸ್ಟ್ ಮ್ಯಾನ್ ಮೂಲಕ IPPB (ಇಂಡಿಯನ್ ಪೋಸ್ಟ್ ಪೇಮೆಂಟ್ ಬ್ಯಾಂಕ್) ಖಾತೆಗಳನ್ನು ತೆರೆಯಬಹುದು ಹಾಗೂ AEPS ಮೂಲಕ ಇತರ ಬ್ಯಾಂಕ್‌ನಲ್ಲಿರುವ ಹಣವನ್ನು ಯಾವುದೇ ಶುಲ್ಕವಿಲ್ಲದೆ ಪಡೆಯಬಹುದಾಗಿದೆ. ಇದಕ್ಕಾಗಿ ಆಧಾರ್ ಸಂಖ್ಯೆ ಮತ್ತು ಮೊಬೈಲ್ ಹೊಂದಿದ್ದರೆ ಸಾಕು.
* ಐಪಿಪಿಬಿ ಖಾತೆಗಳ ಮೂಲಕ ಅಂಚೆ ಕಚೇರಿಯ ಸುಕನ್ಯಾ ಸಮೃದ್ಧಿ, ಪಿಪಿಎಫ್, RD ಖಾತೆಗಳಿಗೆ ಐಪಿಪಿಬಿ ಮೊಬೈಲ್ ಬ್ಯಾಂಕಿಂಗ್ ಆಪ್ ಮೂಲಕ ಆನ್‌ಲೈನ್‌ನಲ್ಲಿ ಪಾವತಿಸಬಹುದಾಗಿದೆ.

# Current affairs of June 2020 from KPSC Vaani

### 23 06 2020 ‘SEBI’2018-19ನೇ ಹಣಕಾಸು ವರ್ಷದಲ್ಲಿ ಕೋಟಿ ಆದಾಯ



ನವದೆಹಲಿ: ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (SEBI)ಯು 2018 19ನೇ ಹಣಕಾಸು ವರ್ಷದಲ್ಲಿ ₹963ಕೋಟಿಆದಾಯಗಳಿಸಿರುವದಾಗಿವರದಿಯಾಗಿದೆ.
*2017 18ರಹಣಕಾಸು ವರ್ಷದಲ್ಲಿ ₹855ಕೋಟಿವರಮಾನಗಳಿಸಿದ್ದ SEBIಯು 2018 19ನೇವರ್ಷಕ್ಕೆ ಹೋಲಿಸಿದರೆ ಶೇ 13ರಷ್ಟು ಹೆಚ್ಚು ಆದಾಯಗಳಿಸಿದೆ.

### 23 06 2020 ಬಂಡವಾಳ ಹೂಡಿಕೆಗಾಗಿ ಜಪಾನ್ ರಾಯಭಾರಿ ಜತೆ ಡಿಸಿಎಂ ಡಾ.ಅಶ್ವತ್ಥ್ ನಾರಾಯಣ್ ಮಾತುಕತೆ




ಬೆಂಗಳೂರು : ಕೋವಿಡ್ 19 ಸೋಂಕಿನ ನಂತರ, ರಾಜ್ಯದ ಆರ್ಥಿಕ ಪುನಶ್ಚೇತನಕ್ಕಾಗಿ ಬಂಡವಾಳವನ್ನು ಆಕರ್ಷಿಸುವ ಸಲುವಾಗಿ ಜಪಾನ ರಾಷ್ಟ್ರದಿಂದ ಮತ್ತಷ್ಟು ಹೂಡಿಕೆಯನ್ನು ಪಡೆಯುವ ನಿಟ್ಟಿನಲ್ಲಿ ರಾಜ್ಯದ ಉಪ ಮುಖ್ಯಮಂತ್ರಿಯಾದ ಡಾ. ಅಶ್ವತ್ಥನಾರಾಯಣ ಅವರು ದಿಲ್ಲಿಯ ಜಪಾನ್ ರಾಯಭಾರಿ ಕಚೇರಿಯ ಹಿರಿಯ ಅಧಿಕಾರಿಗಳ ಜತೆ ಮಾತುಕತೆ ನಡೆಸಿದರು.
* ವಾಣಿಜ್ಯ, ಕೈಗಾರಿಕೆ ಕ್ಷೇತ್ರಗಳಲ್ಲಿ ಕರ್ನಾಟಕ ಮತ್ತು ಜಪಾನ್ ರಾಷ್ಟ್ರದ ಮಧ್ಯ ಉತ್ತಮ ಬಾಂಧವ್ಯವಿದ್ದು ಅದನ್ನು ಮುಂದುವರೆಸಿಕೊಂಡು ಹೋಗುವುದು ರಾಜ್ಯ ಸರಕಾರದ ಇಚ್ಛೆಯಾಗಿದೆ ಎಂದು ಡಿಸಿಎಂ, ಜಪಾನ್ ಪ್ರತಿನಿಧಿಗಳಿಗೆ ಇದೆ ಸಮಯದಲ್ಲಿ ತಿಳಿಸಿದರು.

# Current affairs of June 2020 from KPSC Vaani

## ಸಾಹಿತಿ ಹಾಗೂ ಭಾಷಾವಿಜ್ಞಾನಿ ಡಾ.ಬಿ.ಬಿ.ರಾಜಪುರೋಹಿತ ಇನ್ನಿಲ್ಲ



ಮೈಸೂರು: ಸಾಹಿತಿ ಹಾಗೂ ಭಾಷಾವಿಜ್ಞಾನಿ, ಡಾ.ಬಿ.ಬಿ.ರಾಜಪುರೋಹಿತ ಅವರು ತಮ್ಮ 85 ನೇ ವಯಸ್ಸಿನಲ್ಲಿ ಮೈಸೂರು ನಗರದಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರು. * ಭೀಮಾಜಿ ಬಂಡೋ ರಾಜಪುರೋಹಿತ ಮತ್ತು ಸಾವಿತ್ರಿಬಾಯಿ ಅವರ ಪುತ್ರರಾದ ಇವರು, ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿ 1935ರ ಮೇ 20ರಂದು ಜನಿಸಿದರು.

* ಕೇರಳ ವಿಶ್ವವಿದ್ಯಾಲಯದಲ್ಲಿ ಭಾಷಾಶಾಸ್ತ್ರ ಉಪನ್ಯಾಸಕರಾಗಿ, ಭಾರತೀಯ ಭಾಷಾ ಸಂಸ್ಥಾನದಲ್ಲಿ ಉಪನಿರ್ದೇಶಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು.
* ಜಪಾನಿನ ಟೋಕಿಯೊ ಯೂನಿವರ್ಸಿಟಿ ಆಫ್ ಫಾರಿನ್ ಸ್ಟಡೀಸ್‌ನಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.
* ಸ್ಥಳನಾಮಗಳು ಮತ್ತು ಭಾಷಾವಿಜ್ಞಾನ ಕುರಿತು ಇಂಗ್ಲಿಷ್‌ನಲ್ಲಿ 10 ಕೃತಿಗಳನ್ನು, ವಚನ ಸಾಹಿತ್ಯ ಕುರಿತು ಕನ್ನಡದಲ್ಲಿ 4 ಹಾಗೂ ಇತರ 10 ಸಾಹಿತ್ಯಕ ಕೃತಿಗಳನ್ನು ರಚಿಸಿದ್ದಾರೆ. 250ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ.
* ಡಾ.ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನಿಂದ ನೀಡಲಾಗುವ 2012ನೇ ಸಾಲಿನ ಅಂಬಿಕಾತನಯ ದತ್ತ ಪ್ರಶಸ್ತಿ ಹಾಗೂ ಬೇಂದ್ರೆ ಸಂಶೋಧನಾ ಸಂಸ್ಥೆಯ 'ಬೇಂದ್ರೆ ಭಾಷಾಶಾಸ್ತ್ರ ರತ್ನ' ಪ್ರಶಸ್ತಿಗೆ ಇವರು ಭಾಜನರಾಗಿದ್ದರು.

## 24 06 2020 ಪತಂಜಲಿಯಿಂದ ಕೋವಿಡ್ 19ಗೆ ಆಯುರ್ವೇದ ಔಷಧ = ವಿವರ ಕೇಳಿದ ಆಯುಷ್ ಸಚಿವಾಲಯ



ನವದೆಹಲಿ: ಯೋಗಗುರು ಬಾಬಾ ರಾಮದೇವ ಅವರ ಪತಂಜಲಿ ಬ್ರ್ಯಾಂಡ್ ಮೂಲಕ ಹೊರತಂದಿರುವ 'ಕೋವಿಡ್ 19 ಗುಣಪಡಿಸಲಿದೆ ಎಂದು ಹೇಳಿಕೊಂಡಿರುವ ಔಷಧ ವಿವರಗಳನ್ನು ಆದಷ್ಟು ಬೇಗ ಕೊಡಬೇಕು ಹಾಗೂ ಈ ಔಷಧಿಯ ಪರಿಶೀಲನೆ ಮುಗಿಯುವ ವರೆಗೂ ಈ ಉತ್ಪನ್ನ ಕುರಿತು ಯಾವುದೇ ಜಾಹೀರಾತು ನೀಡಬಾರದು' ಆಯುಷ್ ಸಚಿವಾಲಯ ಪತಂಜಲಿ ಸಂಸ್ಥೆಗೆ ತಿಳಿಸಿದೆ.
* "ಕೊರೊನಿಲ್" ಮತ್ತು "ಸ್ವಸರಿ" ಎಂಬ ಔಷಧ ಬಿಡುಗಡೆ ಮಾಡಿದ್ದ ಪತಂಜಲಿ, ಇದು 7 ದಿನಗಳೊಳಗಾಗಿ ಶೇಕಡಾ 100 ರಷ್ಟು ಕೋವಿಡ್ ಗುಣಪಡಿಸಲಿದೆ ಎಂದು ಹೇಳಿತ್ತು. ಜಗತ್ತಿನಾದ್ಯಂತ ವಿಜ್ಞಾನಿಗಳು ಕೋವಿಡ್ 19ಕ್ಕೆ ಪರಿಣಾಮಕಾರಿ ಔಷಧ ಪತ್ತೆ ಹಚ್ಚಲು ಕಸರತ್ತು ನಡೆಸಿರುವ ಬೆನ್ನಲ್ಲೇ, ಪತಂಜಲಿ ಸಂಸ್ಥೆ ಕೊರೊನಾ ಸೋಂಕಿಗೆ ಚಿಕಿತ್ಸೆ ನೀಡಬಲ್ಲ ಆಯುರ್ವೇದ ಔಷಧಿಯನ್ನು ಅಭಿವೃದ್ಧಿಪಡಿಸಿದ್ದಾಗಿ ತಿಳಿಸಿದೆ.

## 24 06 2020 ಭಾರತ ಚೀನಾ ಕಮಾಂಡರ್ ಮಟ್ಟದ ಮಾತುಕತೆ ಯಶಸ್ವಿ ಸೈನಿಕರ ವಾಪಸ್‌ಗೆ ಒಪ್ಪಿಗೆ



ನವದೆಹಲಿ: ಭಾರತ ಮತ್ತು ಚೀನಾ ರಾಷ್ಟ್ರಗಳ ನಡುವೆ ಉದ್ಭವಿಸಿರುವ ಗಡಿ ಸಮಸ್ಯೆಗೆ ಇತಿಶ್ರೀ ಹಾಡಲು ಉಭಯ ರಾಷ್ಟ್ರಗಳ ಕಮಾಂಡರ್ ಮಟ್ಟದ ಮಾತುಕತೆ ಫಲಪ್ರದವಾಗಿದ್ದು, ಪೂರ್ವ ಲಡಾಖ್‌ನ ಸಂಘರ್ಷದ ಪ್ರದೇಶಗಳಿಂದ ಸೈನಿಕರನ್ನು ಹಿಂದಕ್ಕೆ ಕರೆಸಿಕೊಳ್ಳಲು ಭಾರತ ಮತ್ತು ಚೀನಾ ಒಪ್ಪಿಗೆ ಸೂಚಿಸಿವೆ.
* ಸುಮಾರು ಒಂದೂವರೆ ತಿಂಗಳಿಂದ ಎರಡೂ ದೇಶಗಳ ನಡುವೆ ಬಿಕ್ಕಟ್ಟಿಗೆ ಕಾರಣವಾಗಿರುವ ವಿವಾದಾತ್ಮಕ ಗಡಿ ಪ್ರದೇಶದಲ್ಲಿ ಶಾಂತಿ ನೆಲೆಸುವಂತೆ ಮಾಡಲು ಉಭಯ ರಾಷ್ಟ್ರಗಳು ಸಮ್ಮತಿಸಿವೆ.

## 24 06 2020 ಚಿಕ್ಕಮಗಳೂರು ಜಿಲ್ಲೆಗೆ ರಾಜ್ಯ ಸರ್ಕಾರದಿಂದ ಪ್ರತ್ಯೇಕ ಪ್ರವಾಸೋದ್ಯಮ ನೀತಿ!



ಚಿಕ್ಕಮಗಳೂರು : ರಾಜ್ಯದ ಪ್ರವಾಸೋದ್ಯಮವನ್ನು ಉತ್ತೇಜಿಸುವುದಕ್ಕಾಗಿ 2020 25 ನೇ ಸಾಲಿನ ಕರ್ನಾಟಕ ಪ್ರವಾಸೋದ್ಯಮ ನೀತಿಯನ್ನು ಅಂತಿಮಗೊಳಿಸಲಾಗಿದ್ದು, ಸೂಕ್ಷ್ಮ ಪ್ರದೇಶವಾಗಿರುವ ಹಾಗು ಅತಿ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಚಿಕ್ಕಮಗಳೂರು ಜಿಲ್ಲೆಗೆ ಪ್ರತ್ಯೇಕ ಪ್ರವಾಸೋದ್ಯಮ ನೀತಿಯನ್ನು ಜಾರಿಗೆ ತರಲು ಚಿಂತಿಸಲಾಗಿದೆ. ಸುಮಾರು 12 ಲಕ್ಷ ಜನಸಂಖ್ಯೆ ಹೊಂದಿರುವ ಚಿಕ್ಕಮಗಳೂರು ಜಿಲ್ಲೆಯು ಸರಾಸರಿ ವಾರ್ಷಿಕ 85 ಲಕ್ಷ ಪ್ರವಾಸಿಗರನ್ನು ಹೊಂದಿದೆ. ಈ ಪ್ರಮಾಣದಲ್ಲಿ ಭೇಟಿ ನೀಡುವ ಪ್ರವಾಸಿಗರಿಂದಾಗಿ ರೆಸಾರ್ಟ್ ಮತ್ತು ರಸ್ತೆ ನಿರ್ಮಾಣ, ಸೂಕ್ಷ್ಮ ಪ್ರದೇಶಗಳ ನೀರಿನ ಅತಿಯಾದ ಬಳಕೆಯಿಂದಾಗಿ ಜಿಲ್ಲೆಯ ಪರಿಸರ ಹಾಳಾಗುತ್ತಿದೆ. ಇದೆ ಕಾರಣದಿಂದ ಜಿಲ್ಲೆಗೆ ಪ್ರತ್ಯೇಕ ಪ್ರವಾಸೋದ್ಯಮ ನೀತಿ ಜಾರಿಗೆ ತರುವ ಬಗ್ಗೆ ಸ್ಥಳೀಯರು, ಪರಿಸರವಾದಿಗಳ ಬೇಡಿಕೆಯಾಗಿತ್ತು, ಈ ನಿಟ್ಟಿನಲ್ಲಿ ಸರ್ಕಾರ ಕಾರ್ಯೋನ್ಮುಖವಾಗಿದ್ದು, ಇತ್ತೀಚೆಗಷ್ಟೇ ಪ್ರವಾಸೋದ್ಯಮ ಸಚಿವ ಸಿಟಿ ರವಿ ಸಂಬಂಧಪಟ್ಟವರೊಂದಿಗೆ ಸಭೆ ನಡೆಸಿದ್ದಾರೆ. ಪ್ರತ್ಯೇಕ ಪ್ರವಾಸ ನೀತಿಯ ಬಗ್ಗೆ ಚರ್ಚಿಸಲು ಇನ್ನೂ ಹಲವು ಸಭೆಗಳನ್ನು ಸವೆಸುವ ಸಾಧ್ಯತೆ ಇದೆ.

# Current affairs of June 2020 from KPSC Vaani

## 25 06 2020 ಬಾಹ್ಯಾಕಾಶ ಸಂಶೋಧನೆಯಲ್ಲಿ ಖಾಸಗಿ ಕಂಪನಿಗಳು ಭಾಗವಹಿಸಲು ಕೇಂದ್ರ ಅನುಮತಿ




ನವದೆಹಲಿ: ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ನೂತನ ಚಟುವಟಿಕೆಗಳಲ್ಲಿ ಭಾಗಿಯಾಗಲು ಖಾಸಗಿ ಕಂಪನಿಗಳಿಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಈ ಅನುಮತಿಯಿಂದಾಗಿ ಈ ಕ್ಷೇತ್ರದ ತ್ವರಿತ ಬೆಳವಣಿಗೆಗೆ ಕಾಣಬಹುದಾಗಿದ್ದು, ಭಾರತದ ಕಂಪನಿಗಳು ಜಾಗತಿಕ ಮಟ್ಟದಲ್ಲಿ ಮಹತ್ವ ಪಡೆಯಲಿವೆ. ಅಲ್ಲದೆ ಈ ನಿರ್ಧಾರದಿಂದಾಗಿ ಭಾರಿ ಪ್ರಮಾಣದಲ್ಲಿ ಉದ್ಯೋಗಗಳೂ ಸೃಷ್ಟಿಯಾಗಲಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಮಾಹಿತಿ ನೀಡಿದ್ದಾರೆ.
*IN SPACeಎಂಬ ಭಾರತೀಯ ರಾಷ್ಟ್ರೀಯ ಬಾಹ್ಯಾಕಾಶ ಉತ್ತೇಜನ ಮತ್ತು ಅಧಿಕೃತೀಕರಣ ಕೇಂದ್ರವನ್ನು ಕೇಂದ್ರ ಸರ್ಕಾರ ಆರಂಭಿಸಿದ್ದು, ಈ ಸಂಸ್ಥೆಯು ISRO ದ ಮೂಲಸೌಕರ್ಯಗಳನ್ನು ಖಾಸಗಿ ಕಂಪನಿಗಳಿಗೆ ನ್ಯಾಯಯುತವಾಗಿ ಲಭ್ಯವಿರುವಂತೆ ನೋಡಿಕೊಳ್ಳಲಿದೆ.

## 25 06 2020 ಪಾಕ್ ದೇಶವನ್ನು ಮತ್ತೆ ಬೂದು ಪಟ್ಟಿಯಲ್ಲಿ ಮುಂದುವರೆಸಲು ಎಫ್ ಎಟಿಎಫ್ ನಿರ್ಧಾರ




ನೆರೆಯ ಪಾಕಿಸ್ತಾನ ರಾಷ್ಟ್ರಕ್ಕೆ ಮತ್ತೆ ಜಾಗತಿಕ ಮಟ್ಟದಲ್ಲಿ ಮುಖಭಂಗವಾಗಿದ್ದು, ಭಯೋತ್ಪಾದಕರಿಗೆ ಆರ್ಥಿಕ ನೆರವು ನೀಡುವುದನ್ನು ತಡೆಗಟ್ಟಲು ಇರುವ ಜಾಗತಿಕ ಕಣ್ಗಾವಲು ಸಂಸ್ಥೆ (ಎಫ್ ಎಟಿಎಫ್) ಯು ಮತ್ತೆ ಪಾಕಿಸ್ತಾನವನ್ನು ಗ್ರೇ (ಬೂದು) ಪಟ್ಟಿಯಲ್ಲೇ ಮುಂದುವರೆಸಲು ತೀರ್ಮಾನಿಸಿದೆ. ಇದರಿಂದಾಗಿ ಪಾಕಿಸ್ತಾನದ ಮಟ್ಟಿಗೆ ಜಾಗತಿಕ ಮಟ್ಟದಲ್ಲಿ ತೀವ್ರ ಹಿನ್ನಡೆಯಾಗಿದೆ.
* ಲಷ್ಕರ್ ಎ ತೊಯ್ಬಾ (ಎಲ್ಇಟಿ), ಜೈಶ್ ಎ ಮೊಹಮ್ಮದ್ (ಜೆಇಎಂ) ಸೇರಿದಂತೆ ಹಲವು ಉಗ್ರ ಸಂಘಟನೆಗಳಿಗೆ ಸಿಗುವ ಆರ್ಥಿಕ ಬೆರವನ್ನು ತಡೆಯಲು ಪಾಕಿಸ್ತಾನಕ್ಕೆ ಸಾಧ್ಯವಾಗದ ಕಾರಣ ಈ ದೇಶವನ್ನು ಗ್ರೇ ಪಟ್ಟಿಯಲ್ಲೇ ಉಳಿಸಲಾಗುತ್ತಿದೆ ಎಂದು ಎಫ್ಟಿಎಫ್ ತಿಳಿಸಿದೆ.

# Current affairs of June 2020 from KPSC Vaani

### 25 06 2020 ಅಮೆರಿಕದಲ್ಲಿ ವಿಶ್ವದ ಪ್ರಥಮ ಯೋಗ ವಿಶ್ವವಿದ್ಯಾನಿಲಯ ಆರಂಭ



ನ್ಯೂಯಾರ್ಕ್ : ವಿಶ್ವದ ಪ್ರಥಮ ಯೋಗ ವಿಶ್ವವಿದ್ಯಾನಿಲಯವನ್ನು ಅಮೆರಿಕದ ಲಾಸ್ ಏಂಜಲೀಸ್ ನಗರದಲ್ಲಿ ಆರಂಭಿಸಲಾಗಿದೆ. ಈ ಭಾರತದ ಹೊರಗೆ ಸ್ಥಾಪನೆಯಾದ ಈ ವಿವಿಗೆ ವಿವೇಕಾನಂದ ಯೋಗ ಯೂನಿವರ್ಸಿಟಿ (ವಯು) ಎಂದು ಹೆಸರಿಸಲಾಗಿದೆ. ಇದು ವಿಶ್ವದಲ್ಲಿಯೇ ಮೊದಲ ಯೋಗ ವಿವಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ.

* ಯೋಗಾಸನವು ಒಂದು ಭಾರತೀಯ ಪ್ರಾಚೀನ ವ್ಯಾಯಾಮದ ಪ್ರಾಕಾರವಾಗಿದ್ದು, ಇದರೊಂದಿಗೆ ವೈಜ್ಞಾನಿಕ ವಿಧಾನಗಳ ಮತ್ತು ಅತ್ಯಾಧುನಿಕ ಸಂಶೋಧನೆಗಳ ಮೇಲೆ ಈ ವಿವಿ ಕೇಂದ್ರೀಕರಿಸಲಿದೆ.
* ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನದ ಕುಲಪತಿ ಮತ್ತು ಭಾರತದ ಖ್ಯಾತ ಯೋಗಗುರು ಡಾ.ಎಚ್.ನಾಗೇಂದ್ರ ಈ ವಿವಿಯ ಪ್ರಥಮ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ.

### 25 06 2020 ಕೇರಳದ ಆರೋಗ್ಯ ಸಚಿವೆ ಕೆ.ಕೆ.ಶೈಲಜಾ ಅವರಿಗೆ ವಿಶ್ವಸಂಸ್ಥೆಯಿಂದ ಗೌರವ.




ನವದೆಹಲಿ: ಜಾಗತಿಕವಾಗಿ ವ್ಯಾಪಿಸುತ್ತಿರುವ ಕೋರೋಣ ಸಾಂಕ್ರಾಮಿಕವನ್ನು ಕೇರಳ ರಾಜ್ಯದಲ್ಲಿ ಯಶಸ್ವಿಯಾಗಿ ನಿಯಂತ್ರಣ ಮಾಡಿದ ಕೇರಳ ಆರೋಗ್ಯ ಸಚಿವೆಯಾದ ಕೆ.ಕೆ.ಶೈಲಜಾ ಅವರಿಗೆ ವಿಶ್ವ ಸಂಸ್ಥೆ ಗೌರವ ಸಲ್ಲಿಸಿದೆ. ವಿಶ್ವಸಂಸ್ಥೆಯು ಇದೆ ದಿನಾಂಕ ಜೂನ್ 23 ರಂದು ಸಾರ್ವಜನಿಕ ಸೇವಾ ದಿನವನ್ನು ಆಚರಿಸಿದ್ದು, ಈ ಆಚರಣೆಯಲ್ಲಿ ಭಾಗವಹಿಸಿ ಅದರಲ್ಲಿ ಮಾತನಾಡಲು ಭಾರತದಿಂದ ಕೆ.ಕೆ.ಶೈಲಜಾ ಅವರಿಗೆ ಆಹ್ವಾನ ನೀಡಲಾಗಿತ್ತು.

* ಭಾರತದಲ್ಲಿ ಮೊದಲ ಕೊವಿಡ್ ಪ್ರಕರಣ ಪತ್ತೆಯಾಗಿದ್ದು ಕೇರಳ ರಾಜ್ಯದಲ್ಲಿಯೇ ಆದರೂ ಅರೋಗ್ಯ ಸಚಿವೆಯಾದ ಕೆ.ಕೆ.ಶೈಲಜಾ ಅವರ ಮಾರ್ಗದರ್ಶನದಲ್ಲಿ, ಅದರ ನಿಯಂತ್ರಣದಲ್ಲಿ ಕೇರಳ ರಾಜ್ಯವು ಭಾರತದಲ್ಲಿಯೇ ಮಾದರಿಯಾಗಿದೆ.
* ಇದನ್ನು ಗುರುತಿಸಿದ ವಿಶ್ವ ಸಂಸ್ಥೆ ಶೈಲಜಾ ಅವರನ್ನು ಸಾರ್ವಜನಿಕ ಸೇವಾ ದಿನಕ್ಕೆ ಸ್ಪೀಕರ್ ಆಗಿ ಆಹ್ವಾನಿಸಿ ಅವರಿಗೆ ಗೌರವ ನೀಡಿದೆ.

# Current affairs of June 2020 from KPSC Vaani

## 25 06 2020 ಭಾರತದ ಮೇಲೆ 40 ಸಾವಿರಕ್ಕೂ ಹೆಚ್ಚು ಬಾರಿ ಚೀನೀಯರ ಸೈಬರ್ ದಾಳಿ




ಮುಂಬೈ : ಇತ್ತೀಚಿಗೆ ಮಹಾರಾಷ್ಟ್ರದ ಸೈಬರ್ ವಿಭಾಗದ ಪೊಲೀಸರು ಚೀನಿಯರು ನಡೆಸಿದ ಸೈಬರ್ ದಾಳಿ ಕುರಿತು ಮಾಹಿತಿ ಬಹಿರಂಗಪಡಿಸಿದ್ದು, ಚೀನಾದ ಸಿಚುವಾನ್ ಪ್ರಾಂತ್ಯದ ಚೆಂಗ್ದು ಎಂಬ ಪ್ರದೇಶದಿಂದ ಭಾರತದ ಮೇಲೆ ಸುಮಾರು 40,000 ಕ್ಕೂ ಅಧಿಕ ಬಾರಿ ಚೀನಿಯರು ಸೈಬರ್ ದಾಳಿ ನಡೆಸಿರುವದಾಗಿ ತಿಳಿಸಿದ್ದಾರೆ.
* ಚೀನಿಯರು ಮುಖ್ಯವಾಗಿ ಮೂಲಸೌಕರ್ಯ, ಮಾಹಿತಿ ತಂತ್ರಜ್ಞಾನ ಮತ್ತು ಬ್ಯಾಂಕಿಂಗ್ ಕ್ಷೇತ್ರಗಳನ್ನು ಗುರಿಯಾಗಿರಿಸಿಕೊಂಡು ದಾಳಿ ನಡೆಸಿರುವುದು ಮ್ಹಾರ್ಸ್ಟ್ರ ಪೊಲೀಸರು ತಿಳಿಸಿದ್ದಾರೆ.

## 26 06 2020 ಜೂನ್ 25 ರಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯ ಮುಖ್ಯಾಂಶಗಳು =



ಬೆಂಗಳೂರು : ರಾಜ್ಯದ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಮಹತ್ವದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಹಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದ್ದು, ಅವುಗಳ ವಿವಿರ ಈ ಕೆಳಗಿನಂತಿದೆ
* ಕೈಗಾರಿಕಾ ಸೌಲಭ್ಯ ತಿದ್ದುಪಡಿ ಕಾಯ್ದೆಗೆ ಅನುಮೋದನೆ
* ಎಲೆಕ್ಟ್ರಿಕಲ್ ವೆಹಿಕಲ್ ಪ್ರೊಡಕ್ಷನ್ ಗೆ ತೆರಿಗೆ ವಿನಾಯಿತಿ
* ವಿವಿಧ ಹಂತದಲ್ಲಿರುವ 9.74 ಲಕ್ಷ ವಸತಿ ಕಾಮಗಾರಿಗಳಿಗೆ 10,194 ಕೋಟಿ ರೂ ಬಿಡುಗಡೆ
* ಪದ್ಮ ಶ್ರೀ ಪ್ರಶಸ್ತಿ ನೀಡಲು ಕ್ಯಾಬಿನೆಟ್ ಸಬ್‌ಕಮಿಟಿ,ಸಿಎಸ್‌ನೇತೃತ್ವದಲ್ಲಿ ಸಬ್‌ಕಮಿಟಿರಚನೆ
* ಜೀವರಕ್ಷಕಸಾಧನಗಳ(Advancelife support) ಒಳಗೊಂಡ ಆಯಂಬುಲೆನ್ಸ್ 120 ಗಳನ್ನು 32.04 ಕೋಟಿ ರೂ ಖರೀದಿಗೆ ಅನುಮೋದನೆ
* ಸಚಿವರು,ಶಾಸಕರು, ಪರಿಷತ್ ಸದಸ್ಯರ ಸಂಬಳದ 30% ಕಡಿತಗೊಳಿಸಲು ಕಾಯ್ದೆಗೆ ತಿದ್ದುಪಡಿ

# Current affairs of June 2020 from KPSC Vaani

**26 06 2020 ಭಾರತ ಮೊದಲ ಕ್ರಿಕೆಟ್ ವಿಶ್ವ ಕಪ್ ವಿಜಯಕ್ಕೆ 37 ವರ್ಷದ ಸಂಭ್ರಮ**



ಭಾರತ ಕ್ರಿಕೆಟ್ ಇತಿಹಾಸದಲ್ಲಿ ದಿನಾಂಕ 25 ಜೂನ್ ಐತಿಹಾಸಿಕ ದಿನವಾಗಿದೆ. ಇದೆ ದಿನಾಂಕದಂದು 37 ವರ್ಷಗಳ ಹಿಂದೆ ಭಾರತ ಕ್ರಿಕೆಟ್ ತಂಡ ನಾಯಕ ಕಪಿಲ್ ದೇವ್ ಅವರ ಸಾರಥ್ಯದಲ್ಲಿ ತನ್ನ ಚೊಚ್ಚಲ ಏಕದಿನ ವಿಶ್ವಕಪ್ ಗೆದ್ದು ಬೀಗಿತ್ತು.
* ಲಾರ್ಡ್ಸ್ ಕ್ರಿಕೆಟ್ ಮೈದಾನದಲ್ಲಿ 1983ರ ಜೂನ್ 25ರಂದು ಮೂರನೇ ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡವನ್ನು ಭಾರತವು 43 ರನ್‌ಗಳಿಂದ ಸೋಲಿಸಿ ಟ್ರೋಫಿಯನ್ನು ಗೆದ್ದುಕೊಂಡಿತ್ತು.

**26 06 2020 ರಷ್ಯಾದ ವಿಕ್ಟರಿ ಪರೇಡ್‌ನಲ್ಲಿ ಭಾರತೀಯ ಯೋಧರ ಬಾಗಿ**



ಮಾಸ್ಕೋ:2ನೇ ಮಹಾಯುದ್ಧದಲ್ಲಿ ರಷ್ಯಾ ಹಾಗೂ ಮಿತ್ರರಾಷ್ಟ್ರಗಳು ವಿಜಯ ಸಾಧಿಸಿದ ಹಿನ್ನಲೆ ರಷ್ಯಾ ಆಯೋಜಿಸಿದ್ದ 75ನೇ ವಾರ್ಷಿಕ ಸಂಭ್ರಮದಲ್ಲಿ ಭಾರತೀಯ ಮೂರೂ ಸಶಸ್ತ್ರ ಪಡೆಗಳು ಪಾಲ್ಗೊಂಡಿದ್ದವು.
* ವಿಜಯ ದಿನದ ಪರೇಡ್‌ನಲ್ಲಿ ಭಾರತೀಯ ಮೂರೂ ಸೇನಾ ವಿಭಾಗದಿಂದ ಸುಮಾರು 75 ವೀರಯೋಧರ ಶಿಸ್ತುಬದ್ಧ ಪಥಸಂಚಲನ ಆಕರ್ಷಕವಾಗಿತ್ತು.
* ಮಾಸ್ಕೋದ ರೆಡ್ ಸ್ಕ್ವೇರ್‌ನಲ್ಲಿ ನಡೆದ ವಿಕ್ಟರಿ ಡೇ ಪರೇಡ್‌ಗೆ ಭಾರತದಿಂದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾಗವಹಿಸಿದ್ದರು.
* ಕೊರೊನಾ ಸೋಂಕಿನ ಭೀತಿಯಿಂದ ಈ ವರ್ಷ ವಿಕ್ಟರಿ ಪರೇಡ್ ನ್ನು ತಡವಾಗಿ ಆಯೋಜಿಸಲ್ಪಟ್ಟಿದ್ದು, ಈ ಪೆರೇಡನಲ್ಲಿ ರಷ್ಯಾದ 13,000 ಸೈನಿಕರು ಭಾಗಿಯಾಗಿದ್ದರು.


KPSC FDA/SDA ಹುದ್ದೆಗಳ
ತಯಾರಿಗಾಗಿ ಉತ್ತಮ ಪುಸ್ತಕಗಳನ್ನು
ಈಗಲೇ ಖರೀದಿಸಿ
www.kpscvaani.com/books
* ಪುಸ್ತಕಗಳ ಮೇಲೆ 20%ವರೆಗೂ ರಿಯಾಯಿತಿ
* ಎಲ್ಲ ರೀತಿಯ ಸ್ಪರ್ಧಾತ್ಮಕ ಪುಸ್ತಕಗಳು
* ಪರಿಷ್ಕೃತ ಆವೃತ್ತಿಗಳಲ್ಲಿ ಲಭ್ಯ
Mob: 8660255805

# Current affairs of June 2020 from KPSC Vaani

### 26 06 2020 ಗಗನಯಾನ,ಚಂದ್ರಯಾನ ಸೇರಿ ವಿವಿಧ 10 ಬಾಹ್ಯಾಕಾಶ ಯೋಜನೆಗಳಿಗೆ ತಡೆ ನೀಡಿದ ISRO



ನವದೆಹಲಿ : ಕೊರೊನಾವೈರಸ್ ಭೀತಿಯಿಂದ ದೇಶದಲ್ಲಿ ವಿಧಿಸಿರುವ ಲಾಕ್‌ಡೌನ್‌ನಿಂದಾಗಿ ಚಂದ್ರಯಾನ, ಗಗನಯಾನ ಸೇರಿದಂತೆ 10 ವಿವಿಧ ಬಾಹ್ಯಾಕಾಶ ಯೋಜನೆಗಳಿಗೆ ISRO ದಿಂದ ತಡೆನೀಡಲಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಮುಖ್ಯಸ್ಥ ಕೆ ಶಿವನ್ ಮಾಹಿತಿ ನೀಡಿದ್ದಾರೆ.

* ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಮಾನವಸಹಿತ ಗಗನಯಾನ ಸೇರಿ ಒಟ್ಟು 10 ಬಾಹ್ಯಾಕಾಶ ಯೋಜನೆಗಳನ್ನು ರೂಪಿಸಿತ್ತು, ಆದರೆ ಕೋವಿಡ್ 19 ಲಾಕ್‌ಡೌನ್‌ನಿಂದಾಗಿ ಎಲ್ಲಾ ಯೋಜನಗಳು ತಡವಾಗಲಿವೆ. ಇದೆ ಕಾರಣದಿಂದಾಗಿ ಈ ವರ್ಷದ ಎಲ್ಲಾ ಯೋಜನೆಗಳನ್ನು ಮುಂದಿನ ವರ್ಷಕ್ಕೆ ಮುಂದೂಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ISRO ಮುಖ್ಯಸ್ಥರು ತಿಳಿಸಿದರು.

### 26 06 2020 ಪಂಜಾಬ್‌ನ ಪ್ರಥಮ ಮಹಿಳಾ ಮುಖ್ಯ ಕಾರ್ಯದರ್ಶಿಯಾಗಿ ವಿನಿ ಮಹಾಜನ್ ಆಯ್ಕೆ



ಪಂಜಾಬ್‌ನ ಮುಖ್ಯ ಕಾರ್ಯದರ್ಶಿಯಾಗಿ 1987ರ ಭಾರತೀಯ ಆಡಳಿತ ಸೇವೆ (ಐಎಎಸ್) ಬ್ಯಾಚ್ ಅಧಿಕಾರಿಯಾದ ವಿನಿ ಮಹಾಜನ್ ಅವರು ಜೂನ್ 26,2020ರಂದು ಆಯ್ಕೆಯಾಗಿದ್ದಾರೆ. ಈ ಮೂಲಕ ಇವರು ಪಂಜಾಬ್ ರಾಜ್ಯದ ಮೊದಲ ಮಹಿಳಾ ಮುಖ್ಯ ಕಾರ್ಯದರ್ಶಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಈ ಮೊದಲು ಇವರು 1995ರಲ್ಲಿ ರೋಪರ್ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಳ್ಳುವ ಮೂಲಕ ಪಂಜಾಬ್ ರಾಜ್ಯದಲ್ಲಿ ಜಿಲ್ಲಾಧಿಕಾರಿ ಹುದ್ದೆಯನ್ನು ಅಲಂಕರಿಸಿದ ಮೊದಲ ಮಹಿಳಾ ಅಧಿಕಾರಿ ಎಂಬ ಹೆಗ್ಗಳಿಕೆಯನ್ನು ಹೊಂದಿದ್ದಾರೆ.

### 26 06 2020 ತ್ರಿಪುರ ಸರ್ಕಾರದಿಂದ "ಮುಖ್ಯಮಂತ್ರಿ ಮಾತೃ ಪುಷ್ಟಿ ಉಪಹಾರ್" ಯೋಜನೆ ಘೋಷಣೆ



ತ್ರಿಪುರದ ರಾಜ್ಯ ಸರ್ಕಾರದಿಂದ ಸಮಾಜ ಕಲ್ಯಾಣ ಮತ್ತು ಸಾಮಾಜಿಕ ಶಿಕ್ಷಣ ಇಲಾಖಾ ಸಚಿವರು ದಿನಾಂಕ ಜೂನ್ 24 ರಂದು "ಮುಖ್ಯಮಂತ್ರಿ ಮಾತೃ ಪುಷ್ಟಿ ಉಪಹಾರ್" ಎಂಬ ನೂತನ ಯೋಜನೆಯನ್ನು ಆರಂಭಿಸುವದಾಗಿ ಘೋಷಿಸಿದ್ದು, ಈ ನೂತನ ಯೋಜನೆಯಡಿಯಲ್ಲಿ ಗರ್ಭಿಣಿ ಮತ್ತು ಬಾಣಂತಿ ಮಹಿಳೆಯರಿಗೆ ಪೌಷ್ಠಿಕಾಂಶದ ಕಿಟ್‌ಗಳನ್ನು ಪೂರೈಸಲು ಉದ್ದೇಶಿಸಲಾಗಿದೆ. ಇನ್ನು ಕೇಂದ್ರ ಸರ್ಕಾರದ ಪ್ರಧಾನ್ ಮಂತ್ರಿ ಮಾತೃ ಬಂಧನ ಯೋಜನೆ ಕೂಡ ರಾಜ್ಯದ ಗರ್ಭಿಣಿ ಮತ್ತು ಬಾಣಂತಿ ಮಹಿಳೆಯರಿಗೆ ಅನ್ವಯವಾಗಲಿದೆ.
ಯೋಜನೆಯ ಮುಖ್ಯ ಉದ್ದೇಶ : ರಾಜ್ಯದಲ್ಲಿ ಶಿಶು ಮತ್ತು ತಾಯಿಯ ಮರಣವನ್ನು ಪ್ರಮಾಣವನ್ನು ಗರಿಷ್ಠ ಮಟ್ಟದಲ್ಲಿ ನಿಯಂತ್ರಿಸುವದು ರಾಜ್ಯ ಸರ್ಕಾರದ ಯೋಜನೆಯ ಉದ್ದೇಶವಾಗಿದೆ.

### 26 06 2020 ರಷ್ಯಾದ ಸಂಸ್ಥೆಗಳಿಂದ 2023 ರಲ್ಲಿ ಬಾಹ್ಯಾಕಾಶಕ್ಕೆ ಮೊದಲ ಪ್ರವಾಸಿಗರನ್ನು ಕರೆದೊಯ್ಯಲು ಯೋಜನೆ



ರಷ್ಯಾದ ರಾಷ್ಟ್ರದ ಕಂಪನಿಗಳಾದ S.P. Korolev Rocket ಮತ್ತು Space Corporation Energia ಬರುವ 2023 ನೆ ವರ್ಷದಲ್ಲಿ ಬಾಹ್ಯಾಕಾಶಯಾನಕ್ಕೆ ವಿಶ್ವದಲ್ಲೇ ಮೊದಲ ಬಾರಿಗೆ ಪ್ರವಾಸಿಗರನ್ನು ಕರೆದೊಯ್ಯುವುದಾಗಿ ಘೋಷಿಸಿದೆ. ಒಪ್ಪಂದದ ಪ್ರಕಾರ, ಎರಡೂ ಕಂಪನಿಗಳ ಜಂಟಿಯಾಗಿ 2023 ರಲ್ಲಿ ಇಬ್ಬರು ಪ್ರವಾಸಿಗರನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ISS) ಕಳುಹಿಸಲಾಗುವುದು.
* ಡೆನ್ನಿಸ್ ಟಿಟೊ (ಯುನೈಟೆಡ್ ಸ್ಟೇಟ್ಸ್‌ನ ಉದ್ಯಮಿ) ವಿಶ್ವದ ಮೊದಲ ಖಾಸಗಿ ಬಾಹ್ಯಾಕಾಶ ಪ್ರವಾಸಿ ಎನಿಸಿಕೊಂಡಿದ್ದಾರೆ.

# Current affairs of June 2020 from KPSC Vaani

**26 06 2020 ನೀತಿ ಆಯೋಗದಿಂದ "ಬಿಹೇವಿಯರ್ ಚೇಂಜ್"(ನಡುವಳಿಕೆ ಬದಲಾವಣೆ) ಅಭಿಯಾನ ಆರಂಭ**




ನೀತಿ ಆಯೋಗವು 'ನ್ಯಾವಿಗೇಟ್ ದಿ ನ್ಯೂ ನಾರ್ಮಲ್' (ಹೊಸ ಸಹಜತೆಯತ್ತ ಸಂಚಾರ) ಎಂಬ ಹೆಸರಿನ ನೂತನ ಅಭಿಯಾನವನ್ನು ಜೂನ್ 25 ರಂದು ಆರಂಭಿಸಿತು. ಬಿಲ್ ಮತ್ತು ಮೆಲಿಂಡಾ ಗೇಟ್ಸ್ ಫೌಂಡೇಶನ್ ನ ಸಹಭಾಗಿತ್ವದೊಂದಿದೆ "ಬಿಹೇವಿಯರ್ ಚೇಂಜ್" ಅಭಿಯಾನವನ್ನು ಆರಂಭಿಸಲಾಗಿದೆ.
ಅಭಿಯಾನದ ಗುರಿ : ಭಾರತವು ಬರುವ ದಿನಗಳಲ್ಲಿ ಲಾಕ್ ಡೌನ್ ತೆರವುಗೊಳಿಸಲಿದ್ದು, ಜನರು ತಮ್ಮ ದೈನಂದಿನ ದಿನಚರಿಯ ಭಾಗವಾಗಿ ಮುಖಗವಸುಗಳನ್ನು ಧರಿಸುವದು ಸೇರಿ ಕೋರೋಣ ಕುರಿತು ಸುರಕ್ಷಿತ ನಡವಳಿಕೆಯನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವದು ಈ ಅಭಿಯಾನದ ಉದ್ದೇಶವಾಗಿದೆ.
* ವೆಬ್ ಪೋರ್ಟಲ್ (http://www.covidthenewnormal.com/): ಇದು COVID 19 ಕುರಿತು ತೆಗೆದುಕೊಳ್ಳಬೇಕಾದ ಸುರಕ್ಷಿತಾ ನಡವಳಿಕೆಗಳ ಮಾನದಂಡಗಳನ್ನು ಒಳಗೊಂಡಿದೆ.

**27 06 2020 ಕೋರೋಣ ಭೀತಿ ಹಿನ್ನೆಲೆ ಅಂಚೆ ಮತಪತ್ರ ಆಯ್ಕೆಗೆ ಇದ್ದ ವಯೋಮಿತಿ ಇಳಿಕೆ**



ನವದೆಹಲಿ : ದೇಶದಲ್ಲಿ ಕೋವಿಡ್ ವ್ಯಾಪಕಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಹಿರಿಯ ನಾಗರಿಕರ ಆರೋಗ್ಯದ ಸುರಕ್ಷತೆ ದೃಷ್ಟಿಯಿಂದ ಮುಂದೆ ಬರಲಿರುವ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಅಂಚೆ ಮೂಲಕ ಮತ ಚಲಾವಣೆಗೆ ಅವಕಾಶ ನೀಡಲಾಗಿರುವ ಅಂಚೆ ಮತಪತ್ರ ಆಯ್ಕೆಗೆ ಇರುವ ವಯೋಮಿತಿಯನ್ನು ಸಡಿಲಿಸಗೊಳಿಸಿ, 65 ಅಥವಾ ಅದಕ್ಕೂ ಹೆಚ್ಚಿನ ವಯೋಮಾನದವರಿಗೆ ಅವಕಾಶ ನೀಡಲಾಗಿದೆ.
* ಈ ಮೊದಲು ಅಂಚೆ ಮೂಲಕ ಮತ ಚಲಾವಣೆಗೆ 80 ವರ್ಷ ಹಾಗು ಅದಕ್ಕೂ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಮಾತ್ರ ಅವಕಾಶ ನೀಡಲಾಗಿತ್ತು.
* ಶೀಘ್ರದಲ್ಲೇ ದೇಶದಲ್ಲಿ ಬಿಹಾರ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಅಲ್ಲಿನ ಹಿರಿಯ ನಾಗರೀಕ ಮತದಾರರು ಈ ತಿದ್ದುಪಡಿಯ ಅನುಕೂಲ ಪಡೆಯಲಿದ್ದಾರೆ ಎಂದು ತಿಳಿದು ಬಂದಿದೆ.
* 65 ಅಥವಾ ಅದಕ್ಕೂ ಮೀರಿದ ವಯಸ್ಸಿನವರಿಗೆ ಕೊರೊನಾ ಬಾಧಿಸುವ ಸಾಧ್ಯತೆ ಹೆಚ್ಚಿರುವ ಕಾರಣ ಈ ತೀರ್ಮಾನಕ್ಕೆ ಬರಲಾಗಿದೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

# Current affairs of June 2020 from KPSC Vaani

### 27 06 2020 ಭಾರತದ ಸ್ಟಾರ್ಟ್‌ಅಪ್ ತವರು ಬೆಂಗಳೂರು



ನವದೆಹಲಿ : ರಾಜ್ಯ ರಾಜಧಾನಿ ಬೆಂಗಳೂರು ನಗರವು ಈಗ ಏಷ್ಯಾದ “ಸಿಲಿಕಾನ್ ಸಿಟಿ’ ಮಾತ್ರವಲ್ಲದೇ, ಸ್ಟಾರ್ಟ್‌ಅಪ್ ಗಳ ತವರು ಎಂದು ಕೂಡ ಹೆಸರಾಗಿದೆ. ಕ್ಯಾಲಿಫೋರ್ನಿಯಾ ಸ್ಟಾರ್ಟ್‌ಅಪ್ ಜಿನೋಮ್ ಎಂಬ ಕಂಪನಿ ಸಿದ್ಧಪಡಿಸಿರುವ “ಜಾಗತಿಕ ಸ್ಟಾರ್ಟ್‌ಅಪ್ ಸೌಲಭ್ಯ ವರದಿ 2020’ರಲ್ಲಿ ಸ್ಟಾರ್ಟ್‌ಅಪ್ ಗಳಿಗೆ ಪೂರಕವಾದ ಸೌಲಭ್ಯ ಕಲ್ಪಿಸುವ ವಿಶ್ವದ ಪ್ರಮುಖ 30 ನಗರಗಳ ಪಟ್ಟಿಯಲ್ಲಿ ಬೆಂಗಳೂರಿಗೆ 26ನೇ ಸ್ಥಾನ ಲಭಿಸಿದೆ.
* ಸ್ಟಾರ್ಟ್‌ಅಪ್ ಗಳಿಗೆ ಪೂರಕ ಸೌಲಭ್ಯ ಕಲ್ಪಿಸುವ ವಿಶ್ವದ ನಗರಗಳ ಪಟ್ಟಿಯಲ್ಲಿ ಬೆಂಗಳೂರಿಗೆ 26ನೇ ಸ್ಥಾನ. ದಿಲ್ಲಿಗೆ 36ನೇ ಸ್ಥಾನ.
* ಯಶಸ್ವೀ ಸ್ಟಾರ್ಟ್‌ಅಪ್ ಗಳ ವಿಶ್ವದ ಅಗ್ರ ನಗರಗಳ ಪಟ್ಟಿಯಲ್ಲಿ ಕ್ಯಾಲಿಫೋರ್ನಿಯಾದ ಸಿಲಿಕಾನ್ ವ್ಯಾಲಿಗೆ ಮೊದಲ ಸ್ಥಾನ. * ಬಂಡವಾಳ, ಹೂಡಿಕೆ ಮತ್ತು ಜಾಗತಿಕ ಪ್ರತಿಭೆಗಳಿಗೆ ಪ್ರವೇಶದಲ್ಲಿ ಲಂಡನ್‌ಗೆ 2ನೇ ಸ್ಥಾನ.

### 27 06 2020 ಆತ್ಮನಿರ್ಭರ ಯುಪಿ ಉದ್ಯೋಗ 125 ದಿನಗಳ ಅಭಿಯಾನಕ್ಕೆ ಪ್ರಧಾನಿಯಿಂದ ಚಾಲನೆ




ಪಾಟ್ನಾ:ದೇಶದಲ್ಲಿ ಕೋರೋಣ ಸೋಂಕಿನಿಂದಾಗಿ ವಿಧಿಸಿದ ಲಾಕ್‌ಡೌನ್ ಕಾರಣದಿಂದಾಗಿ ಹಲವಾರು ವಲಸೆ ಕಾರ್ಮಿಕರು ತಮ್ಮ ಉದ್ಯೋಗ ಕಳೆದುಕೊಂಡು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದನ್ನು ಮನಗಂಡು ಇಂತ ವಲಸೆ ಕಾರ್ಮಿಕರಿಗೆ ಉದ್ಯೋಗ ಒದಗಿಸಲು ಪ್ರಧಾನಿ ನರೇಂದ್ರ ಮೋದಿ ಉತ್ತರಪ್ರದೇಶದಲ್ಲಿ ಆತ್ಮನಿರ್ಭರ ಯೋಜನೆಯಡಿಯಲ್ಲಿ 125 ದಿನಗಳ ವಿಶೇಷ ಉದ್ಯೋಗ ಅಭಿಯಾನಕ್ಕೆ ಚಾಲನೆ ನೀಡಿದರು.
*ಜೂನ್ 20ರಂದು ಭಾರತದ ಆರು ರಾಜ್ಯಗಳಲ್ಲಿ ಪ್ರಾರಂಭವಾದ ಗರಿಬ್ ಕಲ್ಯಾಣ್ ರೋಜರ್ ಅಭಿಯಾನದ ಒಂದು ಭಾಗವಾದ ಆತ್ಮ ನಿರ್ಭರ್ ಉತ್ತರ ಪ್ರದೇಶ ರೋಜ್ ಗಾರ್ ಅಭಿಯಾನವನ್ನು ಪ್ರಧಾನಿ ಚಾಲನೆ ನೀಡಿದರು.

## 27 06 2020 2023ರ ಫಿಫಾ ಮಹಿಳಾ ವಿಶ್ವಕಪ್ ಗೆ ಆತಿಥ್ಯ ನೀಡಲಿರುವ ಆಸ್ಟ್ರೇಲಿಯಾ ನ್ಯೂಜಿಲೆಂಡ್




ಜಿನೆವಾ : 2023 ರಲ್ಲಿ ನಡೆಯುವ ಫಿಫಾ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯನ್ನು ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ರಾಷ್ಟ್ರಗಳಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ. ಇತ್ತೀಚಿಗೆ ನಡೆದ ಫಿಫಾ ಕೌನ್ಸಿಲ್ ಸಭೆಯಲ್ಲಿ ಹೆಚ್ಚಿನ ಮತಗಳು ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನಲ್ಲಿ ಟೂರ್ನಿ ನಡೆಸುವ ನಿರ್ಣಯದ ಪರ ಚಲಾವಣೆಯಾದ ಪರಿಣಾಮ ಈ ರಾಷ್ಟ್ರಗಳಲ್ಲಿ ಫಿಫಾ ವರ್ಲ್ಡ್ ಕಪ್ ಆಯೋಜಿಸಲಾಗುತ್ತೆ. ಮಹಿಳಾ ಫುಟ್‌ಬಾಲ್‌ಗೆ ಉತ್ತೇಜನ ನೀಡುವ ಉದ್ದೇಶದಿಂದ ತಂಡಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದ್ದು ಮುಂದೆ ಬರುವ ಈ ಟೂರ್ನಿಯಲ್ಲಿ ಒಟ್ಟು 32 ಮಹಿಳಾ ತಂಡಗಳು ಪಾಲ್ಗೊಳ್ಳಲಿರುವ ಮೊದಲ ವಿಶ್ವಕಪ್ ಎಂಬ ಹೆಗ್ಗಳಿಕೆ ಪಾತ್ರವಾಗಲಿದೆ.

## 28 06 2020 ಕರ್ತಾರ್‌ಪುರ ಯಾತ್ರೆಗೆ ಅವಕಾಶ ನೀಡಿದ ಪಾಕಿಸ್ತಾನ



ಇಸ್ಲಾಮಾಬಾದ್: ಜಾಗತಿಕವಾಗಿ ವ್ಯಾಪಿಸಿರುವ ಕೋವಿಡ್ ಹಾವಳಿಯಿಂದಾಗಿ ಸ್ಥಗಿತಗೊಂಡಿದ್ದ ಕರ್ತಾರ್‌ಪುರ ಸಾಹಿಬ್ ಗುರುದ್ವಾರ ಯಾತ್ರೆಯನ್ನು ಇದೆ ಜೂನ್ 29ರಿಂದ ಆರಂಭಿಸುವುದಾಗಿ ಪಾಕಿಸ್ತಾನ ಸರ್ಕಾರ ಘೋಷಿಸಿದೆ.
* ಸಿಖ್ ಸಾಮ್ರಾಜ್ಯದ ಸಾಮ್ರಾಟ ಮಹಾರಾಜ ರಂಜಿತ್ ಸಿಂಗ್ ಅವರ ಪುಣ್ಯತಿಥಿಯ (ಜೂನ್ 27) ಸ್ಮರಣಾರ್ಥ ಇದೆ ಜೂನ್ 29 ರಿಂದ ಕರ್ತಾರ್‌ಪುರ ಕಾರಿಡಾರ್ ಅನ್ನು ಮತ್ತೆ ಆರಂಭಿಸಲಾಗುದೆಂದು ಪಾಕ್ ವಿದೇಶಾಂಗ ಸಚಿವ ಶಾ ಮಹ್ಮೂದ್ ಖುರೇಷಿ ಮಾಹಿತಿ ನೀಡಿದ್ದಾರೆ.
* ಸಿಕ್ಖ್ ಯಾತ್ರಿಕರಿಗೆ ಕರ್ತಾರ್‌ಪುರ ಗುರುದ್ವಾರ ಪ್ರವೇಶಕ್ಕೆ ಅವಕಾಶ ನೀಡಲಾಗಿದ್ದು, ಜೂನ್ 29 ರ ಸೋಮವಾರದಿಂದಲೇ ಯಾತ್ರೆ ಪುನಾರಂಭವಾಗುವುದಾಗಿ ಭಾರತ ಸರಕಾರಕ್ಕೂ ಮಾಹಿತಿ ನೀಡಿರುವದಾಗಿ ಅವರು ತಿಳಿಸಿದ್ದಾರೆ.

# Current affairs of June 2020 from KPSC Vaani

## 28 06 2020 2020ರ ಜೂನ್ 28ರಿಂದ ಜುಲೈ 12ರವರೆಗೆ ಸಂಸ್ಕೃತಿ ಸಚಿವಾಲಯದಿಂದ 'ಸಂಕಲ್ಪ ಪರ್ವ' ಅಭಿಯಾನ




ಪ್ರಧಾನಿ ನರೇಂದ್ರ ಮೋದಿಯವರ ಕರೆಯ ಮೇರೆಗೆ 2020 ರ ಜೂನ್ 28 ರಿಂದ ಜುಲೈ 12 ರವರೆಗೆ 'ಸಂಕಲ್ಪ ಪರ್ವ' ಎಂಬ 2 ವಾರಗಳ ಕಾಲ ಮರ ನೆಡುವ ಅಭಿಯಾನವನ್ನು ಆಚರಿಸಲು ಕೇಂದ್ರ ಸಂಸ್ಕೃತಿ ಸಚಿವಾಲಯ ನಿರ್ಧರಿಸಿದೆ ಎಂದು ಕೇಂದ್ರ ಸಂಸ್ಕೃತಿ ರಾಜ್ಯ ಸಚಿವ (ಸ್ವತಂತ್ರ ಉಸ್ತುವಾರಿ) ಪ್ರಹ್ಲಾದ್ ಜೋಶಿ ಅವರು ತಿಳಿಸಿದ್ದಾರೆ. ದೇಶದಲ್ಲಿ COVID 19 ಸಾಂಕ್ರಾಮಿಕ ರೋಗದಿಂದಾಗಿ ಲಾಕ್‌ಡೌನ್ ಜಾರಿಗೊಳಿಸಿದ ಹಿನ್ನೆಲೆ, ಭಾರತವು ಸ್ವಚ್ ಮತ್ತು ಆರೋಗ್ಯಕರ ಪರಿಸರದ ಮಹತ್ವವನ್ನು ಅನುಭವಿಸಿದೆ. "ಸಂಕಲ್ಪ ಪರ್ವ" ಅಭಿಯಾನದಡಿಯಲ್ಲಿ ಸಾಂಸ್ಕೃತಿಕ ಸಚಿವಾಲಯವು ಬಾರ್ಗಡ್, ಅವ್ಲಾ, ಪೆಪಾಲ್, ಅಶೋಕ್ ಮತ್ತು ಬೆಲ್ ಎಂಬ 5ಮರಗಳನ್ನು ನೆಡಲು ಶಿಫಾರಸು ಮಾಡಿದೆ. ಈ 5ಮರಗಳು ದೇಶದ ಗಿಡಮೂಲಿಕೆಗಳ ಪರಂಪರೆಯನ್ನು ಪ್ರತಿನಿಧಿಸುತ್ತವೆ.

## 28 06 2020 'AtOneClick' ಕೈಗಾರಿಕೆಗಳಿಗಾಗಿ ಗುಜರಾತ್ ಸರ್ಕಾರದಿಂದ ನೂತನ ಯೋಜನೆ



ಗುಜರಾತ್ ರಾಜ್ಯದ 12,247 ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ದೊಡ್ಡ ಕೈಗಾರಿಕಾ ಘಟಕಗಳಿಗೆ (ಜವಳಿ ಉದ್ಯಮ ಸೇರಿದಂತೆ), ಗುಜರಾತ್ ಸರ್ಕಾರವು ಆನ್ಲೈನ್ ನಲ್ಲಿ ಹಣದ ನೆರವು ನೀಡಲು ಜೂನ್ 26 2020ರಂದು 'ಅಟ್ ಒನ್ ಕ್ಲಿಕ್' ಎಂಬ ನೂತನ ಯೋಜನೆಯನ್ನು ಆರಂಭಿಸಿದೆ. ಗುಜರಾತ್ ರಾಜ್ಯದ ಈಗಿನ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರು ಈ ನೂತನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಯೋಜನೆ ಬಗ್ಗೆ : 'ಅಟ್ ಒನ್ ಕ್ಲಿಕ್' ಎನ್ನುವುದು ಆನ್‌ಲೈನ್ ನೆರವು ನೀಡುವ ಯೋಜನೆಯಾಗಿದ್ದು, ಇದಕ್ಕಾಗಿ ಗುಜರಾತ್ ಸರ್ಕಾರ MSME ಗಳು ಮತ್ತು ದೊಡ್ಡ ಕೈಗಾರಿಕಾ ಘಟಕಗಳಿಗೆ (ಜವಳಿ ಉದ್ಯಮ ಸೇರಿದಂತೆ) 1,369 ಕೋಟಿ ರೂ. ಗಳಷ್ಟು ಆರ್ಥಿಕ ನೆರವು ನೀಡುವದಾಗಿದೆ.

# Current affairs of June 2020 from KPSC Vaani

**28 06 2020 ಜೂನ್ 27: ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ (MSME) ದಿನ**




ದಿನಾಂಕ 6 ಏಪ್ರಿಲ್ 2017ರಂದು ವಿಶ್ವಸಂಸ್ಥೆಯು ಪ್ರತಿವರ್ಷ ಜೂನ್ 27ಅನ್ನು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ (MSME) ದಿನವಾಗಿ ಆಚರಿಸಲು ನಿರ್ಣಯವನ್ನು ಅಂಗೀಕರಿಸಿತು. ಈ ದಿನವನ್ನು ಮೊದಲ ಬಾರಿಗೆ 2017 ರಲ್ಲಿ ಆಚರಿಸಲಾಯಿತು, ಪ್ರಸ್ತುತ ಈ ವರ್ಷ 4 ನೇ MSME ದಿನವನ್ನು ಆಚರಿಸಲಾಯಿತು.

**29 06 2020 ದಾಖಲೆಪುಟ ಸೇರಿದ 709 ಕಿ.ಮೀ ಉದ್ದದ ಮಿಂಚು**



ಸ್ವಿಜರ್‌ಲ್ಯಾಂಡ್ : ಅಮೆರಿಕದ ಸ್ವಿಜರ್‌ಲ್ಯಾಂಡ್‌ನಲ್ಲಿ ಕೇಂದ್ರ ಕಚೇರಿ ಹೊಂದಿರುವ ವಿಶ್ವ ಹವಾಮಾನ ಇಲಾಖೆಯು ಇದೀಗ ದಾಖಲೆ ಮಾಡಿರುವ ಮಿಂಚಿನ ಕುರಿತಾಗಿ ವಿವರಣೆ ನೀಡಿದೆ. ಇಲ್ಲಿಯವರೆಗಿನ ಬಲು ಉದ್ದದ ಮಿಂಚು ಎಂದು ಎನಿಸಿಕೊಂಡಿರುವುದು 2018ರ ಅಕ್ಟೋಬರ್ 31ರಂದು ಕಾಣಿಸಿಕೊಂಡಿದೆ. ಬ್ರೆಜಿಲ್‌ನ ಆಗಸದಲ್ಲಿ ಈ ಮಿಂಚು ಕಾಣಿಸಿಕೊಂಡಿದ್ದು, ಇದು 709 ಕಿ.ಮೀ. ಉದ್ದವಿರುವುದಾಗಿ ವಿಶ್ವ ಹವಾಮಾನ ಇಲಾಖೆ ತಿಳಿಸಿದ್ದು, ಪ್ರಸ್ತುತ ಇದನ್ನು ದಾಖಲೆಯ ಪಟ್ಟಿಗೆ ಸೇರಿಸಲಾಗಿದೆ.
* ಅದೇ ರೀತಿ ಉತ್ತರ ಅರ್ಜೆಂಟಿನಾದ ಆಗಸದಲ್ಲಿ ಮೂಡಿದ ಮಿಂಚು. 16.73 ಸೆಕೆಂಡ್‌ಗಳ ಕಾಲ ಈ ಮಿಂಚುವ ಮೂಲಕ ಇಲ್ಲಿಯವರೆಗೆ ಕಾಣಿಸಿಕೊಂಡಿರುವ ಅತಿ ಹೆಚ್ಚು ಕಾಲ ಮಿಂಚಿದ ಮಿಂಚು ಎನ್ನುವ ದಾಖಲೆಗೆ ಪಾತ್ರವಾಗಿದೆ.

# Current affairs of June 2020 from KPSC Vaani

**29 06 2020 ಹಿರಿಯ ಸಾಹಿತಿ ಗೀತಾ ನಾಗಭೂಷಣ್ ವಿಧಿವಶ**



ಕಲಬುರ್ಗಿಯಲ್ಲಿ ವಾಸವಿದ್ದ ಕನ್ನಡದ ಹಿರಿಯ ಸಾಹಿತಿ ಗೀತಾ ನಾಗಭೂಷಣ್ ಅವರು ದಿನಾಂಕ ಜೂನ್ 28 ರ ಭಾನುವಾರದಂದು ತಮ್ಮ 78ನೇ ವಯಸ್ಸಿನಲ್ಲಿ ಮೃತಪಟ್ಟಿದ್ದಾರೆ.
*1942, ಮಾರ್ಚ್ 25ರಂದು ಕಲಬುರ್ಗಿಯ ಸಾವಳಗಿ ಗ್ರಾಮದಲ್ಲಿ ಜನಸಿದ ಗೀತಾ ನಾಗಭೂಷಣ್ ಜನಿಸಿದರು.
* ಇವರು 27 ಕಾದಂಬರಿಗಳನ್ನ ಬರೆದಿದ್ದಾರೆ ಅವರ 'ಬದುಕು' ಕಾದಂಬರಿಗೆ ಕೇಂದ್ರ ಸಾಹಿತಿ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 50 ಸಣ್ಣ ಕಥೆಗಳು ಮತ್ತು 12 ನಾಟಕ ಕೃತಿಗಳನ್ನೂ ಅವರು ರಚಿಸಿದ್ದಾರೆ.
* ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಮೊದಲ ಮಹಿಳೆ ಎಂಬ ಹೆಗ್ಗಳಿಕೆ ಗೀತಾ ನಾಗಭೂಷಣ್ ಅವರದ್ದಾಗಿದೆ.
* ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಮೊದಲ ಸಾಹಿತಿ.
* ನಾಡೋಜ ಪ್ರಶಸ್ತಿ ಪಡೆದ ಮೊದಲ ಮಹಿಳಾ ಸಾಹಿತಿ.
* ಭಾರತೀಯ ಭಾಷಾ ಪರಿಷತ್‌ನ ಪ್ರಶಸ್ತಿ ಪಡೆದ ಮೊದಲ ಮಹಿಳೆ ಎಂಬ ಗೌರವಕ್ಕೆ ಇವರು ಪಾತ್ರರಾಗಿದ್ದಾರೆ.
* ಗದಗ್‌ನಲ್ಲಿ 2010ರಲ್ಲಿ ನಡೆದ 76ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.
* ಗುಲ್ಬರ್ಗ ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿ ಪಡೆದಿರುತ್ತಾರೆ.

**30 06 2020 ವಿಶ್ವ ಬ್ಯಾಂಕ್ ಸಮೂಹದೊಂದಿಗೆ ತಮಿಳುನಾಡಿನಲ್ಲಿ ಎರಡು ಯೋಜನೆಗಳಿಗೆ ಭಾರತ ಸರ್ಕಾರದಿಂದ ಒಪ್ಪಂದ**




ತಮಿಳುನಾಡು ರಾಜ್ಯದ ನಗರ ಬಡವರಿಗೆ ಕೈಗೆಟುಕುವ ವಸತಿ ಸೌಲಭ್ಯವನ್ನು ಒದಗಿಸಲು ವಿಶ್ವ ಬ್ಯಾಂಕ್ ಸಮೂಹ ಮತ್ತು ಭಾರತ ಸರ್ಕಾರದ ನಡುವೆ ಒಪ್ಪಂದ ಎರಡು ಒಪ್ಪಂದಗಳಿಗೆ ಸಹಿ ಹಾಕಲಾಯಿತು. (i) ತಮಿಳುನಾಡು ವಸತಿ ಸೌಲಭ್ಯ ಬಲಪಡಿಸುವ ಕಾರ್ಯಕ್ರಮ (ii) ತಮಿಳುನಾಡು ವಸತಿ ಮತ್ತು ಆವಾಸಸ್ಥಾನ ಅಭಿವೃದ್ಧಿ ಯೋಜನೆ. ಈ ಎರಡೂ ಯೋಜನೆಗಳಿಗೆ ವಿಶ್ವ ಬ್ಯಾಂಕ್ ಸಮೂಹದ International Bank for Reconstruction and Development (IBRD) ನಿಂದ ಸಾಲ ಪಡೆಯಲಾಗುವದು.

### 30 06 2020 ಮಹಾರಾಷ್ಟ್ರ ಪ್ರಾರಂಭಿಸಿದ ಪ್ರಾಜೆಕ್ಟ್ ‘ಪ್ಲಾಟಿನಾ’ ಅಡಿಯಲ್ಲಿ ವಿಶ್ವದ ಅತಿದೊಡ್ಡ ಪ್ಲಾಸ್ಮಾ ಥೆರಪಿ ಪ್ರಯೋಗ



ವಿಶ್ವದ ಅತಿದೊಡ್ಡ ಕಾನ್ವೆಲೆಸೆಂಟ್ ಪ್ಲಾಸ್ಮಾ ಥೆರಪಿ ಟ್ರಯಲ್ ಯೋಜನೆಯನ್ನು ಮಹಾರಾಷ್ಟ್ರ ರಾಜ್ಯ ಸರ್ಕಾರವು 2020 ಜೂನ್ 29 ರಂದು ಆರಂಭಿಸಿದ್ದು, ಈ ಯೋಜನೆಗೆ ಮಹಾರಾಷ್ಟ್ರ ಸರ್ಕಾರ "ಪ್ಲಾಟಿನಾ" ಎಂದು ನಾಮಕರಣ ಮಾಡಿ ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಚಾಲನೆ ನೀಡಿದರು. ಈ ಯೋಜನೆಯಡಿಯಲ್ಲಿ ಮಹಾರಾಷ್ಟ್ರ ರಾಜ್ಯ ಸರ್ಕಾರದ ಒಟ್ಟು 21 ಕೋವಿಡ್ 19 ಆಸ್ಪತ್ರೆಗಳಲ್ಲಿ ದಾಖಲಾದ ಕೋರೋಣ ಪಾಸಿಟಿವ್ ರೋಗಿಗಳಿಗೆ ಪ್ಲಾಸ್ಮಾ ಚಿಕಿತ್ಸೆ ನೀಡಲು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ಶಿಫಾರಸ್ಸು ನೀಡಿದೆ. COVID 19 ಸಾಂಕ್ರಾಮಿಕ ರೋಗದಿಂದ ಮಹಾರಾಷ್ಟ್ರವು ಭಾರತದಲ್ಲಿ ಹೆಚ್ಚು ಹಾನಿಗೊಳಗಾದ ರಾಜ್ಯವಾಗಿರುವುದರಿಂದ, ಪ್ಲಾಟಿನಾ ಯೋಜನೆಯನ್ನು ಮಹಾರಾಷ್ಟ್ರ ರಾಜ್ಯವು ಆರಂಭಿಸಿದ್ದು, ಯೋಜನೆಯಡಿ ಪ್ಲಾಸ್ಮಾ ಥೆರಪಿ ಪ್ರಯೋಗಗಳ ವೆಚ್ಚವನ್ನು ಮಹಾರಾಷ್ಟ್ರ ರಾಜ್ಯ ಸರ್ಕಾರ ಭರಿಸಲಿದ್ದು, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ, ಯೋಜನೆಗಾಗಿ 16.85 ಕೋಟಿ ರೂ ಅನುದಾನ ನೀಡಲಾಗಿದೆ.

### 30 06 2020 ಜಂಟಿ ಉದ್ಯಮ ಜಲವಿದ್ಯುತ್ ಯೋಜನೆಗಾಗಿ ಭಾರತ ಮತ್ತು ಭೂತಾನ್ ನಡುವೆ ಒಪ್ಪಂದ



Kholongchhu Hydro Energy Limited ಮತ್ತು ಭೂತಾನ್ ಸರ್ಕಾರದ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಗಿದ್ದು, ಈ ರಿಯಾಯಿತಿ ಒಪ್ಪಂದವು Kholongchhu Hydro Energy Limited ಗೆ ಭೂತಾನ್ ಸರ್ಕಾರದ ವ್ಯಾಪ್ತಿಯಲ್ಲಿ ಖೋಲಾಂಗ್‌ಚು ಜಲವಿದ್ಯುತ್ ಯೋಜನೆ (Kholongchhu Hydroelectric Project) ಯನ್ನು ನಿರ್ವಹಣೆ ಮಾಡುವ ಹಕ್ಕನ್ನು ಒದಗಿಸುತ್ತದೆ. ಖೊಲೊಂಗ್ಚು ಜಲವಿದ್ಯುತ್ ಯೋಜನೆ ಈ ಯೋಜನೆಯು ಪೂರ್ವ ಭೂತಾನ್‌ನ ಟ್ರಾಶಿಯಾಂಗ್ಟ್ಸೆ ಜಿಲ್ಲೆಯ ಖೊಲೊಂಗ್ಚು ನದಿಯಲ್ಲಿದೆ. 600 ಮೆಗಾವ್ಯಾಟ್ ನದಿಯ ಜಲವಿದ್ಯುತ್ ಯೋಜನೆಯ ಚಾಲನೆಯು 2025 ರ ದ್ವಿತೀಯಾರ್ಧದ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

# Current affairs of June 2020 from KPSC Vaani

### 30 06 2020 ಭಾರತದಲ್ಲಿ 9 ಲಕ್ಷ ಉದ್ಯೋಗ ಸೃಷ್ಟಿಗೆ PM FME ಯೋಜನೆ ಆರಂಭ




ಭಾರತದಲ್ಲಿ ಕೋರೋಣ ಸೋಂಕಿನಿಂದಾಗಿ ವಿಧಿಸಿರುವ lockdown ಸಮಯದಲ್ಲಿ ಪ್ರಧಾನಿಯಿಂದ ಘೋಷಣೆಯಾದ ಆತ್ಮ ನಿರ್ಭರ್ ಭಾರತ್ ಅಭಿಯಾನದ ಅಂಗವಾಗಿ, ಪ್ರೈಮ್ ಮಿನಿಸ್ಟರ್ ಮೈಕ್ರೋ ಫುಡ್ ಪ್ರೊಸೆಸಿಂಗ್ ಎಂಟರ್‌ಪ್ರೈಸಸ್ (PM FME) ಯೋಜನೆಯನ್ನು 2020 ಜೂನ್ 29 ರಂದು ಆರಂಭಿಸಲಾಯಿತು. ಈ ಯೋಜನೆಯನ್ನು ಕೇಂದ್ರ ಆಹಾರ ಸಂಸ್ಕರಣಾ ಕೈಗಾರಿಕಾ ಸಚಿವ ಹರ್ಸಿಮ್ರತ್ ಕೌರ್ ಬಾದಲ್ ಅವರು ಚಾಲನೆ ನೀಡಿದರು. ಈ ಯೋಜನೆಗೆ ದಿನಾಂಕ 2020ರ ಮೇ 20ರಂದು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿತ್ತು.
* ಈ ಯೋಜನೆಯಿಂದ 9 ಲಕ್ಷ ನುರಿತ ಮತ್ತು ಅರೆ ನುರಿತ ಉದ್ಯೋಗಗಳು ಸೃಷ್ಟಿಯಾಗಲಿದ್ದು, ಈ ಯೋಜನೆಗೆ ಒಟ್ಟು 35000 ಕೋಟಿ ರೂ ಹೂಡಿಕೆ ಮಾಡಲಾಗಿದೆ.

### 30 06 2020 129 ವರ್ಷಗಳ ಬಳಿಕ ಪತ್ತೆಯಾದ ಹೆಬಿಯಸ್ ಪಿಯಾಲಿ ಎಂಬ ಅಪರೂಪದ ಹಾವು



ಗುವಾಹಟಿ: ಸುಮಾರು 129 ವರ್ಷಗಳಿಂದ ಕಣ್ಮರೆಯಾಗಿದ್ದ ಅಪರೂಪದ ಜಾತಿಯ ಹೆಬಿಯಸ್ ಪಿಯಾಲಿ ಎಂಬ ವೈಜ್ಞಾನಿಕ ಹೆಸರಿನ ಹಾಗೂ ಅಸ್ಸಾಂ ಕೀಲ್ ಬ್ಯಾಕ್ ಎಂದು ಕರೆಯಲ್ಪಡುವ ಹಾವನ್ನು ಭಾರತೀಯ ವನ್ಯಜೀವಿ ಸಂಸ್ಥೆಯ ತಂಡವೊಂದು ಪತ್ತೆಹಚ್ಚಿದೆ. ಈ ಹಾವು 1891 ರಲ್ಲಿ ಅಸ್ಸಾಂನ ಸಿಬ್ಸಗರ್ ಜಿಲ್ಲೆಯಲ್ಲಿ ಬ್ರಿಟಿಷ್ ಟೀ ಪ್ಲಾಂಟರ್ ಸ್ಯಾಮ್ಯುಯಲ್ ಎಡ್ವರ್ಡ್ ಪೀಲ್ ಎಂಬಾತನಿಗೆ ಕಡೆಯದಾಗಿ ಕಾಣಿಸಿಕೊಂಡಿತ್ತು.
* 50 ರಿಂದ 60 ಸೆ.ಮೀ ಉದ್ದ ಬೆಳೆಯುವ ಅಸ್ಸಾಂ ಕೀಲ್‌ಬ್ಯಾಕ್, ಒಂದು ವಿಷವಿಲ್ಲದ ಹಾವು.
* ಅಸ್ಸಾಂ ಅರುಣಾಚಲ ಪ್ರದೇಶದ ಗಡಿಗೆ ಹೊಂದಿಕೊಂಡಿರುವ 118 ಕಿ.ಮೀ ವ್ಯಾಪ್ತಿ ಹೊಂದಿರುವ ಪೋಬಾ ಸಂರಕ್ಷಿತ ಅರಣ್ಯದಲ್ಲಿ ಈ ಹಾವು ದೊರೆತಿದೆ.

# Current affairs of June 2020 from KPSC Vaani

## 30 06 2020 ಧಾರವಾಡ ಕೃಷಿ ವಿವಿಗೆ ಪ್ರಶಸ್ತಿ



ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಜೋಳ ಸಂಶೋಧನಾ ವಿಭಾಗಕ್ಕೆ ದೇಶದ 'ಅತ್ಯುತ್ತಮ ಸಂಶೋಧನಾ ಕೇಂದ್ರ' ಪ್ರಶಸ್ತಿಗೆ ಪಡೆದಿದೆ. ಧಾರವಾಡ ಕೃಷಿ ವಿಶ್ವ ವಿದ್ಯಾಲಯದ ಜೋಳ ಸಂಶೋಧನಾ ವಿಭಾಗವು 'ದೇಶದ ಒಟ್ಟಾರೆ ಜೋಳದ ಅಭಿವೃದ್ಧಿಗೆ ನೀಡಿರುವ ಕೊಡುಗೆಗಳನ್ನ ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಜೋಳ ಸಂಶೋಧನಾ ವಿಭಾಗವು 1929 ರಿಂದ ಕಾರ್ಯಾರಂಭ ಮಾಡಿದ್ದು ಸುವರ್ಣ ಸಂಭ್ರಮ ವರ್ಷಾಚರಣೆಯ ಸಂದರ್ಭದಲ್ಲಿ ಪ್ರಶಸ್ತಿ  ಬಂದಿದ್ದು  ವಿಶೇಷವಾಗಿದೆ ಎಂದು ಕುಲಪತಿ ಡಾ. ಮಹಾದೇವ ಚೆಟ್ಟಿ ಮಾಹಿತಿ ನೀಡಿದ್ದಾರೆ.

## 30 06 2020 ಕೇಂದ್ರ ಸರ್ಕಾರದಿಂದ 59 ಚೀನಾ ಆಯಪ್‌ಗಳಿಗೆ ನಿಷೇಧ ಹೇರಿ ಆದೇಶ




ನವದೆಹಲಿ : ಚೀನಾದ ಪ್ರಮುಖ ಆಪ್ ಗಳಾದ ಟಿಕ್‌ಟಾಕ್, ಶೇರ್‌ಇಟ್, ಹೆಲೊ, ಲೀಕೀ, ಯುಸಿ ಬ್ರೌಸರ್ ಮತ್ತು ವಿ ಚಾಟ್ ಸೇರಿದಂತೆ ಪ್ರಮುಖ 59 ಮೊಬೈಲ್ ಆಯಪ್‌ಗಳನ್ನು ಕೇಂದ್ರ ಸರ್ಕಾರ ನಿಷೇಧಿಸಿ ಆದೇಶ ಹೊರಡಿಸಿದೆ. ಈ ಆಯಪ್ ಗಳು ಭಾರತದಲ್ಲಿ ಬಳಕೆಯಾಗುತ್ತಿದ್ದು ಇದರಿಂದಾಗಿ 'ರಾಷ್ಟ್ರೀಯ ಭದ್ರತೆ ಮತ್ತು ಸಾರ್ವಭೌಮತೆಗೆ ಧಕ್ಕೆ ಉಂಟಾಗುವ ಕಾರಣ ಇವುಗಳನ್ನು ನಿಷೇಧಿಸಲಾಗಿದೆ' ಎಂದು ಕೇಂದ್ರಮಾಹಿತಿತಂತ್ರಜ್ಞಾನಸಚಿವಾಲಯ ಮಾಹಿತಿನೀಡಿದೆ.Androidಮತ್ತುiosಆಪರೇಟಿಂಗ್ ಸಿಸ್ಟಮ್ ಉಳ್ಳ ಪ್ಲಾಟ್‌ಫಾರ್ಮ್ ನಲ್ಲಿ ಈ ಆಯಪ್‌ಗಳು ಲಭ್ಯವಿದ್ದು, ಇವುಗಳ ಸರ್ವರ್‌ಗಳು ವಿದೇಶದಲ್ಲಿರುವದರಿಂದ ದತ್ತಾಂಶ ಸಂಗ್ರಹ, ಬಳಕೆದಾರರ ಪ್ರೊಫೈಲಿಂಗ್ ಮಾಹಿತಿಗಳು ಸೋರಿಕೆಯಾಗುವ ಸಾಧ್ಯತೆ ಹಿನ್ನೆಲೆ ಈ ಆಯಪ್‌ಗಳನ್ನು ನಿಷೇಧಿಸಿರುವದಾಗಿ ಎಂದು ಸಚಿವಾಲಯವು ತಿಳಿಸಿದೆ.

# Current affairs of June 2020 from KPSC Vaani

